UNIVERSAL
LIBRARY
OU_200791
UNIVERSAL
LIBRARY

OUP—381—5-8-74—15,000

OSMANIA UNIVERSITY LIBRARY

Call No. K 81.6 Accession No. K 4771

Author G61N

Title

This book should be returned on or before the date last marked below

# ನವ್ಯಧ್ವನಿ

ಪ್ರತಿಭಾ ಗ್ರಂಥಮಾಲೆ, ಧಾರವಾಡ

ಪ್ರತಿಭಾ ಗ್ರಂಥಮಾಲೆ, ಧಾರವಾಡ. — ಹದಿನಾಲ್ಕನೆ ವರುಷದ ಪ್ರಥಮ ಕಿರಣ

# ನವ್ಯಧ್ವನಿ

ಸಂಪಾದಕರು :

ವಿ. ಕೃ. ಗೋಕಾಕ ಬಿ. ಎ. (ಆರ್ನ್ಸ)

ಚೆನ್ನವೀರ ಕಣವಿ ಎಂ. ಎ.

೧೫ ಆಗಸ್ಟ ೧೯೫೬

ಬೆಲೆ : ೧—೮—೦

# ಮಾಲೆಯ ಮಾತು

ಇದು ನಮ್ಮ ಪ್ರತಿಭಾ ಗ್ರಂಥಮಾಲೆಯ ೧೪ನೆಯ ವರುಷದ ಮೊದಲ ನೆಯ ಕಿರಣ. ನಮ್ಮ ಕನ್ನಡ ಸಾಹಿತ್ಯ ಇಂದು ಬಹುಮುಖವಾಗಿ ಕಾಣಿಸಿ ಕೊಳ್ಳುತ್ತಿರುವಂತೆ, ನವ್ಯ ಮುಖವನ್ನು ತಳೆಯುತ್ತಿದೆ. ನಾಟಕ- ಕಥಾ-ಕಾದಂಬರಿಗಳನ್ನು ನೀಡುತ್ತಿದ್ದ ನಮ್ಮ ಮಾಲೆ, ಕಾವ್ಯಪ್ರಪಂಚದ ನವ್ಯತೆಯ ದರ್ಶನವನ್ನೂ ವಾಚಕರಿಗೆ ಮಾಡಿಸಲೋಸುಗ ಇದೀಗ ಈ 'ನವ್ಯಧ್ವನಿ' ಯನ್ನು ತನ್ನ ಓದುಗರಿಗೆ ಕೊಡುತ್ತಿದೆ. ಇದರಿಂದ ಮಾಲೆಯ ಸಾಹಿತ್ಯ—ಪ್ರಾತಿನಿಧಿಕತೆ ಹೆಚ್ಚೀತೆಂಬ ಸಮಾಧಾನ ನಮಗಿದೆ.

ಪ್ರಾಚಾರ್ಯ ಶ್ರೀ. ವಿ. ಕೃ. ಗೋಕಾಕರೂ ಶ್ರೀ. ಕಣವಿಯವರೂ ಈ ನವ್ಯಕವನಗಳನ್ನು ಸಂಕಲಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಅನೇಕ ಕವಿ ಮುಖಗಳಿಂದ ಹೊರಟ ಚತುರ್ಮುಖ 'ನವ್ಯಧ್ವನಿ'ಯಿದು ಸಾಕಷ್ಟು ಪ್ರಾತಿನಿಧಿಕವಾಗಿರುವುದನ್ನು ವಾಚಕರು ಕಾಣಬಹುದು. ಅಲ್ಲದೆ ಶ್ರೀ. ಗೋಕಾಕರ ಅಭ್ಯಾಸಪೂರ್ಣವಾದ ದೀರ್ಘ ಪ್ರಸ್ತಾವನೆಯು ಒಟ್ಟು ನವ್ಯಕಾವ್ಯ ಮಾರ್ಗದ-ಈ ಸಂಕಲನದ ಪರಿಚಯಕ್ಕೆ ಸಹಾಯಕಾರಿಯಾಗಿದೆ. ಇಂತಹ ಸುಂದರ ಕೃತಿಯೊಂದನ್ನು ಅಣಿಗೊಳಿಸಿತ್ತುದಕ್ಕಾಗಿ ಈ ಸಂಕಲನದ ಸಂಪಾದಕದ್ವಯಕ್ಕೆ ನಾವು ಕೃತಜ್ಞರಾಗಿದ್ದೇವೆ.

ವಾಚಕವರ್ಗದ ವಿವಿಧ ಅಭಿರುಚಿಗಳನ್ನು ತಣಿಸುವ ನಮ್ಮೀ ಪ್ರಯತ್ನವನ್ನು ಸುಜ್ಞ ಗ್ರಾಹಕರು ಸ್ವಾಗತಿಸುವರೆಂದು ನಂಬಿದ್ದೇವೆ.

ಸಂಪಾದಕ

**ಪ್ರತಿಭಾ ಗ್ರಂಥಮಾಲೆ**

ಮುದ್ರಕರು : ಪ್ರಕಾಶಕರು :

ಭಾಲಚಂದ್ರ ವೆಂಕಟೇಶ ಘಾಣೇಕರ

**ಪ್ರತಿಭಾ ಮುದ್ರಣ, ಧಾರವಾಡ**

# ಪೀಠಿಕೆ

## ೧

ನವ್ಯಕಾವ್ಯದ ಸಂಕಲನವೊಂದು ಈಗ ಸಕಾಲಿಕವಾಗಬಹುದೆಂದು ಮಾತೆತ್ತಿದಾಗ ಅದು ಗೆಳೆಯ ಚೆನ್ನವೀರ ಕಣವಿಯವರಿಗೆ ಒಪ್ಪಿಗೆಯಾಯಿತು. ನಾವಿಬ್ಬರೂ ಕೂಡಿ, ಇತ್ತೀಚೆಗೆ ನವ್ಯಕಾವ್ಯದ ರೀತಿಯಲ್ಲಿ ಬರೆಯುತ್ತಿರುವ ಕವಿಗಳ ಯಾದಿಯೊಂದನ್ನು ತಯಾರಿಸಿದೆವು. ತಮ್ಮ ಅಪ್ರಕಾಶಿತ ಕವನಗಳನ್ನು ( ಒಂದೆರಡು ) ಈ ಸಂಕಲನಕ್ಕಾಗಿ ಕಳುಹಿಸಬೇಕೆಂದು ಬಿನ್ನವಿಸಿದೆವು. ಅನೇಕ ಕವಿಸ್ನೇಹಿತರು ನಮ್ಮ ಬಿನ್ನಹವನ್ನು ಮನ್ನಿಸಿ ಈ ಕಾರ್ಯಕ್ಕೆ ನೆರವಾದರು. ಮೊದಲು ಅವರೆಲ್ಲರಿಗೂ ನಾವು ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಅವರ ನೆರವಿಲ್ಲದೆ ಈ ಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಅದರಂತೆ ಶ್ರೀ. ಭಾಲಚಂದ್ರ ಘಾಣೇಕರರು ಈ ಸಂಕಲನವನ್ನು ಪ್ರಸಿದ್ಧಿಸುವ ಹೊಣೆ ಹೊತ್ತುಕೊಂಡು ಅಷ್ಟೇ ಭಾರವಾದ ಇನ್ನೊಂದು ಚಿಂತೆಯಿಂದ ನಮ್ಮನ್ನು ಪಾರು ಮಾಡಿದ್ದಾರೆ. ಅವರ ಸಹಾಯವನ್ನೂ ನಾವಿಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇವೆ.

## ೨

ಕಳೆದ ಶತಮಾನದ ಕೊನೆಯ ಭಾಗದಲ್ಲಿ ಪ್ರತೀಕನಿಷ್ಠ (Symbolist) ಕವಿಗಳ ಗುಂಪೊಂದು ಫ್ರಾನ್ಸ್ ದೇಶದಲ್ಲಿ ಬೆಳಕಿಗೆ ಬಂದಿತು. ಮೆಲಾರ್ಮ್ ಎಂಬಾತ ಅವರಲ್ಲಿ ವಿಶೇಷ ಪ್ರತಿಭಾವಂತನಾದ ಕವಿಯಾಗಿ ಹೋದ. ಒಂದು ರೀತಿಯಿಂದ ಯುರೋಪಿಯನ್ ನವ್ಯಕಾವ್ಯದ ಉಗಮ ಮೆಲಾರ್ಮ್‌ನ ಕವನಗಳಲ್ಲಿದೆಯೆನ್ನಬಹುದು. ಕಾವ್ಯರಚನೆಯಲ್ಲಿ ಎರಡು ವಿಧಗಳನ್ನು ಕಾಣಬಹುದೆಂದು ಶ್ರೀ ಅರವಿಂದರು ತಮ್ಮೊಂದು ಓಲೆಯಲ್ಲಿ ಹೇಳಿದ್ದಾರೆ. ಅರ್ಥವು ಸ್ಫುಟವಾಗುವಂತೆ ಬರೆದು ಬರಿ ಅರ್ಥವನ್ನು ಗ್ರಹಿಸಬಲ್ಲವರಿಗೆ ಅಷ್ಟಾದರೂ

ಕವನ ತಮಗೆ ತಿಳಿಯಿತೆಂಬ ಸಮಾಧಾನವನ್ನು ಹುಟ್ಟಿಸುವದು ಒಂದು ಹಾದಿ. ಏಕೆಂದರೆ ಕಾವ್ಯದ ತಿರುಳು ಬರಿ ಅರ್ಥವನ್ನು ಮೀರಿ ರಸದಲ್ಲಿಯೂ ಧ್ವನಿಯಲ್ಲಿಯೂ ವಾಸವಾಗಿರುತ್ತದೆ. ಪ್ರತೀಕವನ್ನು ಸ್ಫುಟವಾಗಿರಿಸಿ, ಅರ್ಥವನ್ನು ಹುದುಗಿಸಿ ಇಲ್ಲವೆ ಬರಿ ಸೂಚಿಸಿ ಕವನವನ್ನು ರಚಿಸುವದು ಇನ್ನೊಂದು ಕಾವ್ಯ ಮಾರ್ಗ. ಇದೂ ಸಮರ್ಥನೀಯವಾದ ಮಾರ್ಗ. ಈ ಮಾರ್ಗಕ್ಕಿರುವ ಒಂದು ಎಚ್ಚರಿಕೆಯೆಂದರೆ ಬರಿ ಮಂಜು ಇಲ್ಲವೆ ಅಸ್ಫುಟತೆಯ ನಿರಾಕರಣ. ಆಯ್ದು ಕೊಂಡ ಪ್ರತೀಕಗಳು ನಿಚ್ಚಳವಾಗಿರಬೇಕು. ಆಳವಾದ ಧ್ವನಿಯಿಂದ ಅವು ತುಂಬಿರಬೇಕು. ಎರಡನೆಯ ಮಾರ್ಗದಲ್ಲಿ ಮೆಲಾರ್ಮ್‌ನು ಒಂದು ರೀತಿಯಿಂದ ಆದ್ಯಪ್ರವರ್ತಕನಾದ. ಅವನಿಗಿಂತ ಮುಂಚೆ 'ಇಂಪ್ರೆಸನಿಸ್ಟ್' ಕಾವ್ಯವಿದ್ದಿತು. ಬೌದ್ಧಿಕ ವಿವರಣೆ ಇಲ್ಲವೆ ಅರ್ಥವನ್ನು ಹುದುಗಿಸಿ ಶುದ್ಧ ದರ್ಶನ ಇಲ್ಲವೆ ಚೈತ್ಯ ಸ್ಪಂದನವನ್ನಷ್ಟೆ ಕಾವ್ಯದಲ್ಲಿ ವ್ಯಕ್ತಗೊಳಿಸುವದು ಅದರ ಗುರಿಯಾಗಿದ್ದಿತು. ಆಂತರಿಕ ಇಲ್ಲವೆ ಬಾಹ್ಯ ಜಗತ್ತಿನ ಒಂದು ವಸ್ತುವಿನ ಅವಲೋಕನದಲ್ಲಿ ಕವಿಯ ಇಂದ್ರಿಯದೃಷ್ಟಿ ಎರಡೋ ಮೂರೋ ಮಹತ್ತಮ ಲಕ್ಷಣಗಳನ್ನು ಕ್ಷಣಾರ್ಧದಲ್ಲಿ ಗ್ರಹಿಸುತ್ತಿತ್ತು. ಕಲ್ಪಕತೆಯು ಗ್ರಹಿಸಿದ ಈ ಲಕ್ಷಣಗಳನ್ನು ಇಂಪ್ರೆಸನಿಸ್ಟ್ ಕಾವ್ಯ ಒಡಮೂಡಿಸುತ್ತಿತ್ತು. ಪ್ರತೀಕನಿಷ್ಠ ಕವಿಗಳೂ ಮೆಲಾ-ರ್ಮ್‌ನ ಕಾಲದಲ್ಲಿದ್ದರು. ಅವರು ಬರಿ ವರ್ಣಕ (Subjective) ಇಲ್ಲವೆ ಸಾಂಪ್ರದಾಯಕ ಪ್ರತೀಕಗಳನ್ನು ಬಳಸುತ್ತಿರಲಿಲ್ಲ. ಮೆಲಾರ್ಮ್‌ನ ಪ್ರತೀಕಗಳು ಆಂತರಿಕ ಇಲ್ಲವೆ ವರ್ಣಕವಾಗಿರುತ್ತಿದ್ದವೆಂಬುದು ನಿಜ. ಆದರೆ ಸಾಮಾನ್ಯ ಜನತೆಯ ಅನುಭವದಾಚೆಗಿರುವ ಉನ್ಮನ ಪ್ರಜ್ಞೆಯ ಅನುಭವವನ್ನು ಸೂಚಿಸುವದಕ್ಕಾಗಿ ಮೆಲಾರ್ಮ್‌ನು ಈ ವರ್ಣಕ ಪ್ರಜ್ಞೆಗಳನ್ನು ಬಳಸುತ್ತಿದ್ದ. ತನ್ನ ಕಾವ್ಯದಲ್ಲಿ ಮೆಲಾರ್ಮ್‌ನು 'ಇಂಪ್ರೆಸನಿಸ್ಟ್' ಹಾಗೂ ಪ್ರತೀಕನಿಷ್ಠ ಪದ್ಧತಿಗಳನ್ನು ಒಂದುಗೂಡಿಸಿದ. ಇದೇ ಅವನ ವೈಶಿಷ್ಟ್ಯ. ಅವನ ಪ್ರತೀಕಗಳು ಕಾವ್ಯದ ಸಿಂಹಾಸನದಲ್ಲಿ ತಾವೇ ವಿರಾಜಿಸುತ್ತವೆ. ಅವು ಸೂಚಿಸಿದ ವಸ್ತುವಾಗಲಿ ಮನಃಸ್ಥಿತಿಯಾಗಲಿ ಕಾವ್ಯದಲ್ಲಿ ಪ್ರಮುಖವಾಗಿ ಮುಂದೆ ಬರುವದಿಲ್ಲ. ಪ್ಲೇಟೋನ ನಾಮರೂಪಗಳ ವೈಕುಂಠದಲ್ಲಿಯ ಒಂದು ರೂಪ(Form)ವನ್ನೇ ಈ ಪ್ರತೀಕವು ಸೂಚಿಸುತ್ತದೆ. ಇಲ್ಲಿ ಒಂದು ಉದಾಹರಣೆಯನ್ನು ಪರಿಶೀಲಿಸಬಹುದು. ತನ್ನೊಂದು ಕವಿತೆಯಲ್ಲಿ ಮೆಲಾರ್ಮ್‌ನು ಸ್ತ್ರೀಯ ಹೊಂಗೂದಲು

ಇಲ್ಲವೆ ಕಂದಿಗೂದಲನ್ನು ಒಂದು ಪ್ರತೀಕವಾಗಿ ಉಪಯೋಗಿಸಿದ್ದಾನೆ. ಪ್ರಾಣ ಶಕ್ತಿಯು ಎರಡು ವಿಧದ ಸೌಂದರ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ನಾವು ಉದಾತ್ತೀಕರಿಸಿದರೆ ಅದು ಸಂಯಮಿತ ಶಕ್ತಿಯಾಗುತ್ತದೆ. ರೂಢಿಗತ ವಾಗಿ ಕಾಮದಲ್ಲಿಯೇ ಅದರ ಬಳಕೆಯಾದರೆ ಅದು ಅನುದಾತ್ತವಾಗುತ್ತದೆ. ಇಳಿಬಿಟ್ಟ ಕೂದಲಿನ ಚೆಲುವು ಕಾಮದ–ಅನುದಾತ್ತ–ಪ್ರಾಣಶಕ್ತಿಯ ಚೆಲುವು. ಹೆರಳಾಗಿಸಿ ಕಿರೀಟದಂತೆ ಕಟ್ಟಿದ ಕೂದಲು ಊರ್ಧ್ವಮುಖ ಪ್ರಾಣಶಕ್ತಿಯ ಚೆಲುವು. ಆದರೆ ಮೆಲಾರ್ಮ್ ತನ್ನ ಕವಿತೆಯಲ್ಲಿ ಪ್ರಾಣಶಕ್ತಿಯನ್ನು ಉಲ್ಲೇಖಿ ಸುವದಿಲ್ಲ ಸಹ. ಹೊಂಗೂದಲಿನ ಎರಡು ಕ್ರಮಗಳನ್ನು ಮಾತ್ರ ವರ್ಣಿಸುತ್ತಾನೆ:

"The hair a flight of flame to the extreme
West of desires with all that mass unwound
Settles (a dying into a diadem)
Towards its ancient earth, the brow
encrowned...."

[ ಶ್ರೀ ಅರವಿಂದ ಮಂದಿರ ಆನ್ಯುಯಲ್ ಹನ್ನೆರಡನೆಯ ಸಂಚಿಕೆಯಲ್ಲಿ ಶ್ರೀ. ಕೆ. ಡಿ. ಸೆಠ್ನಾ ಅವರು ಮಾಡಿದ ಅನುವಾದದಿಂದ ಇದನ್ನು ತೆಗೆದು ಕೊಳ್ಳಲಾಗಿದೆ. ]

ಮೆಲಾರ್ಮ್‌ನಿಗೆ ರೊಮ್ಯಾಂಟಿಕ್ ಕವಿಗಳ ಆಂತರಿಕ ವರ್ಣಕತೆಯು ಒಪ್ಪಿಗೆಯಾಗಿರಲಿಲ್ಲ.

"I have now grown impersonal and am no longer the stephane whom you have known but a turn which the spiritual universe possesses for seeing and developing itself through that which has been I." ಎಂದು ಮೆಲಾರ್ಮ್ ತನ್ನ ಸ್ನೇಹಿತನಿಗೆ ಬರೆದಿದ್ದ. ವ್ಯಕ್ತ್ಯತೀತ ಪ್ರಜ್ಞೆಯ ರೀತಿ ಅವನ ಕಾವ್ಯಮಾರ್ಗಕ್ಕೆ ಆವಶ್ಯಕವಾಗಿದ್ದಿತು.

ಮೆಲಾರ್ಮ್‌ನ ಕಾವ್ಯಪ್ರತಿಭೆಯ ಒಂದು ಪೈಲಿನಿಂದ ಕಲೆಗಾಗಿ ಕಲೆಯೆಂಬ ವಾದ ಇಂಗ್ಲಂಡಿನಲ್ಲಿ ಹುಟ್ಟಿಕೊಂಡಿತು. ಆದರೆ ಅದರ ಇನ್ನೊಂದು ಪ್ರಭಾವದ

ವಲಯದಲ್ಲಿ ನವ್ಯಕಾವ್ಯದ ಮಾದರಿಯು ಬೆಳೆಯಿತು. ಹಾ:ಪ್‌ಕಿನ್ಸ್‌ನಿಂದ ಡಿಲಾನ್ ಟಾ:ಮಸ್‌ನ ವರೆಗೆ ನವ್ಯಕಾವ್ಯದ ಅನೇಕ ಶೈಲಿಗಳು ಬೆಳೆದು ಬಂದವು. ಆಂಗ್ಲ ನವ್ಯಕಾವ್ಯದಲ್ಲಿ ಉನ್ಮನ ಪ್ರಜ್ಞೆಗಿಂತ ಔದ್ಯೋಗಿಕ ಯುಗದ ಸ್ತಿಮಿತ ಮನಸ್ಸಿಗೆ, ನಿರಾಶೆಗೆ, ಭ್ರಮನಿರಸನೆಗೆ ಪ್ರಧಾನತೆ ದೊರೆಯಿತು. ಟಿ. ಎಸ್. ಇಲ್ಯಟ್ಟನ ಈಚೆಗಿನ ಕವನಗಳಲ್ಲಿ ಈ ಪ್ರಜ್ಞೆ ಮತ್ತೆ ನವ್ಯವಾಗಿ ರೂಪ ಗೊಂಡಿದೆ. ಒಮ್ಮೊಮ್ಮೆ ಸೂಕ್ಷ್ಮ ನಿರೀಕ್ಷೆಯೇ ಆಂಗ್ಲ ನವ್ಯಕಾವ್ಯದಲ್ಲಿ ಪ್ರಜ್ಞೆಯ ಬದಲು ಸಿಂಹಾಸನಸ್ಥವಾಯಿತು. ಅರ್ಥವು ಹುದುಗಿ ಪ್ರತೀಕ ಪ್ರಮುಖವಾದರೂ ದರ್ಶನಕ್ಕಿಂತ ಬುದ್ಧಿಗೇ ಒಮ್ಮೊಮ್ಮೆ ಮೇಲುಗೈಯಾಯಿತು. ಛಂದಸ್ಸು–ಶೈಲಿಗಳ ವಿಷಯದಲ್ಲಿ ಒಬ್ಬೊಬ್ಬ ನವ್ಯಕವಿಯು ಹೊಸ ರೀತಿಗೆ ಸರಿ ಹೋಗುವಂತೆ ತನ್ನ ಸಾಧನ–ಸಾಮಗ್ರಿಗಳನ್ನು ಅಳವಡಿಸಿಕೊಂಡನು. ಪ್ರತಿ ಯೊಬ್ಬ ನವ್ಯಕವಿಯು ತನ್ನವೇ ಆದ ಶೈಲಿ–ಛಂದಸ್ಸುಗಳ ಪ್ರಕಾರಗಳನ್ನು ಬೆಳೆ ಯಿಸಿಕೊಂಡಿದ್ದಾನೆ. ಆದರೆ ನವ್ಯಕಾವ್ಯದ ಕ್ರಮ ಇಲ್ಲವೆ ತಂತ್ರವು ಒಂದೆಂಬು ದನ್ನು ಮಾತ್ರ ಯಾರೂ ಅಲ್ಲಗಳೆದಿಲ್ಲ.

೩

ಮೊನ್ನೆ ಮೊನ್ನೆ ದಿಲ್ಲಿಯಲ್ಲಾದ ಆಕಾಶವಾಣಿ ಸಾಹಿತ್ಯ ಸಮಾರೋಹದಲ್ಲಿ ಒಂದು ಮಾತು ಪ್ರಮುಖವಾಗಿ ಕಂಡುಬಂತು. ಹಿಂದೆ ಪ್ರಗತಿಶೀಲ ಚಳವಳಿ ಯಂತೆ ಕಳೆದ ಹತ್ತು–ಹದಿನೈದು ವರ್ಷಗಳಲ್ಲಿ ನವ್ಯಕಾವ್ಯದ ಆಂದೋಲನ ಎಲ್ಲ ಭಾರತೀಯ ಭಾಷೆಗಳಲ್ಲಿಯೂ ತಲೆಯೆತ್ತಿದೆ. ಪ್ರಗತಿಶೀಲರ ಮೇಲೆ ಕಾರ್ಲ್ ಮಾರ್ಕ್ಸ್, ಲೆನಿನ್ನರ ಪ್ರಭಾವ ಬಿದ್ದಂತೆ ನವ್ಯಕವಿಗಳು ಫ್ರೆಂಚ್ ಪ್ರತೀಕನಿಷ್ಠ ಕವಿಗಳ ಹಾಗು ಆಂಗ್ಲ ನವ್ಯರಿಂದ ಸ್ಫೂರ್ತಿಯನ್ನು ಪಡೆದಿದ್ದಾರೆ. ಆಸಾಮದಿಂದ ಕನ್ಯಾಕುಮಾರಿಯವರೆಗೆ ನವ್ಯತೆಯ ಕಹಳೆ ಕೇಳಿದೆಯಲ್ಲದೆ ಪ್ರಯೋಗ ಪ್ರಾರಂಭ ವಾಗಿ ಈಗ ಮಾಗುತ್ತಲಿದೆ. ಈ ಸಮಾರೋಹದಲ್ಲಿ ಅನ್ಯ ಸಾಹಿತ್ಯಗಳಿಂದ ಭಾರತೀಯ ಸಾಹಿತ್ಯಗಳ ಮೇಲೆ ಆದ ಪ್ರಭಾವವನ್ನು ವಿಮರ್ಶಿಸುವ ವಿಭಾಗದ ನೇತೃತ್ವ ನನ್ನ ಕಡೆಗೆ ಬಂದುದರಿಂದ ಈ ವಿಷಯವನ್ನು ಕುರಿತು ಒಂದು ವರದಿ ಯನ್ನು ನಾನು ತಯಾರಿಸಬೇಕಾಯಿತು. ಆಗ ಹಾಗೂ ಭಾರತೀಯ

ಯುದ್ಧೋತ್ತರ ಕಾವ್ಯದ ಇತಿಹಾಸವನ್ನು ಹದಿಮೂರು ಮುಖಗಳಿಂದ ಕೇಳು ವಾಗ ಈ ವಿಷಯ ಸ್ಫುಟವಾಯಿತು. ಅತೃಪ್ತಿ–ನಿರಾಶೆಗಳನ್ನು ಭಾರತೀಯರು ಪರಕೀಯರಿಂದ ಕಲಿಯಬೇಕಾಗಿರಲಿಲ್ಲ. ಭಾರತದಲ್ಲಿಯ ದುಃಖ ಹಿಮಾಲಯ ದಂತೆ ಬಿದ್ದುಕೊಂಡಿದೆ. ಆದರೆ ಅಭಿವ್ಯಕ್ತಿಯ ಮಾರ್ಗವಿಶೇಷ ಸಮುದ್ರದಾಚೆ ಯಿಂದ ಬಂದುದು ನಿಜ. ಆ ಓಟ, ಮಾಟ, ನಡಿಗೆ ಭಾರತೀಯ ಸಾಹಿತ್ಯ ಗಳಿಗೆ ನವೀನ ರಸಾನುಭವವನ್ನು ತಂದಿತು. ಬಂಗಾಲಿಯಲ್ಲಿ ಅಮಿಯ ಚಕ್ರ ವರ್ತಿ ವಿಷ್ಣು ದೇ ಮೊದಲಾದವರು, ಮರಾಠಿಯಲ್ಲಿ ಮರ್ಢೇಕರ ಹಾಗು ಕರಂದೀಕರರು ಈ ಹಾದಿಯಲ್ಲಿ ಕೀರ್ತಿಯನ್ನು ಸಂಪಾದಿಸಿದ್ದಾರೆ. ನವ್ಯ ಕವಿತೆ ಗಳು ಮೊದಲು ಎಲ್ಲ ಭಾರತೀಯ ಭಾಷೆಗಳಲ್ಲಿಯೂ ಅಗಮ್ಯವಾದಂತೆ ಕಂಡವು. ಆದರೆ ಇತ್ತೀಚೆಗೆ ಓದುಗರ ತಿಳಿವಳಿಕೆ ತಿಳಿಯಾದಂತೆ ಕವಿಗಳ ಕಲಾವಂತಿ ಕೆಯೂ ಹದಕ್ಕೆ ಬಂದು ನವ್ಯತೆಯು ಗಮ್ಯವಾಗತೊಡಗಿದೆ. ಇಲ್ಯಟ್ಟನ Waste Land ಹಾಗು ಡಿಲಾನ್ ಟಾ:ಮಸ್‌ನ ಕೆಲವು ಕವಿತೆಗಳನ್ನು ಶ್ರೀ-ಶ್ರೀ ಹಾಗು ಆರುದ್ರ ಎಂಬವರು ತೆಲುಗಿನಲ್ಲಿ ಅನುವಾದಿಸಿದ್ದಾರೆ. ಬಂಗಾಲಿಯ ಲ್ಲಿಯೂ ಈ ಕವಿಗಳ ಕವಿತೆಗಳು ಅನುವಾದಿತವಾಗಿವೆ. ಸುಧೀನ ದತ್ತ ಎಂಬ ವರು ರಿಲ್ಕರ ಕವಿತೆಗಳನ್ನೂ ಬಂಗಾಲಿಯಲ್ಲಿ ಭಾಷಾಂತರಿಸಿದ್ದಾರೆ. ಬಂಗಾಲಿ ಯಲ್ಲಿಯೂ, ಮರಾಠಿಯಲ್ಲಿಯೂ ಮೆಲಾರ್ಮ್‌ನ ಕೆಲವು ಕವಿತೆಗಳು ಅನು ವಾದಿತವಾಗಿವೆ.

ಹೀಗೆ ನವ್ಯತೆಯು ಬರಿ ಕನ್ನಡದಲ್ಲಿಯೇ ಎದ್ದ ಗೊಂದಲವಲ್ಲ. ಅದು ಗೊಂದಲವೇ ಆಗಿದ್ದರೆ, ಭಾರತದ ತುಂಬೆಲ್ಲ ಅದು ಎದ್ದಿದೆ. ಭಾರತೀಯ ಸಾಹಿತ್ಯಗಳ ವೈವಿಧ್ಯದಲ್ಲಿ ಐಕ್ಯತೆಯ ಸ್ವರವೊಂದು ಸದಾ ಮಿಡಿಯುತ್ತಿರುತ್ತದೆ. ನವ್ಯತೆಯು ಭಾರತದ ಸ್ವಾತಂತ್ರ್ಯೋತ್ತರ ಐಕ್ಯತೆಯ ಒಂದು ಭಾಗವಾಗಿದೆ.

೪

ಕನ್ನಡದಲ್ಲಿ ನವ್ಯಕಾವ್ಯದ ಪ್ರಾದುರ್ಭಾವವನ್ನು ನನ್ನ 'ನವ್ಯತೆ ಹಾಗು ಕಾವ್ಯಜೀವನ' ಎಂಬ ಗ್ರಂಥದಲ್ಲಿ ವಿಶದಗೊಳಿಸಲು ಹವಣಿಸಿದ್ದೇನೆ. (ಸರ್ವಜ್ಞನೂ ಒಂದು ದೃಷ್ಟಿಯಿಂದ ಹೇಗೆ ನವ್ಯ ಕವಿಯೆಂಬುದನ್ನು ಅಲ್ಲಿ ಪ್ರತಿ ಪಾದಿಸಿದ್ದೇನೆ.) ಆದರೆ ನವ್ಯಕಾವ್ಯ ಖಾದಿ, ಸಂಪೂರ್ಣವಾಗಿ ದೇಶೀಯ ವಸ್ತು

ವೆಂಬ ವಾದವನ್ನು ಒಪ್ಪಲಾಗುವದಿಲ್ಲ. ಆಧುನಿಕ ಕಾವ್ಯದಂತೆ ಇಂಗ್ಲಿಷಿನ ಮುಖಾಂತರ ಅದು ನಮ್ಮೆಡೆಗೆ ಬಂದಿತು. ಕನ್ನಡದಲ್ಲಿ ಇಂದಿನ ನವ್ಯ ಕವಿಗಳೆಲ್ಲ ಆಂಗ್ಲ ಸಾಹಿತ್ಯವನ್ನು ಅಭ್ಯಸಿಸಿದವರು. ಇನ್ನು ಮೇಲೆ ಬರೆಯುವವರು ಈ ಕವಿಗಳ ರೀತಿಯನ್ನಾದರೂ ಅರಗಿಸಿಕೊಳ್ಳತಕ್ಕವರು. ಆದರೆ ಸರ್ವಜ್ಞನಲ್ಲಿ ಕನ್ನಡತೆಯೇ ನವ್ಯವಾದಂತೆ ನವ್ಯಕಾವ್ಯ ಕನ್ನಡತನವನ್ನು ಪಡೆಯಬಹುದು. ಆ ಹಾದಿಯಲ್ಲಿಯೇ ಇಂದು ಪ್ರಯತ್ನಗಳು ನಡೆದಿವೆ.

ವಾಸ್ತವಿಕ ಇಲ್ಲವೆ ಅವಾಸ್ತವಿಕ ಪ್ರಜ್ಞೆಯು 'ನವ್ಯ'ವೆಂದು ನಾವು ಗೆರೆಯೆಳೆಯಲಾರೆವು. ಪ್ರಜ್ಞೆಯು ಪರಂಪರಾನುಗತಿಕವಾಗಬಹುದು; ಇಲ್ಲವೆ ನವ್ಯ ಅಥವಾ ನವೀನವಾಗಬಹುದು. ಈ ನವ್ಯ ಇಲ್ಲವೆ ನವೀನ ಪ್ರಜ್ಞೆ ಬರಿ 'ನವ್ಯ' ಕಾವ್ಯದಲ್ಲಿಯಷ್ಟೇ ಏಕೆ, ಆಧುನಿಕ ಕಾವ್ಯದಲ್ಲಿಯೂ ವ್ಯಕ್ತವಾಗಬಹುದು. ಇಲ್ಲಿ ನಾನು 'ನವ್ಯ' ಶಬ್ದಕ್ಕೆ ಕಲ್ಪಿಸಿದ ಎರಡು ಅರ್ಥಗಳನ್ನು ೧೯೫೦ರ ಕಾವ್ಯಗೋಷ್ಠಿಯ ಭಾಷಣದಲ್ಲಿಯೂ ಬಳಸಿಕೊಂಡಿದ್ದೆ. ಬಹಳವಾದರೆ ನಾವಿಷ್ಟು ಹೇಳಬಲ್ಲೆವು : ಪರಂಪರಾನುಗತಿಕ ಪ್ರಜ್ಞೆಗಿಂತ ನವೀನಪ್ರಜ್ಞೆಯೇ ನವ್ಯಕಾವ್ಯದಲ್ಲಿ ವಾಡಿಕೆಯಾಗಿ ಮೂಡಬಲ್ಲದು. ಇಂದಿನ ಭಾರತೀಯ ಪ್ರಜ್ಞೆ ಹೊಸತು ನಿಜ; ಆದರೆ ಅದು ಬರಿ ನವ್ಯಕಾವ್ಯದಲ್ಲಿ ಮೂಡಬೇಕಾಗಿಲ್ಲ.

ಹೀಗೆಯೇ ವಸ್ತು–ಶೈಲಿ–ಛಂದಸ್ಸುಗಳ ವಿಷಯ. ಯಾವ ವಸ್ತುವಾದರೂ ಯಾವ ಕಾವ್ಯಮಾರ್ಗಕ್ಕೂ ಸಾಮಗ್ರಿಯಾಗಬಲ್ಲದು. ಬರಿ ಆಂತರಿಕ, ಬರಿ ಸಾಮಾಜಿಕ,—ಹೀಗೆ ವಸ್ತುನಿರ್ಬಂಧ ಸಾಧ್ಯವಿಲ್ಲ. ಉಳಿದ ಕಾವ್ಯಮಾರ್ಗಗಳಂತೆ ನವ್ಯ ಮಾರ್ಗವಾದರೂ ಆಂತರಿಕ ಸಾಮಾಜಿಕ ವಸ್ತುಗಳನ್ನು ಕೂಡಿಯೇ ಬಳಸಿಕೊಳ್ಳಬಲ್ಲದು. ಬರಿ ನಿರಾಶೆ, ಬರಿ ಆಸೆ,—ಹೀಗೆ ನವ್ಯಕಾವ್ಯೋದಯದ ಮೂಡುಗಳನ್ನು ನಾವು ನಿರ್ಣಯಿಸಲಾರೆವು. ಆ ಮೂಡುಗಳು ವ್ಯಕ್ತಿಗತ, ಯುಗನಿರ್ಣಯಿತ. ಆದರೆ ನವ್ಯಕಾವ್ಯವು ಒಂದು ವಿಧಾನ, ಒಂದು ತಂತ್ರ. ಯಾವ ಯುಗದಲ್ಲಿಯೂ ಅದು ಬಳಕೆಗೆ ಬರಬಲ್ಲದು. ನಿರಾಶೆಯನ್ನು ತಳೆದಿದ್ದ ನವ್ಯಕವಿಯೇ ಮುಂದೆ ಟಿ. ಎಸ್. ಇಲ್ಯಟ್‌ನಂತೆ ಆಶಾವಾದಿಯಾಗಬಲ್ಲ. ಆದರೆ ಒಂದು ಮಾತನ್ನು ಮಾತ್ರ ನಾವು ಹೇಳಬಲ್ಲೆವು. ಪ್ರಗತಿಶೀಲ ಕವಿ 'ಸಾಮಾಜಿಕ' ವಸ್ತುಗಳ ಕಡೆಗೆ ಹೆಚ್ಚಾಗಿ ಒಲಿಯುತ್ತಾನೆ. ಒಂದು ರೀತಿಯಿಂದ ಪ್ರಗತಿಶೀಲತೆಯಲ್ಲಿ ರೂಪ ಇಲ್ಲವೆ ಆಕೃತಿಯ ಹೊಸತನದ ಕಡೆಗೆ ಲಕ್ಷ್ಯ

ವಿದ್ದರೂ ಸಾಮಾಜಿಕ ಪುನರ್ವ್ಯವಸ್ಥೆ ಅದರ ಮೂಲಗುರಿ. ಇದು ಮಿತಿ ಮೀರಿದಾಗ 'ಪ್ರಗತಿ' ಸಾಮಾಜಿಕವಿದ್ದಂತೆ ಆಂತರಿಕವೂ ಆಗದೆ ಪೂರ್ಣತೆಯನ್ನು **ಪ**ಡೆಯಲಾರದೆಂಬುದನ್ನು ನೆನೆಯಬೇಕಾಗುತ್ತದೆ. ಪ್ರಗತಿಶೀಲತೆಯ ಈ ಸಾಮಾಜಿಕ ಒತ್ತಡ ನವ್ಯಕಾವ್ಯದಲ್ಲಿ ಕಂಡುಬಂದರೂ ಆಶ್ಚರ್ಯವಲ್ಲ. ಹೀಗೆ ಆಂತರಿಕತೆ–ಸಾಮಾಜಿಕತೆಗಳ ಸಮಾನತೆಯನ್ನು ಒಪ್ಪಿದಾಗ ನವ್ಯತೆಯ ಈ ಒಲವನ್ನು ನಾವು ಪರಿಗಣಿಸಬಹುದು. ಆದರೆ ವಸ್ತುವು ಆಂತರಿಕ ಇಲ್ಲವೆ ವಾಸ್ತವಿಕವಾಗಿದ್ದರೂ ಕಾವ್ಯದ ತಿರುಳು ಆ ವಸ್ತುವಿನ archimage ಇಲ್ಲವೆ **ಕಾರಣರೂಪ**ವನ್ನು ಕಾಣುವ ದರ್ಶನದಲ್ಲಿದೆ. ನವ್ಯತೆಯು ಇದನ್ನು ನೇರವಾಗಿ–ಅರ್ಥದ ನಿಚ್ಚಣಿಕೆಯ ಸಹಾಯವಿಲ್ಲದೆ–ಒಡಮೂಡಿಸುವ ವಿಧಾನದಲ್ಲಿದೆ.

ಶೈಲಿಯ ವಿಷಯವೂ ಸ್ವಾರಸ್ಯವಾಗಿದೆ. ಆಧುನಿಕ ಕಾವ್ಯದಲ್ಲಿ—ಬೇಂದ್ರೆಯವರ ಜಾನಪದ ಗೀತಗಳಲ್ಲಿ ಹಾಗು ರತ್ನನ ಪದಗಳಲ್ಲಿ— ಬಳಕೆ ಮಾತಿನ ಪ್ರಯೋಗವಾಗಿತ್ತು. ಪ್ರಗತಿಶೀಲತೆಯು ಸುಸಂಸ್ಕೃತರ ಬಳಕೆ ಮಾತನ್ನು ತನ್ನ ಶೈಲಿಯ ಮೂಲಸಾಮಗ್ರಿಯನ್ನು ಮಾಡಿಕೊಂಡು ನವೀನ ಕಾವ್ಯರಚನೆಗೆ ಮೊದಲು ಮಾಡಿತು. **ಸಮುದ್ರ ಗೀತೆಗಳು, ಬಾಳದೇಗುಲದಲ್ಲಿ** ಹಾಗು **ರಸಋಷಿ** ಮೊದಲಾದ ಸಂಗ್ರಹ–ಸಂಕಲನಗಳ ಶೈಲಿ ಈ ಜಾತಿಯದು. ಮಾಸ್ತಿಯವರ ಕಾವ್ಯಶೈಲಿ ಮೊದಲಿನಿಂದ ಈ ದಾರಿಯಲ್ಲಿ ಸಾಗಿತ್ತು. ನವ್ಯಕಾವ್ಯ ಇದನ್ನು ಒಪ್ಪಿಕೊಂಡಿತು. ಇದರಲ್ಲಿ ಇನ್ನೂ ಕೆಲವು ನವೀನಾಂಶಗಳನ್ನು ತಂದು ಸೇರಿಸಿತು. ಉದ್ಧೃತ ಪಙ್ತಿಗಳ ರೀತಿ ಮಧುರಚೆನ್ನರ '**ನನ್ನ ನಲ್ಲ**'ದಷ್ಟು ಹಳೆಯದು. ಅದು ಇಲ್ಲಿ ಪ್ರಮುಖ ಲಕ್ಷಣವಾಗಿ ಇಂಗ್ಲಿಷಿನ ಮೆರುಗನ್ನೂ ಪಡೆಯಿತು. ವಿರಾಮಚಿಹ್ನಗಳ ವಿಶೇಷತೆಗಳೂ ಅಚ್ಚುಕೂಟದ ಚಮತ್ಕಾರಗಳೂ ನವ್ಯ ಶೈಲಿಯನ್ನು ಇನ್ನಿಷ್ಟು ಅಸಾಮಾನ್ಯವಾಗಿಸಿದವು. ಪಾರಿಭಾಷಿಕ ಶಬ್ದಗಳು ಇಲ್ಲಿ ಒಂದು ಹೊಸ ಕ್ರೀಡಾಂಗಣವನ್ನು ಕಂಡವು. ಆದರೆ ಕಾವ್ಯಶೈಲಿಯ ಮೂಲಗುಣ ಅದರ ಮಾಂತ್ರಿಕತೆ, ಜೀವನವನ್ನು ಕಲೆಯಾಗಿ ಪಲ್ಲಟಿಸುವ ಪವಾಡ. ಇದಿಲ್ಲದೆ ಶೈಲಿಯು ನವ್ಯವಾಗಬಹುದು; ಕಾವ್ಯವಾಗಲಾರದು. ಇಂದಿನ ನವ್ಯ ಕೃತಿಗಳಲ್ಲಿ ಈ ಪವಾಡ ಅಲ್ಲಲ್ಲಿ ಸಾಧಿಸದೆ ಹೋಗಿದ್ದರೆ ಆಶ್ಚರ್ಯವಲ್ಲ. ಆದರೆ ಸಾಧಿಸಿದಲ್ಲಿ ಅದೊಂದು **ನವ್ಯ** ಶೈಲಿಯಾಗಿದೆಯೆಂಬುದನ್ನೂ ನಾವು ಮರೆಯಬಾರದು.

ನವ್ಯಶೈಲಿಯನ್ನು ಕುರಿತು ಇನ್ನೊಂದು ಮಹತ್ವದ ಮಾತನ್ನು ನೆನೆಯಬೇಕಾಗಿದೆ. ಅನೇಕ ಹುರುಳುನುಡಿಗಳಿಗೆ ಈ ಶೈಲಿ ತವರಾಗುತ್ತದೆ. ಒಂದು ರೀತಿಯಿಂದ ಇಂತಹ ಹುರುಳುನುಡಿಗಳಲ್ಲಿಯೇ ನವ್ಯತೆಯ ಒಂದು ಪಾಲು ಶಕ್ತಿ ವ್ಯಕ್ತವಾಗುತ್ತದೆ. ಈ ಪೀಠಿಕೆಯಲ್ಲಿ ಮುಂದೆ ಉದ್ಧೃತವಾದ ಸಾಲುಗಳನ್ನು ಓದಿ ಸಹ ಈ ಮಾತಿನ ಅರ್ಥ ಮಾಡಿಕೊಳ್ಳಬಹುದು. ಇಂತಹ ಹುರುಳುನುಡಿಗಳಲ್ಲಿ ಹೊಸತಾದ— ಅಚ್ಚರಿಗೊಳಿಸುವ— ಪ್ರತಿಮೆಗಳು ಬಳಕೆಗನ್ನಡದೊಡನೆ ಕೂಡಿಕೊಂಡು ಒಂದು ಹೊಸ ರಸಾನುಭವವನ್ನು ಕೊಡುತ್ತವೆ.

ಛಂದಸ್ಸಿನ ವಿಷಯವೂ ವಿಚಾರಣೀಯವಾಗಿದೆ. ಕೆಲವರು ಸ್ವಚ್ಛಂದ ಛಂದ ನವ್ಯಕಾವ್ಯದ ವಿಶೇಷ ಛಂದವೆಂದು ತಿಳಿದುಕೊಂಡಂತಿದೆ. ಮುಕ್ತ ಛಂದಸ್ಸಿನ ಮೇಲಿನ ಕೋಪವನ್ನು ಕೆಲವರು ನವ್ಯಕಾವ್ಯದ ಮೇಲೆ ಹಾಯಿಸಿದ್ದಾರೆ. ಮುಕ್ತಛಂದವು ಹದಿನಾಲ್ಕು ವರ್ಷಗಳ ಹಿಂದೆಯೇ **ಸಮುದ್ರಗೀತ** ಗಳಲ್ಲಿ ರೂಪ ತಾಳಿತು. ಇದರಲ್ಲಿಯ ಕೆಲವು ಗೀತಗಳು ೧೯೩೭ರಲ್ಲಿಯೇ **ಸಮುದ್ರದಾಚೆಯಿಂದ** ದಲ್ಲಿ ಪ್ರಕಟವಾದವು. ಈ ಪ್ರಯೋಗದ ಹೊಣೆಯನ್ನು ಹೊತ್ತವರು ಅದರ ಪ್ರವರ್ತಕರಾದ ವಿಟ್‌ಮನ್, ಡಿ. ಎಚ್. ಲಾ:ರೆನ್ಸ್ ಮೊದಲಾದವರೊಡನೆ ದಂಡನೆಗೆ ಅರ್ಹರು. ಕನ್ನಡದಲ್ಲಿಯ ಪ್ರಯೋಗಗಳು ಆಂಗ್ಲ ಮುಕ್ತಛಂದದ ಮಟ್ಟಕ್ಕೆ ಬಂದಿರಲಿಕ್ಕಿಲ್ಲ, ಇಷ್ಟು ಮಾತ್ರಕ್ಕೆ ಮುಕ್ತ ಛಂದದ ಛಂದೋಮಾರ್ಗವನ್ನೆ ನಾವು ದುಂಡುಸುತ್ತಿ ದಂಡಿಸಲಾರೆವು. ನವ್ಯಕಾವ್ಯ ಸ್ವಚ್ಛಂದ ಛಂದವನ್ನು ಬಳಸಿದರೆ ಪ್ರಗತಿಶೀಲ ಕಾವ್ಯವೂ ಅದನ್ನು ಬಳಸಿದೆಯೆಂಬುದನ್ನು ನಾವು ನೆನೆಯಬೇಕು.

ನವ್ಯಕಾವ್ಯದಲ್ಲಾದ ವಿಶೇಷ ಛಂದೋಪ್ರಯೋಗವೆಂದರೆ ಶ್ಲೋಕಗಳ ಅನಿಯಮಿತತೆ ಹಾಗು ನಿರ್ಬಂಧದ ಉಲ್ಲಂಘನ. ಇದು ಅಲ್ಲಲ್ಲಿ ಆಧುನಿಕ ಕಾವ್ಯದಲ್ಲಿ ಕಾಣಿಸಿಕೊಂಡಿತ್ತಾದರೂ ಇಷ್ಟು ಪ್ರಚಲಿತವಾಗಿರಲಿಲ್ಲ. ಆಧುನಿಕ ಕಾವ್ಯದ ಶ್ಲೋಕಗಳಲ್ಲಿಯ ಪಙ್ಕ್ತಿಗಳು ಕಿರಿದು–ನಿಡಿದಾಗುತ್ತವಾದರೂ ಈ ಹೆಚ್ಚುಕಡಿಮೆಯಲ್ಲಿ ಒಂದು ನಿಯಮಿತತೆಯಿರುತ್ತದೆ. ನವ್ಯಕಾವ್ಯದ ಛಂದಸ್ಸಿನಲ್ಲಿ ಈ ನಿರ್ಬಂಧವಿಲ್ಲ. ಇಲ್ಲಿಯ ತಾಳಲಯ ಹಾಗು ಪಙ್ಕ್ತಿರಚನೆ ಭಾವದ ಮಣಿತಕ್ಕೆ ಇನ್ನಿಷ್ಟು ಸಮೀಪವಾಗಿದೆ. ಇದೇ ಉತ್ತಮ ರೀತಿಯೆಂದು ನಾವು ಹೇಳಬಯಸುವುದಿಲ್ಲ. ಚಿತ್ರಶಿಲ್ಪದಲ್ಲಿಯಂತೆ ಆಧುನಿಕ ಶ್ಲೋಕಗಳಲ್ಲಿಯ

ರೂಪಕಗಳು ಸ್ಫುಟವಾಗಿ ನಿಂತರೆ ಸಂಗೀತಕಲೆಯಲ್ಲಿಯಂತೆ ಇಲ್ಲಿಯ ಪ್ರತೀಕ ಗಳನ್ನು ಮೂಡಿಸುವ ಸಾಲುಗಳು ಹೆಚ್ಚು ನಾದಮಯವಾಗಿರಬಹುದು, ಪ್ರತೀಕ ಗಳನ್ನೇ ನಾದವಾಗಿ ಪರಿವರ್ತಿಸಿರಬಹುದು. ಛಂದಸ್ಸಿನಲ್ಲಿಯು ಎರಡು ಮಾರ್ಗ ಗಳಿವು. ಅಕ್ಷರವೃತ್ತ–ಮಾತ್ರಾವೃತ್ತಗಳಂತೆ ಇವು ಇಂದು ಒಂದರ ಬದಿಗೊಂದು ನಿಂತಿವೆ.

ಇನ್ನು ಪ್ರತಿಮೆಗಳ ವಿಚಾರ. ಒಂದು ಇಂದ್ರಿಯದಿಂದ ಬಂದ ಅನುಭವ ವನ್ನು ಅನ್ಯೇಂದ್ರಿಯಜನ್ಯ ಅನುಭವದ ಪರ್ಯಾಯದಿಂದ ಹೇಳುವ ಪದ್ಧತಿ ಯೊಂದು ಫ್ರಾನ್ಸಿನ ಪ್ರತೀಕನಿಷ್ಠ ಕಾವ್ಯದಲ್ಲಿ ಪ್ರಚಲಿತವಾಗಿತ್ತು. ಸ್ವಿನ್‌ಬರ್ನ್ ಅದನ್ನು ಇಂಗ್ಲಿಷಿನಲ್ಲಿ ಹೆಚ್ಚಾಗಿ ಬಳಸಿದ. ಬಾ:ದಲೇ ಎಂಬ ಫ್ರೆಂಚ್ ಕವಿ ತನ್ನ ಒಂದು ಅಷ್ಟಷಟ್ಪದಿಯಲ್ಲಿ ಈ ಹೋಲಿಕೆಗಳನ್ನು ಕುರಿತು ಪ್ರಸ್ತಾಪಿಸಿದ. ಚ್ಯಾಡಿಕ್ ಎಂಬ ಶ್ರೀ ಅರವಿಂದರ ಕವಿಶಿಷ್ಯ ಅದನ್ನು ಹೀಗೆ ಅನುವಾದಿಸಿದ್ದಾನೆ :

" As flight of echoes from a far-off beach
Into a shadowiness profound unite,
Vast as the day's width or as the titaned night,
Are matched sounds, colours, perfumes each to each."

'ಅ' ಎಂಬ ಸ್ವರ ಶ್ಯಾಮ, 'ಇ' ಶುಭ್ರ, 'ಐ' ಕೆಂಪು, 'ಉ' ಹಸಿರು ಹಾಗು 'ಓ' ನೀಲಿಯೆಂದು ರಿಂಬೋ ಹೇಳಿದ. ಈ ಸಾಮ್ಯಗಳ ಇನ್ನೊಂದು ಪೈಲೆಂದರೆ ನೈಸರ್ಗಿಕ ಪ್ರತೀಕಗಳನ್ನು ಸ್ವಾಂತರಿಕತೆಯ–ಸ್ವಂತದ ಅನುಭಾವದ– ಅಭಿವ್ಯಕ್ತಿಗಾಗಿ ಉಪಯೋಗಿಸುವದು. ಬಾ:ದಲೇನ ಅದೇ ಅಷ್ಟಷಟ್ಪದಿಯ ಕೊನೆಯ ಭಾಗದಲ್ಲಿ ಇದನ್ನು ಕಾಣಬಹುದು :

"For perfumes aresensed dawn-pure as childhood's flesh,
Softly as oboes, greenly as meadow–shroud,
And others vitiate, choicely and richly proud,
Winged with outflowing through the finite's mesh,
As musk, benzoin, incense, ambergris,
That sing the mind's and senses' joy-release."

ಈ ವಿಧಾನದ ಪ್ರಥಮಾರ್ಧ ಇನ್ನೂ ಕನ್ನಡದಲ್ಲಿ ಪ್ರಮುಖವಾಗಿ ಬಂದಿಲ್ಲ. ದ್ವಿತೀಯಾರ್ಧ ಸಾಮಾನ್ಯವಾಗಿ ಬಂದಿದೆ. ವರ್ಲೇಂ ಫ್ರೆಂಚಿನಲ್ಲಿ ಈ ದ್ವಿತೀಯಾರ್ಧದ ಪುರಸ್ಕರ್ತನಾದ.

ಗೂಗೆ, ಜೇಡ, ಸಿಗರೇಟಿನ ತುಂಡು, ಗವಳಿಗನ ಎಮ್ಮೆ,— ಇವೆಲ್ಲ ನವ್ಯಕಾವ್ಯದ ಪ್ರತಿಮೆಗಳಾಗಿವೆ. ವಿಡಂಬನೆಯ ಇಲ್ಲವೆ ಅಸಹ್ಯತೆಯ ಮೂಡಿನಲ್ಲಿ ಬರೆಯುವಾಗ ಇಂತಹ ಪ್ರತಿಮೆಗಳು ಅನಿವಾರ್ಯ. ಆದರೆ ಇಂತಹ ಪ್ರತಿಮೆಗಳ ಪ್ರಯೋಗವೆಂದರೇ ನವ್ಯಕಾವ್ಯವೆಂದು ತಿಳಿಯಲಾಗದು. ಪಾರಿವಾಳಕ್ಕೂ ರಾಜಹಂಸಕ್ಕೂ ಇಲ್ಲಿ ಸ್ಥಾನವಿದೆ.

“ ಸಿಂಹಮುಖಕ್ಕಿದೆ ನವಿಲಿನ ಸೋಗೆ
ಶಕ್ತಿಶಾರದೆಯ ಮೇಳದ ಹಾಗೆ ”

ಎಂಬ ಬೇಂದ್ರೆಯವರ ಆಂತರಿಕ ಪ್ರತಿಮೆಯಲ್ಲಿಯೂ ನವ್ಯತೆಯಿದೆ.

“ ಸಕಲಾಽ ಸಿದ್ಧಾಽ ಸರಸ್ವತಿ ವೀಣಾಪಾಣಿ
ಪಶ್ಯಂತಿಯ ವಾಣಿ
ಛಂದಾರೂಢಾ ನವೋಢಾ
ಮುಗ್ಧಾ, ರಸಿಕಾ, ಅನೂನಾ
ಧ್ವನಿತಪ್ರಾಣಾ ”

ಎಂಬ ಅವರ ಕವನ ಛಂದದಲ್ಲಿಯಷ್ಟೇ ಪ್ರತಿಮೆಯಲ್ಲಿಯೂ ನವ್ಯವಾಗಿದೆ. ಆದರೆ ಇಂದಿನ ವೈಜ್ಞಾನಿಕ ಪ್ರತಿಮೆಗಳಲ್ಲಿ ಒಂದು ನಾವೀನ್ಯವಿದೆ. ಅವು ಅನೇಕ ಸಲ ಸಾಮಾಜಿಕ ಪ್ರಜ್ಞೆಯಂತೆ ಆಂತರಿಕ ಪ್ರಜ್ಞೆಯನ್ನೂ ಮೂಡಿಸಬಲ್ಲವು. ಪ್ರಗತಿಶೀಲ ಕಾವ್ಯದಲ್ಲಿ ಇಂತಹ ಪ್ರತಿಮೆಗಳ ಉಪಯೋಗ ಅಲ್ಲಲ್ಲಿ ಆಗುತ್ತಿತ್ತು. ಅವೀಗ ನವ್ಯಕಾವ್ಯದ ವಿಶೇಷ ಭಾಂಡಾರವಾಗಿವೆ.

ಹಾಗಾದರೆ ನವ್ಯಕಾವ್ಯದ ನವ್ಯತೆಯನ್ನು ಅಳೆಯುವದೆಂತು ? ಮೇಲೆ ಹೇಳಿದಂತೆ ಆಧುನಿಕ ಹಾಗು ಪ್ರಗತಿಶೀಲ ಕಾವ್ಯದ ಕೆಲವೊಂದು ಲಕ್ಷಣಗಳಿಗೆ ನವ್ಯತೆಯು ಪ್ರಧಾನತೆಯನ್ನು ಕಲ್ಪಿಸಿಕೊಟ್ಟಿದೆ. ಅಲ್ಲದೆ ಭಾವನಾತಿರೇಕತೆಯಿಂದ ನವ್ಯ ಕವಿಯು ಆಗೀಗ ರೊಮ್ಯಾಂಟಿಕ್ ಕವಿಯಂತೆ ತನ್ನ ದರ್ಶನವನ್ನು ಮಸುಕಾಗಿಸುವದಿಲ್ಲ. ಅವನ ಕಾವ್ಯದಲ್ಲಿ ದರ್ಶನವು ಮಸುಕಾದರೆ,—ಅದು

ಆಂಗ್ಲ ನವ್ಯರಲ್ಲಿಯಂತೆ ಬುದ್ಧಿಯ ಜಟಿಲತೆಯಿಂದಾಗುತ್ತದೆ. ಮುಖ್ಯವಾಗಿ ನವ್ಯ ಕವಿಯು ‘ ಇಂಪ್ರೆಶನಿಸ್ಟ್ ’ ಹಾಗು ಪ್ರತೀಕನಿಷ್ಠ ಮಾರ್ಗಗಳನ್ನು ಸಮನ್ವಯಿಸುತ್ತಾನೆ. ವ್ಯಕ್ತ್ಯತೀತ ದೃಷ್ಟಿಯಿಂದ ಕಾರಣರೂಪವನ್ನು ಕಂಡು ಅದನ್ನು ಮೂಡಿಸಲೆಳಸುತ್ತಾನೆ. ಅರ್ಥವನ್ನು ತ್ಯಜಿಸಿ ಕೇವಲ ಪ್ರತೀಕದ ಮುಖಾಂತರ ತನ್ನ ದರ್ಶನವನ್ನು ನಿರೂಪಿಸುವದೆಂದು ಬಗೆದು “ ಅರ್ಥವಿಲ್ಲ, ಸ್ವಾರ್ಥವಿಲ್ಲ, ಬರಿಯ ನವ್ಯಗೀತ ” ಎಂದು ಓದುಗನೆದುರು ಬಂದು ನಿಲ್ಲುತ್ತಾನೆ. ಅರ್ಥವು ಕವನದ ತೀರ ಕೆಳಗಿನ ಭಾಗ. ಸರಲಾರ್ಥವನ್ನು ತಿಳಿದ ಓದುಗ ತಾನು ಕವನವನ್ನೇ ತಿಳಿದಿರುವೆನೆಂದು ಅನೇಕ ಸಲ ಭ್ರಮೆಗೊಳ್ಳುತ್ತಾನೆ. ಈ ಭ್ರಮೆಯನ್ನು ಕಳೆದು ಕಾವ್ಯದ ಆತ್ಮದೆಡೆಗೇ ನೇರವಾಗಿ ಓದುಗನ ಚಿತ್ತವನ್ನು ಸೆಳೆಯಲು ನವ್ಯಕವಿಯು ಅರ್ಥದ ನಿಚ್ಚಣಿಕೆಯನ್ನೇ ನೂಕಿಬಿಡುತ್ತಾನೆ. ಆದರೆ ಆಳವಾದ ಧ್ವನಿಯಿಂದ ತುಂಬಿದ ಪ್ರತೀಕಗಳಿರದಿದ್ದರೆ, ಅವು ಸ್ಫುಟವಾಗಿ ಓದುಗನ ಕಣ್ಣೆದುರು ನಿಲ್ಲದಿದ್ದರೆ ಅರ್ಥವನ್ನು ಗೌರವಿಸದ ನವ್ಯಕವಿ ತನ್ನ ಕಾರ್ಯದಲ್ಲಿ ಸಫಲನಾಗುವದಿಲ್ಲ. ಅರ್ಥವೂ ಪರಾರ್ಥವೂ ಇಲ್ಲದಾಗಿ ಅವನ ಕಾವ್ಯವು ನಿರರ್ಥಕವಾಗುತ್ತದೆ. ಇದನ್ನು ಡಿಲಾಂ ಟಾ:ಮಸ್‌ನಂಥ ಕೀರ್ತಿವಂತ ಕವಿಯ ಕವನಗಳನ್ನು ಕುರಿತು ಸಹ ಹೇಳಬಹುದು. ಡೆರಿಕ್ ಸ್ಟ್ಯಾನ್‌ಫರ್ಡ್ ಎಂಬ ವಿಮರ್ಶಕ ಆ ಕವಿಯ ಕೃತಿಗಳನ್ನು ಕುರಿತು ಒಂದು ವಿಮರ್ಶಾಗ್ರಂಥವನ್ನು ಬರೆದಿದ್ದಾನೆ. ಈ ವಿಮರ್ಶಕನು ಟಾ:ಮಸ್‌ನ ಕೃತಿಗಳನ್ನು ಸಹಾನುಭೂತಿಪೂರ್ವಕವಾಗಿ ನೋಡಿದ್ದಾನೆ. ಆದರೆ ಟಾ:ಮಸ್‌ನ ಅನೇಕ ಕವನಗಳು ಸ್ಟ್ಯಾನ್‌ಫರ್ಡನಿಗೇ ಸರಿಯಾಗಿ ಅರ್ಥವಾಗಿಲ್ಲ. ಟಾ:ಮಸ್‌ನ *The Conversation of Prayer* ಎಂಬ ಕವನ ಕಠಿಣವಾಗಿದೆಯೆಂದು ಹೇಳುತ್ತ ಅವನು ಹೀಗೆ ಬರೆಯುತ್ತಾನೆ: “There are no neologisms to puzzle the inteligence, no compound words to be interpreted, and the syntax and grammar are comparatively simple....what is truly diffi-cult to coustrue is the final conclusion of the poem. ” (*P, 92. Dylan Thomas 1954*). ಟಾ:ಮಸ್‌ನ *In My Craft or Sullen Art* ಎಂಬ ಕವಿತೆಯ ಧ್ವನಿಯ ಬಗ್ಗೆ ತನ್ನ ಕೆಲವು

ಊಹೆಗಳನ್ನು ಉಲ್ಲೇಖಿಸಿ "what quite, then, is the meaning ot the poem ?" ಎಂದು ಅವನು ಪ್ರಶ್ನೆ ಕೇಳುತ್ತಾನೆ. (p. 116) *Deaths and Entrances* ಎಂಬ ಟಾ:ಮಸ್‌ನ ಸಂಗ್ರಹದಲ್ಲಿಯ ಕೆಲವು ಕವಿತೆಗಳನ್ನು ಕುರಿತು: "The others appear to be flawed through obscurity, confusion, or straining for effect" (p. 116) ಎಂದು ಹೇಳುತ್ತಾನೆ. ಆದರೆ ನವ್ಯತೆಯು ಸಫಲವಾದಾಗ ಅದು ಎಂತಹ ನವೀನ ಸೌಂದರ್ಯಪ್ರತೀತಿಯನ್ನು ಕೊಡಬಲ್ಲದೆಂಬುದನ್ನು ಆ ವಿಮರ್ಶಕನ ಗ್ರಂಥದಿಂದಲೇ ನಾವು ತಿಳಿದುಕೊಳ್ಳಬಹುದು.

೫

ಈ ಸಂಕಲನಕ್ಕಾಗಿ ಬಂದ ಕವನಗಳನ್ನು ನಾಲ್ಕು ವಿಭಾಗಗಳಾಗಿ ವರ್ಗೀಕರಿಸುವದು ಯುಕ್ತವಾಗಿ ಕಂಡಿತು. ಗೆಳೆಯ ಕಣವಿಯವರೂ ನಾನೂ ಕೂಡಿ ಈ ವರ್ಗೀಕರಣವನ್ನು ಮುಗಿಸಿದೆವು. ಈ ಕವನಗಳ ವಸ್ತುವಿನಲ್ಲಿ ವೈವಿಧ್ಯವಿದೆ. ವಿಡಂಬನ (**ಸತ್ತಾತ್ಮಗಳ ಸಂಚು**), ಸುಖ–ದುಃಖಗಳ ವೈಪರೀತ್ಯ (**ಔತಣ**), ನವನಾಗರಿಕತೆಯು ಒಡ್ಡಿದ ಸಮಸ್ಯೆಗಳು (**ಕಾರಕೂನ, ರೂಪಸಿ, ಧೂಳು**), ಚಿಂತನ (**ಹುಟ್ಟಿದ ಹಬ್ಬ, ವೈದ್ಯವಿದ್ಯಾಲಯ, ಹೊರಗು-ಒಳಗು, ಮಾನಸ ಸರೋವರ, ಕರ್ಮಕಾಂಡ**), ಪ್ರೇಮ (**ನಲುವತ್ತರ ನೆರೆಯಲ್ಲಿ**), ವಾತ್ಸಲ್ಯ (**ವಾರಕೆ ಒಂದೇ ರವಿವಾರ, ಹೊಸ ಹುಟ್ಟು**), ನಿಸರ್ಗದ ಚೆಲುವು (**ಜೋಗದ ಜಲಪಾತದಲ್ಲಿ, ಕೆಂಡ–ಕಡಲು**), ಭೂಮಿಯ ಇಲ್ಲವೆ ಮನುಕುಲದ ಭವಿತವ್ಯ (**? ? ?, ಭೂಮಿಗೀತ, ಯುಗಾದಿ, ಮಣ್ಣಿನ ಮೆರವಣಿಗೆ**), ತಾತ್ವಿಕ ದರ್ಶನ (**ನಿಸರ್ಗ, ವ್ಯಕ್ತಿತ್ವ, ನಾಲ್ಸೇ ಸುಖಮಸ್ತಿ**)— ಹೀಗೆ ವಸ್ತುಗಳನ್ನು ವಿವರಿಸಬಹುದು. **ಸತ್ತಾತ್ಮಗಳ ಸಂಚಿನಲ್ಲಿ** ವೇದನೆಯಿದೆ. **ರವಿವಾರ, ಹೊಸ ಹುಟ್ಟು, ನಲುವತ್ತರ ನೆರೆಯಲ್ಲಿ** ಮೊದಲಾದ ಕವನಗಳಲ್ಲಿ ಸಮಸ್ಯೆಗಳನ್ನು ಕಂಡರೂ ಸಾಂತ್ವನಗೊಂಬುವ ಮನೋಧರ್ಮವಿದೆ. **ಭೂಮಿಗೀತ** ಹಾಗು

??? ದಲ್ಲಿ ಇಳೆಯ ಅಪೂರ್ಣತೆಯನ್ನು ಕಂಡು ಅತೃಪ್ತಿಯಿದ್ದರೆ, **ಯುಗಾದಿ** ಯಲ್ಲಿ ಅತೃಪ್ತಿಯ ಬೆನ್ನಿಗೇ ಒಂದು ಸಮಾಧಾನ ಆತು ನಿಂತಿದೆ. ಸಾಮಾಜಿಕ ಆಂತರಿಕ ವಸ್ತುಗಳೂ ವಿವಿಧ ಭಾವನಾಲಹರಿಗಳೂ ಇಲ್ಲಿಯ ರಸವಂತಿಕೆಗೆ ಕಳೆ ತಂದಿವೆ. ಈ ಕವನಗಳನ್ನು ಪರಿಶೀಲಿಸಿದರೆ ಯಾವುದೊಂದು ವಸ್ತು ವಿಶೇಷತೆಗಾಗಲಿ ಮೂಡಿಗಾಗಲಿ ನವ್ಯಕಾವ್ಯ ಜೋತು ಬಿದ್ದಿಲ್ಲವೆಂದು ಮನ ದಟ್ಟಾಗದೆ ಇರಲಾರದು.

ನಾಲ್ಕು ವಿಭಾಗಗಳ ವರ್ಗೀಕರಣಕ್ಕೆ ಈ ಪೀಠಿಕೆಯ ನಾಲ್ಕನೆಯ ಪರಿಯ ಕೊನೆಗೆ ಹೇಳಿದ ಮಾತುಗಳು ಸಹಾಯಕಾರಿಯಾಗಿವೆ. ಮೊದಲನೆಯ ವಿಭಾಗ ದಲ್ಲಿ ಸಂಗ್ರಹಿಸಿದ ಕವನಗಳಲ್ಲಿ ನವ್ಯತೆಯ ಒಂದು ಲಕ್ಷಣವಾದ ಪ್ರಗತಿಶೀಲ ಚಿಹ್ನಗಳ ಪ್ರಧಾನತೆ ಮಾತ್ರ ಕಂಡುಬರುತ್ತದೆ. '**ಕರೆ**' ಎಂಬ ಕವನ ಒಂದು ದೃಷ್ಟಿಯಿಂದ ರೊಮ್ಯಾಂಟಿಕ್ ಸಂಪ್ರದಾಯದ ಕವಿತೆಯೆನ್ನಬಹುದು. ಅದ ರಲ್ಲಿಯ ದರ್ಶನ ಭಾವನಾತಿರೇಕತೆಯ ದ್ವಾರದಿಂದ ಬಂದಿದೆ. ಆದರೆ ಅದರ ಛಂದಸ್ಸಿನ ಓಟದಲ್ಲಿ ಹಾಗು ಶೈಲಿಯ ನಿರ್ಭರತೆಯಲ್ಲಿ 'ಪ್ರಗತಿ'ಯ ಒಲವಿದೆ. **ಘಾಟಿ** ಎಂಬ ಕವಿತೆ ಚೆಲುವ ನೆನಪಿನ ಇನ್ನೊಂದು ಮುಖವನ್ನು ತೋರಿಸುವ ವಾಸ್ತವಿಕತೆಯಲ್ಲಿ ಪ್ರಗತಿಪರವಾಗಿದೆ. **ಮಾಯಿಯ ಮೂರು ಮುಖಗಳು** ಎಂಬಲ್ಲಿ ಬುದ್ಧಿಪ್ರಧಾನವಾದ ವಸ್ತುವಿವರಣೆಯ ಮುಖಾಂತರ ಕವಿಯ ಭಾವ ಮೂಡಿದೆ. **ಬೀದಿಬಸವಿಯೊದ ಇಳೆ** ಎಂಬ ಕವನದಲ್ಲಿ ಇಳೆಯ ಅಪೂರ್ಣತೆಯ ವಾಸ್ತವಿಕ, ದಾರುಣ ದರ್ಶನವಿದೆ. ಇದರ ಜೊತೆಗೆ ಅಲ್ಲಲ್ಲಿ ಶೈಲಿಯಲ್ಲಿಯೂ (ಉದ್ಧೃತ ಪಙ್ಕ್ತಿಗಳು, ಮು.) ಪ್ರತಿಮೆಗಳಲ್ಲಿಯೂ ನವ್ಯತೆಯು ಇಣಿಕಿ ನೋಡಿದೆ. **ಸಮುದ್ರ ಮೋಹಿನಿ** ಮುಕ್ತ ಛಂದವನ್ನು ಹೊಂದಿ ನಿಂತು ಪ್ರಗತಿಪರವಾಗಿದೆ. ಅಲ್ಲಲ್ಲಿ ಪ್ರತಿಮೆಗಳಲ್ಲಿ ನವ್ಯತೆಯ ಝುಳು ಕಿದೆ. **ಚಂಡಿಕಾಹ್ವಾನ** ಎಂಬ ಕವನದಲ್ಲಿಯ ಪ್ರತೀಕ ಪರಂಪರೆಯಿಂದ ಬಂದುದು. ಆದರೆ ಚಂಡಿಕೆಯನ್ನು ಆಹ್ವಾನಿಸುವಾಗ ಕವಿಯು ಪ್ರಗತಿ ಶೀಲನಾಗುತ್ತಾನೆ :

" ಬಾಂಬಾಗು; ಶಾಂತಿಶತ್ರುಶಿರೋವಿದಾರಣ–
ಸ್ತಂಭವಾಗಿದೊ ನಿನಗೆ ಹಿಡಿದ ಲೇಖನಿಯಾಣೆ,
ಮಡಿದ ಕವಿಗಳ ಕಾವ್ಯಖನಿಯಾಣೆ,

ದುಡಿದು ದಿನ ದಿನ ಬಳಲುತಿಹ ಕೋಟಿ ಕೂಲಿಕಾರರ
ಎದೆಯ ನಡುರಕ್ತನಾಳದಾಣೆ. "

ಪರಂಪರೆಯಾಗಿ ಬಂದ ಪ್ರತೀಕವೆಂದು ಕೀಳಲ್ಲ. ಸ್ವತಂತ್ರವಾಗಿ ಕಂಡ ಪ್ರತೀಕವೆಂದು ಮೇಲಲ್ಲ. ಆಧುನಿಕ–ಪ್ರಗತಿಶೀಲ ನವ್ಯ ಕವಿತೆಗಳೆಲ್ಲ ಕಾವ್ಯವೇ. ಕಾವ್ಯಗುಣವಿದ್ದರೆ ಅವೆಲ್ಲವೂ ಕಾವ್ಯ. ನಾವು ಇಲ್ಲಿ ಬರಿ ನವ್ಯತೆಯ ತಂತ್ರವನ್ನು ಕುರಿತು ಮಾತನಾಡುತ್ತಿದ್ದೇವೆ.

ಎರಡನೆಯ ವಿಭಾಗದ ಕವನಗಳಲ್ಲಿ ನವ್ಯತೆಯ ಲಕ್ಷಣಗಳು ಇನ್ನಿಷ್ಟು ಸ್ಫುಟವಾಗಿ ಕಾಣಿಸಿಕೊಂಡಿವೆ. ಪ್ರಗತಿಶೀಲ ಕಾವ್ಯದ ಶೈಲಿಯಾಗಲಿ ಛಂದಸ್ಸಾಗಲಿ ಇಲ್ಲಿ ವಾಡಿಕೆಯಾಗಿ ಬಂದಿರುವದಲ್ಲದೆ ನವ್ಯಶೈಲಿಯ ಹುರುಳುನುಡಿಗಳೂ ಪ್ರತಿಮೆಗಳೂ ಇಲ್ಲಿ ಹೆಚ್ಚುಹೆಚ್ಚಾಗಿ ಕಾಣಿಸಿಕೊಂಡಿವೆ.

" ತಾಯಿ ತೊಡೆಯಿಂದಿಳಿದು ಕೂಗಿ ಸಿಳ್ಳನು ಹೊಡೆದು
ಈಚೆ ಹರಿವುದು ಅಂಬೆಗಾಲ ರೈಲು "

ಎಂಬ ಸಾಲುಗಳು ಎಲ್ಲ ದೃಷ್ಟಿಯಿಂದ ನವ್ಯವಾಗಿವೆ. ಆದರೆ,

" ಮನೆತುಂಬ ಹರಿದದ್ದೆ ಏಸೊ ಮೈಲಿನ ದಾರಿ
ನಮಗಿಂತಲೂ ಎಳೆಯ ಮಗುವೆ ಮೇಲು "

ಎಂಬ ಆದರ ಮುಂದಿನ ಸಾಲುಗಳಲ್ಲಿ ಮತ್ತೆ ಅರ್ಥವೇ ಮೇಲುಗೈಯಾಗಿ ನವ್ಯತೆಯು ಶಿಥಿಲವಾಗುತ್ತದೆ. '**ಸತ್ತಾತ್ಮಗಳ ಸಂಚು**' ಕೇಂದ್ರಪ್ರತೀಕದ ನವೀನತೆಯ ಮೂಲಕ ನವ್ಯವಾಗಿದೆ. ಆದರ ಶೈಲಿಯಲ್ಲಿ ಸಂಸ್ಕೃತ–ಇಂಗ್ಲಿಷು ಪಜ್ಞಿ ಶಬ್ದಗಳಿಂದ ನವ್ಯತೆ ಬಂದಿದೆ. ಆದರೆ ಕವಿತೆಯಲ್ಲಿಯ ಪ್ರಧಾನತೆ ಅರ್ಥ ಹಾಗು ಉದ್ರೇಕಕ್ಕಿದೆ. **ನಿಸರ್ಗ**ದಲ್ಲಿ ನವ್ಯತೆಯ ಸಂಯಮವಿದೆ.

" ದಶದಿಕ್ಕುಗಳನೇ ಹೋಲ್ಡಾಲಿನಲಿ
ಬಿಗಿದಿರುವ ಸಾಹಸಿ ನಾನು "

ಮೊದಲಾದ ಸಾಲುಗಳಲ್ಲಿ ನವ್ಯಶೈಲಿಯ ದಿಟ್ಟತನವಿದೆ. ಬುದ್ಧಿಪ್ರಧಾನವಾದ ವಸ್ತುವಿವರಣೆ ಇಲ್ಲಿಯ ಭಾವಾಭಿವ್ಯಕ್ತಿಗೆ ಒಂದು ಮೆರುಗನ್ನು ಕೊಟ್ಟಿದೆ. ಆದರೂ ಕವನ ಪ್ರತೀಕದ ಮುಖಾಂತರವಲ್ಲ ಅರ್ಥದ ದ್ವಾರವಾಗಿ ಸಫಲವಾಗಿದೆ.

**ನಲುವತ್ತರ ನೆರೆಯಲ್ಲಿ**ಯೂ ಹೀಗೆಯೇ. ಆದರ ಶೈಲಿಯಲ್ಲಿ ಒಂದು ನವ್ಯತೆಯಿದೆ. ಮೋಟರು ಕಾರಿನ ಪ್ರತೀಕ ಕವಿತೆಯಲ್ಲಿ ಕೇಂದ್ರಕ್ಕಿದೆ. ಆದರೆ ಅರ್ಥಕ್ಕೆ ಇಷ್ಟೊಂದು ಪ್ರಾಶಸ್ತ್ಯ ಬೇಕಾಗಿರಲಿಲ್ಲ. ಒಟ್ಟನಲ್ಲಿ **ನಿಸರ್ಗ** ಹಾಗು **ನಲುವತ್ತರ ನೆರೆಯಲ್ಲಿ** ಎಂಬ ಕವಿತೆಗಳು ನವ್ಯತೆಗೆ ಬಹಳ ಸಮೀಪವಾಗಿವೆ.

**ಔತಣ**ದ ಶೈಲಿಯಲ್ಲಿ ನವ್ಯತೆಯು ಸುಳಿದು ಅದರ ಧೋರಣವೂ ನವ್ಯ ವಾಗಿದೆ. ಆದರೆ ಅರ್ಥವರ್ಣನೆಗಳಿಗೆ ಪ್ರಧಾನ್ಯತೆ ಸಿಕ್ಕು ನವ್ಯತೆಯು ಮಸು ಕಾಗುತ್ತದೆ. **ಧೂಳು, ಹೊಸಹುಟ್ಟು** ಹಾಗೂ **ಅಪಸ್ವರಗಳು** ಒಂದು ನವೀನ ಕೇಂದ್ರ ಪ್ರತೀಕವನ್ನು ಎತ್ತಿ ಹಿಡಿದಿವೆ. ಆದರೆ ಇಲ್ಲಿ ಇನ್ನಿಷ್ಟು ಸಂಯಮ ಬೇಕಾಗಿತ್ತು. ಅರ್ಥಕ್ಕಿಂತ ಪ್ರತೀಕ ಇನ್ನಿಷ್ಟು ಪ್ರಧಾನವಿರಬೇಕಾಗಿತ್ತು. **ಕಾರಕೂನ** ಒಂದು ನವ್ಯ ಚುಟಕ. **ರೂಪಸಿ** ಹಾಗು **ಮೃಗಯೂವಿಹಾರ** ಕವನಗಳೂ ನವ್ಯತೆಗೆ ಸಮೀಪವಾಗಿವೆ. ಆದರೆ ಇಲ್ಲಿ ಅರ್ಥ ಹಿಂದಾಗಿದ್ದರೂ ಪ್ರತೀಕಕ್ಕಿಂತ ಅನ್ಯೋಕ್ತಿಗೆ (allegory) ಹೆಚ್ಚು ಪ್ರಧಾನತೆ ಬಂದಿದೆ. ಮೊದ ಲನೆಯ ವರ್ಗದ ಎಲ್ಲ ಕವನಗಳನ್ನು ಪ್ರಗತಿಪರ ಕವನಗಳೆಂದು ಕರೆಯುವ ದಾದರೆ ಎರಡನೆಯ ವಿಭಾಗದ ಈ ಕವನಗಳನ್ನು ಉಪನವ್ಯ ಕವನಗಳೆಂದು ತಿಳಿಯಬಹುದು.

ಇವುಗಳಿಗೆ ಹೊಂದಿಕೊಂಡು, ಆದರೂ ನವ್ಯತೆಯೆಡೆಗೆ ದುಂಬಾಲು ಬಿದ್ದು **ಜೋಗದ ಜಲಪಾತದಲ್ಲಿ** ಎಂಬ ಕವನ ಗೋಚರವಾಗುತ್ತದೆ. ಶರಾವತಿ ಅಧಃಪತನದಲ್ಲಿ ಮೇನಕೆಯಂತೆ ತೋರುತ್ತಾಳೆ. ಆದರೆ ಈ ಅಧಃಪತನದಲ್ಲಿಯೇ ವಿದ್ಯುತ್ತಿನ ಉಗಮವಿದೆ. ಪರಂಪರೆಯ ಒಂದು ಪ್ರತೀಕವನ್ನು ಇಲ್ಲಿ ನವ್ಯವಾಗಿ ಉಪಯೋಗಿಸಲಾಗಿದೆ. **ಹುಟ್ಟಿದ ಹಬ್ಬ** ಅಮರ ಆತ್ಮವನ್ನು ಕೇಂದ್ರದಲ್ಲಿ ಇರಿಸಿಕೊಂಡು ಜೀವನದ ರೀತಿಯನ್ನು ಚಿತ್ರಿಸುತ್ತದೆ. ಇದರಲ್ಲಿ ಅನಾಯಾಸ ವಾಗಿ ನವ್ಯತೆ ಬಂದಿದೆ. ಪ್ರತೀಕವನ್ನು ಗಮ್ಯವಾಗಿಸುವಷ್ಟು ಮಾತ್ರ ಅರ್ಥಕ್ಕೆ ಸ್ಥಾನವಿದೆ. **ಯುಗಾದಿ** ಹಾಗು **ಮಣ್ಣಿನ ಮೆರವಣಿಗೆ**ಯ ಬಗೆಗೆ ಈ ಮಾತನ್ನೇ ಹೇಳಬಹುದು. ಶೈಲಿ—ಪ್ರತಿಮೆಗಳ ನವ್ಯತೆ ಪ್ರತೀಕಪ್ರಧಾನತೆಗೆ ಇನ್ನಿಷ್ಟು ಪುಷ್ಟಿಯನ್ನು ಒದಗಿಸುತ್ತದೆ. **ವೈದ್ಯವಿದ್ಯಾಲಯ**ದಲ್ಲಿ ಅವ್ಯಕ್ತ ಆತ್ಮ ಹಾಗು ಅಸ್ತವ್ಯಸ್ತ ದೇಹಯಂತ್ರದ ವೈಷಮ್ಯವಿದೆ. ಅಸ್ತವ್ಯಸ್ತ ದೇಹ

ಇಲ್ಲಿಯ ಕೇಂದ್ರಪ್ರತೀಕ. ಅದರ ಬೆನ್ನ ಹಿಂದೆ ಅವ್ಯಕ್ತ ಆತ್ಮದ ಧ್ವನಿಯಿದೆ. ವಸ್ತುವಿಶೇಷತೆಯ ಮೂಲಕ ಸಹಜವಾಗಿ ನವ್ಯ ಶೈಲಿ–ಪ್ರತಿಮೆಗಳಲ್ಲಿ ಈ ಪ್ರತೀಕ ರೂಪಗೊಳ್ಳುತ್ತದೆ. **ಹೊರಗು–ಒಳಗು, ಕರ್ಮಕಾಂಡ** ಹಾಗು **ಮಾನಸ ಸರೋವರ** ದಲ್ಲಿ ಅರ್ಥದ ಅವಕಾಶ ಇನ್ನಿಷ್ಟು ಕ್ಲಿಷ್ಟವಾಗಿ ಪ್ರತೀಕದ ಧ್ವನಿಗೆ ಅದರ ನಿರೂಪಣೆಯಲ್ಲಿಯ ವ್ಯಂಗ್ಯತೆಯೂ ಕೂಡುವ ಹವಣಿಕೆಯಿದೆ. ಈ ವಿಭಾಗದ ಕವಿತೆಗಳಲ್ಲಿ ನವ್ಯತೆ ಚೆನ್ನಾಗಿ ಮೂಡಿದೆಯೆಂದು ಹೇಳಬಹುದು. ಇವುಗಳನ್ನು ನಿಸ್ಸಂಶಯವಾಗಿ ನವ್ಯ ಕವಿತೆಗಳೆಂದು ಕರೆಯಬಹುದು.

**? ? ?, ಕೆಂಡ–ಕಡಲು, ಭೂಮಿಗೀತ, ವ್ಯಕ್ತಿತ್ವ, ನಾಲ್ಪೇ ಸುಖಮಸ್ತಿ** ಎಂಬ ಕವನಗಳಲ್ಲಿ ಒಂದು ವಿಶೇಷ ತರಹದ ನವ್ಯತೆ ಕಂಡು ಬರುತ್ತದೆ. ಅರ್ಥದ ಅಭಾವದ ಮೂಲಕ ಈ ಕವಿತೆಗಳು ಒಂದಂಗದಿಂದ ಊನವಾಗಿವೆಯೆಂದು ಕೆಲವರಿಗೆ ತೋರಬಹುದು. ಆದರೆ ದರ್ಶನವನ್ನು ಇನ್ನಿಷ್ಟು ಮನಸೆಳೆಯುವಂತೆ ಮಾಡಲು ಅರ್ಥ ಇಲ್ಲಿ ಊನವಾಗಿದೆಯೆಂಬು ದನ್ನು ಮರೆಯದಿರಬೇಕಾಗುತ್ತದೆ. ಕೇಂದ್ರ ಪ್ರತೀಕದ ಧ್ವನಿಯನ್ನು ಇನ್ನಿಷ್ಟು ತೇಜೋಮಯವಾಗಿಸಲು ಕವಿಯು ಅರ್ಥಕ್ಕೆ ವ್ಯಂಗ್ಯತೆಯ ದಾರಿಯನ್ನು ಮಾತ್ರ ತೆರೆದಿದ್ದಾನೆ. ಇವು ವ್ಯಂಗ್ಯನವ್ಯ ಕವಿತೆಗಳು. **ಜೀವನ, ದುಃಸ್ವಪ್ನ** ಎಂಬಿವೇ ವೊದಲಾದ ವಿನಾಯಕರ **ನವ್ಯ ಕವಿತೆಗಳು** ಎಂಬ ಸಂಗ್ರಹದ ಕವಿತೆಗಳಲ್ಲಿ, ಶ್ರೀ. ಅಡಿಗರ ದೀರ್ಘ ಕೃತಿಗಳಲ್ಲಿ ಹಾಗೂ ಶ್ರೀ. ರಾಮಚಂದ್ರಶರ್ಮರ ಇತ್ತೀಚಿ ಗಿನ ಕವಿತೆಗಳಲ್ಲಿ ನವ್ಯತೆಯ ಈ ಪ್ರಕಾರ ಕಾಣಿಸಿಕೊಂಡಿದೆ. ಇದು ವಾದಗ್ರಸ್ತ ವಾದ ಪ್ರಕಾರವೇನೊ ನಿಜ. ಇದರ ಬಗ್ಗೆ ಡಿಲಾಂ ಟಾ:ಮಸ್‌ನ ಕೃತಿಗಳನ್ನು ಕುರಿತು ಮೇಲೆ ಚರ್ಚಿಸಲಾಗಿದೆ. ಕವನದ ಗಮ್ಯತೆ ಕಳೆಯುವಷ್ಟು ಅರ್ಥ ಸಂಪುಷ್ಟಕ್ಕೆಳೆದಿರಬಾರದೆಂಬ ಒಲವಿದ್ದವರು ಇಲ್ಲಿಯ ಮೂರನೆಯ ವಿಭಾಗದ ಕವಿತೆಗಳ ಮಾದರಿಯ ಕಡೆಗೆ ತಿರುಗಬಹುದು. ತಮ್ಮ ಪ್ರತೀಕದ ಆಳ ಹಾಗು ಸ್ಫುಟತೆಯ ಬಗ್ಗೆ ವಿಶ್ವಾಸವಿದ್ದವರು ವ್ಯಂಗ್ಯನವ್ಯದ ದಾರಿಯನ್ನು ತುಳಿಯ ಬಹುದು. ಈ ದಾರಿಯಲ್ಲಿಯೂ ಮನನೀಯ ಕಾವ್ಯರಚನೆ ಕನ್ನಡದಲ್ಲಿ ಆಗಿದೆ ಯೆಂಬುದನ್ನು ರಸಿಕರು ಬಲ್ಲರು. ಈ ದಾರಿಯಲ್ಲಿ ಪಡೆಯುವದು ಇನ್ನೂ ದೇಶಾಪಷ್ಟಿದೆ.

'ನಾಲ್ವೀ ಸುಖಮಸ್ತಿ' ಎಂಬ ಬೇಂದ್ರೆಯವರ ವ್ಯಂಗ್ಯನವ್ಯ ಕವನವೂ ಈ ಸಂಕಲನದಲ್ಲಿರುವದು ಅದರ ಒಂದು ವಿಶೇಷ ಲಕ್ಷಣವಾಗಿದೆ. ಹಿರಿ-ಕಿರಿಯರ ಭೇದ, ಆಧುನಿಕ-ಪ್ರಗತಿಶೀಲ-ನವ್ಯ ಭೇದಗಳು ಕಾವ್ಯಕ್ಕೆ-ಪ್ರಯೋಗ ಪ್ರಿಯತೆಗೆ ತಾಕಲಾರವೆಂದು ಇದರಿಂದ ಸ್ಪಷ್ಟವಾಗುತ್ತದೆ. ಯಾವ ಪದ್ಧತಿಯದಾದರೂ ಕಾವ್ಯವು ಕಾವ್ಯ. ಬರಿ ನವ್ಯಮಾರ್ಗದಲ್ಲಿ ಬರೆಯಲು ಪ್ರಾರಂಭಿಸಿದವರಿಗೇ ಈ ದಾರಿ ಮೀಸಲೆಂದಲ್ಲ, ಯಾವ ಕವಿಯೂ ಈ ದಾರಿಯನ್ನೂ ತುಳಿಯಬಹುದು. ಅನೇಕ ತಂತ್ರಗಳಂತೆ ನವ್ಯತೆಯೂ ಒಂದು ತಂತ್ರ, ಒಂದು ವಿಧಾನ. ಯಾವ ಕವಿಯೂ ಅದನ್ನು ಬಳಸಿಕೊಳ್ಳಬಹುದು. ಅಲ್ಲಲ್ಲಿ ಎದ್ದ ಗೊಂದಲ, ನವ್ಯತೆಯ ಗೊಂದಲವಲ್ಲ, ತಪ್ಪು ತಿಳುವಳಿಕೆಯ ಗೊಂದಲ. ಬೇಂದ್ರೆಯವರು ಆಗೀಗ ಭಿನ್ನಾಭಿಪ್ರಾಯವನ್ನು ವ್ಯಕ್ತಗೊಳಿಸಿದ್ದರೆ ಅದು ನವ್ಯ ಕಾವ್ಯವನ್ನು ಕುರಿತಲ್ಲ,—ನವ್ಯದೃಷ್ಟಿಯ ಹೆಸರಿನಲ್ಲಿ ಪ್ರಕಟವಾಗುವ ಅಪೂರ್ಣ ದೃಷ್ಟಿಯನ್ನು ಕುರಿತು.

ಈ ನವ್ಯ ಸಂಕಲನ ನವ್ಯ ಕಾವ್ಯವನ್ನು ಕುರಿತು ಒಂದೆರಡು ಮಾತುಗಳನ್ನು ಸ್ಪಷ್ಟಗೊಳಿಸುವಂತಾದರೂ ಈ ಪ್ರಕಾಶನ ಸಫಲವೆಂದು ನಾವಿಬ್ಬರೂ ತಿಳಿದಿದ್ದೇವೆ.

ಕರ್ನಾಟಕ ಕಾಲೇಜು
ಧಾರವಾಡ
೩೦-೫-೧೯೫೭

**ವಿ. ಕೃ. ಗೋಕಾಕ**

# ಪರಿವಿಡಿ


| | ಕವನ | | ಪುಟ |
|---|---|---|---|
| ೧ | ಕರೆ | ಶ್ರೀ ಗಂಗಾಧರ ಚಿತ್ತಾಲ | ೧ |
| ೨ | ಘಾಟಿ | ,, | ೪ |
| ೩ | ಮಾಯಿಯ ಮೂರು ಮುಖಗಳು | ,, ಶಂ. ರಾ. ಮೊಕಾಶಿ | ೭ |
| ೪ | ಸಮುದ್ರಮೋಹಿನಿ | ,, ಅರವಿಂದ ನಾಡಕರ್ಣಿ | ೯ |
| ೫ | ಚಂಡಿಕಾಹ್ವಾನ | ,, ಬಿ. ಎಚ್. ಶ್ರೀಧರ | ೧೧ |
| ೬ | ಬೀದಿಬಸವಿಯಾದ ಇಳೆ | ,, ಹೇಮಂತ | ೧೫ |
| ೭ | ವಾರಕೆ ಒಂದೇ ರವಿವಾರ | ,, ಸಿದ್ದಣ್ಣ ಮಸಳಿ | ೧೮ |
| ೮ | ಸತ್ತಾತ್ಮಗಳ ಸಂಚು | ,, ಬಿ. ಎಚ್. ಶ್ರೀಧರ | ೨೧ |
| ೯ | ಔತಣ | ,, ಜಿ. ಎಸ್. ಶಿವರುದ್ರಪ್ಪ | ೩೦ |
| ೧೦ | ಕಾರಕೂನ | ,, ಪಶುಪತಿ ರೆಡ್ಡಿ | ೩೩ |
| ೧೧ | ರೂಪಸಿ | ,, ,, | ೩೪ |
| ೧೨ | ಮೃಗಯಾವಿಹಾರ | ,, ಎಂ. ಅಕಬರ ಅಲಿ | ೩೬ |
| ೧೩ | ನಿಸರ್ಗ | ,, ಮಂಗೇಶ ನಾಡಕರ್ಣಿ | ೩೮ |
| ೧೪ | ನಲುವತ್ತರ ನೆರೆಯಲ್ಲಿ | ,, ಪಿ. ವೆಂಕಟರಮಣ ಆಚಾರ್ಯ | ೪೧ |
| ೧೫ | ಹೊಸಹುಟ್ಟು | ,, ಶಾಂತಿನಾಥ ದೇಸಾಯಿ | ೪೩ |
| ೧೬ | ಅಪಸ್ವರಗಳು | ,, ಶಂ. ರಾ. ಮೊಕಾಶಿ | ೪೭ |
| ೧೭ | ಧೂಳು | ,, ಆರ್. ಜಿ. ಕುಲಕರ್ಣಿ | ೪೯ |
| ೧೮ | ಜೋಗದ ಜಲಪಾತದಲ್ಲಿ | ,, ಸು. ರಂ. ಎಕ್ಕುಂಡಿ | ೫೨ |
| ೧೯ | ಹುಟ್ಟಿದ ಹಬ್ಬ | ,, ಜಿ. ಎಸ್. ಶಿವರುದ್ರಪ್ಪ | ೫೪ |
| ೨೦ | ಯುಗಾದಿ | ,, ಚೆನ್ನವೀರ ಕಣವಿ | ೫೮ |
| ೨೧ | ಮಣ್ಣಿನ ಮೆರವಣಿಗೆ | ,, ,, | ೬೨ |
| ೨೨ | ವೈದ್ಯವಿದ್ಯಾಲಯ | ,, ವಿನಾಯಕ | ೬೪ |
| ೨೩ | ಹೊರಗು–ಒಳಗು | ,, ಕ. ವೆಂ. ರಾಜಗೋಪಾಲ | ೭೦ |
| ೨೪ | ಕರ್ಮಕಾಂಡ | ,, ,, | ೬೦ |
| ೨೫ | ಮಾನಸ ಸರೋವರ | ,, ಸಿದ್ದಣ್ಣ ಮಸಳಿ | ೭೪ |
| ೨೬ | ? ? ? | ,, ರಾಮಚಂದ್ರ ಶರ್ಮ | ೭೬ |
| ೨೭ | ಕೆಂಡ–ಕಡಲು | ,, ,, | ೭೯ |
| ೨೮ | ಭೂಮಿಗೀತ | ,, ಗೋಪಾಲಕೃಷ್ಣ ಅಡಿಗ | ೮೨ |
| ೨೯ | ವ್ಯಕ್ತಿತ್ವ | ,, ವಿನಾಯಕ | ೮೯ |
| ೩೦ | "ನಾಲ್ಪೇ ಸುಖಮಸ್ತಿ" | ,, ಅಂಬಿಕಾತನಯದತ್ತ | ೯೩ |

# ಕರೆ

(ಅಮೇರಿಕೆಗೆ ಹೊರಡುವಾಗ)

ಏಳು ಕಡಲುಗಳಾಚೆಯಿಂದ ಆಹ ! ಕರೆ ಬಂತು,
ದಿಕ್ತಟಕು ನೆ ಬಂತು, ತೆರೆತೆರೆಗು ನೊರೆ ಬಂತು
ಬಾ ಬಾ ಬಾ ಬಾ

ಆವ ತವಕದಲೇನೊ ಬಾನಂಚುಗಳ ತಬ್ಬಿ
ತುಡಿವೀ ಅಧೀರ ಜಲ
ತೆರೆ ನೂಂಕಿ ಒಳಮನಸಿನಾಳಕೂ ತೂರಿತ್ತು
ತನ್ನ ಫೇನೋಲ್ಲಾಸ.
ಮೆಟ್ಟಿ ನಡೆ ಬಾರೊ,—ಎಂದಿತ್ತು–ನನ್ನೀ ವಕ್ಷ
ಸುವಿಶಾಲ, ರಮ್ಯ, ಭೀಕರ, ಗಹನ, ಅಶಾಂತ
ಕ್ಷಿತಿಜಗಳ ದಾಟಿ ಬಾ
ಹೊಸ ಬುವಿಗೆ, ಹೊಸ ಬಾನ್ಗೆ
ಹೊಸ ರವಿಯ ಹೊಸ ಛವಿಯ ಹೊಸ ಸವಿಯ ಪಡೆಯಲಿಕೆ
ಬಾ ಬಾ ಬಾ ಬಾ

ಕಣ್ಣಳವಿನಾಚೆಯಲಿ ಅವಿತು ನವಭೂಖಂಡ
ಗತಜನ್ಮದಭಿಲಾಷೆಯಂತೆ, ಕನಸಲಿ ಕಂಡು
ಅರೆಮರೆತ ಕಣಸಂತೆ
ಕಣ್ಸನ್ನೆಗೈದಿತ್ತು ಮುಗಿಲೆತ್ತರಕು ತನ್ನ ಬೆಳ್ಮಹಲುಗಳನೆತ್ತಿ
ಬಾ ಬಾ ಬಾ ಬಾ

ಜೇಸನ್ನ ಸ್ವರ್ಣವನ್ನರಸಿ ಬಂದಂತೆ ಬಾ.
ನನ್ನ ತೀರಗಳಲ್ಲಿ ಕುಣಿವ ನವರಂಗ ಜಲ–
ದೊಡನೆ ಕುಣಿಕುಣಿಯು ಬಾ.
ನನ್ನ ಮಣ್ಣುಗಳಲ್ಲಿ ಬೆಳೆವ ಅನ್ನದ ಕಣಜ
ಹೂಹಣ್ಣು ಹಾಲ್‌ಜೇನನುಣ್ಣು ಬಾ.
ನನ್ನ ಕೋಶಗಳಲ್ಲಿ ಸುರಿವ ಅಗಣಿತ ರತ್ನಭಂಡಾರ
ಅಪರಂಪಾರ ಸಂಪದವ ಸವಿಯ ಬಾ.

ನನ್ನ ನೆಲದೊಗರನ್ನು, ಹೊಗರನ್ನು, ಚಿಗುರನ್ನು,
ಆ ಹಾಹಾ ! ಸೀ ಹುಳಿಯ ಚಿಗುರನ್ನು.
ನನ್ನ ಮಕ್ಕಳಲುಗುವ ಕ್ಷಾತ್ರವನು, ತೇಜವನು, ಧರ್ಮವನು, ಕರ್ಮವನು
ಬಲವನ್ನು, ಛಲವನ್ನು, ನಿರ್ನೆರನ ಒಲವನ್ನು
ವೇಗ ಆವೇಗ ಉದ್ವೇಗ ಹೃದ್ವೇಗವನು
ವೈಮನದ ಸೊಗವನ್ನು, ಕೊರಳೊಳಿಹ ನೊಗವನ್ನು
ಪುಣ್ಯವನು ಪಾಪವನು, ತಾಪ–ಸಂತಾಪವನು
ದ್ವೇಷವನು ರೋಷವನು ಮತ್ತೆ ಸಂತೋಷವನು
ನನ್ನ ಈ ಗಗನಚುಂಬಕ ಮಹಲುಗಳ ಮಹತ್ತ್ವಾಕಾಂಕ್ಷೆ,
ಲೋಹ–ಪಾಷಾಣ ನಿರ್ಮಿತ ಶಹರುಗಳ ನಿಶಿತದೀಪ್ತಿ,
ನಿರಂತರ ಶ್ರಮಯೋಗ.

ನಾಲ್ದೆಸೆಗಳಲು ಚೆಲ್ಲಿ ಧಾವಿಸುವ ವೀಥಿಗಳ ರಮ್ಯಮಾದಕ ವೇಗಲಹರಿ,
ಕಲ್‌ಮಣ್ಣು ವೈಭವವ ಕಟ್ಟಿ ಮೆರೆಯುವ ಅಟ್ಟಹಾಸ
ಅಟ್ಲಾಂಟಿಕದ ತೆರೆಯೇರಿ ಬಂದಂತೆ ಉತ್ಸಾಹ
ನೂರಾರು ಬಗೆ ವೈಯನುಣಿಸೆ ಮನವನು ರಮಿಸೆ
ಸುಖದ ಆಮಿಷದೇಕಧ್ಯಾನ.

# ಕರೆ

ತಲೆಗೇರುವನಕವೂ ಬಾಳಿನ ರಸಾಯನವ
ಕುಡಿದು ಕುಣಿಯುವ ಹಿಗ್ಗು, ನಗೆ, ಕೆಲೆತ, ಕೇಕೆ.
ತೋಲುತಪ್ಪಿತೊ—ಚೀರು, ಎದೆಯೊಡೆವ ಅಳು, ಕುದಿತ,
ಮಿಡಿತ, ನರಳಿಕೆ, ಬೇನೆ—
ಈ ಭವದ ಯೋಗಗಳ, ಭೋಗಗಳ, ರೋಗಗಳ
ತೋಡ ಬಾ, ಹಾಡ ಬಾ
ಬಾ ಬಾ ಬಾ ಬಾ

ಏಳು ಕಡಲುಗಳಾಚೆಯಿಂದ ಆಹ ! ಕರೆ ಬಂತು.

—ಗಂಗಾಧರ ಚಿತ್ತಾಲ

# ಘಾಟಿ

ಹನ್ನೆರಡು ವರುಷಗಳ ಮೇಲೆ ಹಳ್ಳಿಗೆ ನಡೆದೆ
ಏನೇನೊ ಸವಿನೆನಹುಗಳ ಗೊಂಚಲನೆ ಹೊತ್ತು.
ಊರ ಘಾಟಿಯನೇರಿ ಇಳಿವಾಗ ಎನಿಸಿತ್ತು—
ಬೆಳಗಿನೀ ಬಿಸಿಲು, ಅದೊ ಓ ಅಲ್ಲಿ ಮಳಲಲ್ಲಿ
ಬೆಳ್ನೊರೆಯ ಹಾಸುತಿಹ ಕಡಲು, ಅದರಂಚಿನಲೆ
ಕಣ್ಣು ಹರಿಯುವವರೆಗೂ ಸೋ ಎನುವ ಗಾಳಿಮರಗಳ ಸಾಲು,
ಈ ಬೋಳುಗುಡ್ಡ, ಇಳಿಜಾರಿನಲಿ
ಮೇವ ಕುರಿ ಹಿಂಡಿನೊಲು
ಅಲ್ಲಲ್ಲಿ ಪೊದೆಯಾಗಿ ಬೆಳೆದ ಈ ಗಿಡಗಂಟೆ,
ಈ ಕಣಿವೆ, ಈ ಕಲ್ಲು.
ಹನ್ನೆರಡು ವರುಷಗಳ ಹಿಂದೆ ಹೇಗೋ ಹಾಗೆ
ಇಂದಿಗೂ ಎಲ್ಲೆಲ್ಲೂ.
ಬೆಳೆದ ಕಣ್ಣಿಗೆ ಅಂದು ಹರಹಿ ನಿಂತ ಜಗತ್ತು—
ಇಂದಿನಿಸು ಸಣ್ಣದಾಗಿಯೆ ಕಾಣುತಿದೆ, ಅಷ್ಟೆ.
ಪರಿಚಯದ ಮರುಛಾಯೆ ಹೊಡೆಯುತಿರೆ ಎಲ್ಲೆಲ್ಲೂ,
ಇಲ್ಲುಂಡ ಸುಖವೆಲ್ಲ ಮನದಿ ಮರುಕಳಿಸಿತ್ತು.

ಹಾಗೆಯೇ ಮುನ್ನಡೆದು ನಮ್ಮ ಬಾಲ್ಯದ ಬನವ
ತವಕದಲಿ ಹೊಕ್ಕಾಗ.
ಎಲ್ಲೆಡೆಗೂ
ಹನ್ನೆರಡು ವರುಷಗಳ ಮುದಿಛಾಯೆ ಕವಿದಿತ್ತು.
ಕಲ್ಲುಕಟ್ಟೆಯ ಮೇಲಿನಶ್ವತ್ಥ,
ಅಡಿಯ ಅಂಗಡಿ, ಗದ್ದೆ, ರಸ್ತೆ,
ನೆರಳುನೆರಳಾದ ಮುಂದಣ ಕೇರಿ,

## ಘಾಟ

ಮನೆಯತ್ತ ಹೊರಳಿ ಸಾಗುವ ಓಣಿ,
ಎಲ್ಲವೂ
ಗತಜೀವನದ ಕತೆಯ ವ್ಯಥೆಯನೇ
ಹಂಬಲಿಸುವಂತಿತ್ತು.
ಹಿಂದೆ ಎಂದೋ ನಡೆದು ಹುಡಿಗೂಡಿ ಹೋದುದನು
ಇಂದು ಬರಿದೇ ಹುಡುಕಿಕೊಂಡು ಬಂದಂತಿತ್ತು.

ನಮ್ಮ ಮನೆ ಹಿತ್ತಿಲನು ಸೇರುತಿರುವಾಗಂತೂ
ಎದೆಯು ಧಸ್ಸೆಂದಿತ್ತು.
ಬೆಚ್ಚಗಿನ ಮನೆ ನೆಲಕೆ ಕುಸಿದ ಮಣ್ಣಿನ ಗುಪ್ಪೆ
ಹಳೆ ನೆನಹುಗಳನೆಲ್ಲ ಹುಗಿದಿಟ್ಟುಕೊಂಡು
ಬಿದ್ದಿತ್ತು ತಬ್ಬಲಿಯಾಗಿ.
ಮೇಲೆ ಬೆಳೆದಿದೆ ಹುಲ್ಲು.
ನೀರು ತುಂಬಿದ ಬಾವಿ ಬತ್ತಿ ಭಣಭಣ.
ಬಣ್ಣ ಬಣ್ಣದ ಚಿಟ್ಟೆಯಾಟ ಹೂಡಿದ ತೋಟ
ಹೂವಿಲ್ಲ ಹಸುರಿಲ್ಲ
ಬರಿಯ ಬಟ್ಟಂಬಯಲು.
ಇದ್ದ - ನಾಲ್ಕಾರ್ ತೆಂಗು ನಿರ್ಗತಿಕರಂತೆ
ಗೋಣೆತ್ತಿ ಬಿಸುಸುಯ್ಯುತಿವೆ.
ಎನಿತೊ ತಲೆಮಾರು ಅಂಗಳಕೆ ನೆಳಲನು ಚೆಲ್ಲಿ
ಹಗಲಲ್ಲು ಕತ್ತಲನು ಹೊತ್ತ ಕರಿಮಾವುಮರ
ಬೋಳಾಗಿ ಬಾನ್ನೊಂದು ದೊಡ್ಡ ತೂತು.
ನೆಲದಿಂದಲೆದ್ದ ಮುಡಿವರೆಗೂ ಮರವನು ಸುತ್ತಿ
ಗಂಟಲನೆ ಹಿಚುಕುತಿದೆ ಒಂದು ವಿಚಿತ್ರ ಬೇರು.
ಅಂಗಳದಿ ಬೆಳೆಸಿದ್ದ ಬಂಗಾರಗೊಂಡೆ ಹೂ,
ಸಜ್ಜೆ, ದಾಸಾಳ, ಕರಿತುಳಸಿ, ಬಿಳಿ ನಿತ್ಯಪುಷ್ಪ

## ಘಾಟ

ಎಲ್ಲ ದಿಕ್ಕಾಪಾಲು.
ಅಂದು ಸಸಿಯಾಗಿ ನೀರುಂಡ ಒಂದೇ ಒಂದು ದಾಳಿಂಬೆ
ಗಿಡವಾಗಿ ಏಕಾಕಿಯಾಗಿ
ತಲೆಯೆತ್ತರಕು ಬೆಳೆದು ನಿಂತಿದೆ
ಗೊತ್ತು ಗುರಿಯಿಲ್ಲದಲೆ.

ನಿದ್ದೆಯೊಳು ನಡೆದುಬಂದವನಂತೆ ನಿಂತೆ
ಅಂದು ಕಿಲಿಕಿಲಿಯಾಗಿ ತುಂಬಿನಿಂತ ಜಗತ್ತು
ನಿರ್ಜೀವ ದೇಹದೊಲು
ಇನ್ನೂರೊ ಮುನ್ನೂರೊ ಮೊಳದುದ್ದ ಪಾಳಿನಲಿ.
ಚಳಿ ಗಾಳಿ ಮಳೆ ಬಿಸಿಲುಗಳ ತಿನುತ
ಮುದುಡಿಕೊಂಡುದ ಬರಿದೆ ನಿಗುಕಿಸುತ.
ಇಲ್ಲುಂಡ ತಾಯೊಲವು, ತಂದೆಯಕ್ಕರೆ, ಅಣ್ಣತಮ್ಮದಿರ
ನಿತಾಂತ ಮಮತೆಯೇ
ಕಣ್ಣುಕಟ್ಟಿರೆ, ಜೀವ ಮಮ್ಮಲನೆ ಮರುಗಿತ್ತು.
ಅಮ್ಮ ಹೋದಳು, ಅಣ್ಣ ಹೋದ, ಅಪ್ಪನೂ ಹೋದ
ಅವರೊಡನೆ ಈ ಲೋಕವೂ ಹೋಯ್ತು ,
ಎಲ್ಲೊ ಮಣ್ಣಾಲ್ಲಡಗಿ.
ಈ ಜಗದ ರೀತಿಯಿದು.

ಹಸಿಯ ಗಾಯದೊಳಿಂದ ಬಸಿವ ನೆತ್ತರ ತೆರದಿ
ಬರಿಯ ವ್ಯಥೆಯೇ ಜೀವ ತುಂಬಿರಲು
ನಡು ಹಗಲ ಬಿಸಿಲಲ್ಲೂ ಮುಚ್ಚಂಜೆ ಕವಿದಿತ್ತು,
ಮನಕೆಲ್ಲ ಮಂಜು ಹಬ್ಬಿತ್ತು.

ಅಂದು ಇಂದಿನ ನಡುವೆ ಹನ್ನೆರಡು ವರುಷಗಳ
ಕಠೋರ ನಿಷ್ಕರುಣ ಕಾಲನದಿ ಹರಿದಿತ್ತು.

**—ಗಂಗಾಧರ ಚಿತ್ತಾಲ**

# ಮಾಯಿಯ ಮೂರು ಮುಖಗಳು

( ನಾಲ್ಕನೆಯ ಮುಖವನ್ನು ಕಂಡಿಲ್ಲ )

ಮಾಯಿ, ಮಹಾಮ್ಮಾಯಿ
ಮೂರು ವಿಧದಿಂದ ನೀನೆಮ್ಮ ತಾಯಿ.
( ಸಾಕು ತಾಯಿ; ದತ್ತತಾಯಿ; ಹೆತ್ತ ತಾಯಿ. )
ಮೊಟ್ಟಮೊದಲಿಗೆ ಬರುವಿ ಸಾಕುತಾಯಾಗಿ
ಬಳಿಸುವೆಯೆ ಬಾಳ ಬೆಳೆಸುತ್ತ ಹಾಯಾಗಿ.
ಕರುಳಿಗೊಂದು ಹೊಸ ಕರುಳ ಪಾರಂಬಿ
ಇಳಿಬಿಟ್ಟು ನೆಲವ ನಿನ್ನದೆ ಮಾಡಿಕೊಂಬಿ.
ಮುಟ್ಟಿದರೆ ಮಾಸುವಾ ಸುಳಿಗೆಂಪು ಕಂಬಿ—
ಒಂದೊಂದು ಎತ್ತಿ ಹಿಡಿದಿದೆ ಸೊಟ್ಟ ರೆಂಬಿ.
ನಿನ್ನ ಅಚ್ಚೆಯ ಕೈಯ ತುತ್ತನುಂಡವರು
ತಮ್ಮ ಮುಂಗೈಬಲವ ಕಳೆದುಕೊಂಡಿಹರು.
ಕಣ್ಣುಗುಡ್ಡಿಯೆ ಆಗಿ ಕುರುಡುಗೊಳಿಸುವೆಯಾ ?
ನೆರಳು ನೀಡುತ ಸಸಿಯ ಬರಡುಗೊಳಿಸುವೆಯಾ ?

ಆಮೇಲೆ ಬರುವಿ ನೀ ದತ್ತತಾಯಾಗಿ
ಕರ್ತವ್ಯಗಳ ತೂಗುಹಲಗೆಯನೆ ತೂಗಿ.
ಆಕಾಂಕ್ಷೆ, ಅಭಿಮಾನ, ಕರ್ತವ್ಯ, ಕಾಯಾಸ
ಆದರ್ಶ, ಆವೇಶ, ಮೂದಲಿಕೆ, ಹವ್ಯಾಸ—
ಚಾಣಕ್ಯ ಚಂದ್ರಗುಪ್ತರ ಜತೆಯ ರೀತಿ.
ವಿದುಲೆಯಂಥ ಕಠೋರ ಪುತ್ರಪ್ರೀತಿ.
ಮಾತುಮಾತಿಗು ಈರ್ಷೆ, ಆಸೆ, ಕೆಚ್ಚು
ಕೊಟ್ಟ ಸಾಲಕು ಕೇಳ್ವ ಬಡ್ಡಿಯೇ ಹೆಚ್ಚು.

## ಮಾಯಿಯ ಮೂರು ಮುಖಗಳು

ಕುಳಿತವನ ಕಿವಿಹಿಂಡಿ ಮೇಲಕೆಚ್ಚರಿಸಿ
ಲೆಕ್ಕ ಕೇಳುವಿ ಪೈಗೆ ಪೈಯ ಸವಕರಿಸಿ.
'ನುಗ್ಗಿನಡೆ' ಯೆಂಬ ನಿನ್ನೀ ಪಾಂಚಜನ್ಯ
ಕೇಳಿ, ನಡೆಯಲು ತ್ರಾಣ ಉಳಿದವನೆ ಧನ್ಯ.
ಕೊನೆಗಾಲ ಬರುವಿ ನೀ ಹೆತ್ತತಾಯಾಗಿ.
ಕನಸ ಹಿಂದಿನ ಕನಸ ಬೊಗಳು ನಾಯಾಗಿ.

ಮುಗಿಲಮೂವಟ್ಟೆಗಳ ಮೂದಲಿಸುವಂತೆ
ನಡೆದಿರಲು ಹೊಕ್ಕುಳಲಿ ವ್ಯಾಕುಲತೆ ಚಿಂತೆ.
ಮರಣವನು ಗೆದ್ದವರು ರಣದಿ ಓಡಿಹರು.
ಕಳೆದ ಕ್ಷಣವನು ಅಂಗಲಾಚಿ ಬೇಡಿಹರು.
ಯದ್ವಾ ಜಯೇಮ ಯದಿ ವಾ ನೋ ಜಯೇಯು
ಎಂದು ನಡುಗಿತ್ತು ನರ, ಬಿಗಿದಿರಲು ಸ್ನಾಯು.
ರಟ್ಟೆಯೊಳಗಿತ್ತು; ಕಿಪ್ಪೊಟ್ಟೆಯೊಳಗಿಲ್ಲ.
ಬಿಲ್ಲಿನೊಳಗಿದ್ದ ಎದೆ ರಟ್ಟೆಯೊಳಗಿಲ್ಲ.
ಹೇಡಿಮಾಂಸವು ಮನದ ಮಾತು ಜರೆದಿತ್ತು.
ಮುಗಿಲಿಗಾನಿಸಿದ ನಿಚ್ಚಣಿಕೆ ಮುರಿದಿತ್ತು.
ಒಡಲು ಒಡ್ಡುವ ಬಲೆಯ ಕಣ್ಣು ನೋಡೀತೇ ?
ಬಸಿರು ಬರೆದಿರುವ ಗೆರೆ ಬಾಳು ದಾಟೀತೇ ?

ಈ ಹಾಡ ತಿರುಳನ್ನು ಕುರಿಯುತರಿತವನು,
ತಾಯ ಇನ್ನೊಂದು ಮೊಗವನ್ನು ಅರಸುವನು.

—**ಶಂ. ರಾ. ಮೊಕಾಶಿ** (ಪುಣೇಕರ)

# ಸಮುದ್ರ ಮೋಹಿನಿ

## ೧

ಸಮುದ್ರ ನಗುತ್ತಿತ್ತು ಬುರುಗಿನ ದುಗ್ಧ ಹಾಸದಲಿ.
ಸುತ್ತುಮುತ್ತಲಿನ ರೆಂಬೆಕೊಂಬೆಗಳಿಂದೆದ್ದ ಕೋಲಾಟಧ್ವನಿ
ಹಕ್ಕಿಕಿಲಕಿಲದ ಗೆಜ್ಜೆ ಕಿಂಕಿಣಿಯ ಗಂಧರ್ವಗೀತ
ಮರಮರ ಹನಿಸುವ ಹೂಮಳೆಯ ಏಕತಾನ
ವಿವಿಧವರ್ಣದ ಹೂಗೊಂಚಲುಗಳಿಂದುಕ್ಕಿ ಜಿಗಿದ
ಜೀಕಳಿ ನೀರಿನ ಮಂಜುಳರವ
ಎಲ್ಲವೂ ಒಂದುಗೂಡಿ ಲೀನವಾಗಿತ್ತು ಕಡಲನಗೆಯಲ್ಲಿ.
ಅದು ಯಾವ ಸ್ಥಳ ನೋಡಿದೆಯಾ, ಗೊಲ್ಲ ?
ವೃಕ್ಷದ್ವಯದಿಂದ ಕುಬೇರ ಸಂತತಿಯೆದ್ದ ನೆಲ.
ಅಜಗರ ಆಮೆಗಳ ತೊಗಲ ಕಳೆದು ಅರಸರೆದ್ದ ಸ್ಥಳ.
ಬಂಡೆಗಲ್ಲಿನಿಂದ ತೇಜವತಿಯೆದ್ದ ಕ್ಷೇತ್ರ.
ಇದನ್ನರಿತ ಆ ಮೇರುವನ್ನು ಕೇಳು.
ವರುಷ ವರುಷಗಳಿಂದ ಕಾಣುತ್ತ ನಿಂತ
ಆ ಮಹಾಮಹಿಮನನ್ನು ಕೇಳು,
ಮತ್ತೆ ನಿನ್ನ ಗೊಲ್ಲಮನ ತೃಪ್ತಿಪಡಿಸಿಕೋ.

ಅಗೋ ನೋಡು ಈ ನೃತ್ಯಮಹೋತ್ಸವ ಎಲ್ಲೆಲ್ಲೂ.
ಆ ಸಾಗರಸಲಿಲದಲಿ ತೆರೆತೆರೆ ಮುದ್ದಾಡಿ ಎದ್ದೆದ್ದು
ಹೊಡೆಯುತಿವೆ ಲಾಗಲಗ್ಗೆ ದೂರ ದಿಗಂತದನಕವೂ
ವಿಶ್ವಕುಣಿಸುವ ಆ ಸಂಜೀವನೀ ರಸ
ಹರಿಯುತಿದೆ ಎಲ್ಲೆಲ್ಲೂ ಝುರಿಝುರಿಯಾಗಿ,
ಸಮುದ್ರದೊಡಲಿಂದ ಹೊಮ್ಮಿ!

## ಸಮುದ್ರ ಮೋಹಿನಿ

೨

ಆಹಾ ಸಮುದ್ರವೇ!
ವಿಶ್ವವ್ಯಾಪಿ ಸಮುದ್ರಲಹರಿಯೇ !
ನಾ ಹುಂಬ, ಮಣ್ಣಿನ ಮಡಿಕೆಯಲಿ ಪ್ರಾಣವ ಹೂಳಿಟ್ಟು
ಚಪ್ಪರಿಸುತಿದ್ದೆ ಹೊಟೇಲಿನ ಆಯ್ಸ್ಕ್ರೀಮು
ಸವಿಯುತ್ತಿದ್ದೆ ಚಿತ್ರಪಟದ ಪ್ರೇಮುಕಸರತ್ತು............
ಎದುರು ನಗುತ್ತಿತ್ತು ಸಮುದ್ರ ನೊರೆಯ ಕ್ಷೀರಹಾಸದಲಿ.
ಉಸಿರುಗಟ್ಟಿದ ಪ್ರಾಣಕೆ ಪ್ರಾಣವಾಯು ನೀಡುವ
ಪಯೋಮಯ ಶಾಂತ ಸದ್ದು !
ಕಾಲ್ಕೆಳಗೆ ಹರಹಿದ ಬೆಸ್ತನ ಜಾಲಜಾಲಗಳ ದಾಟಿ
ಸಮೀಪಿಸಿದೆ ಜಲಪ್ರದೇಶ.
ಹತ್ತಾರು ಮಹಾಯಾಗಗಳ ಮಾಡಿದ ಅರಸನಂತೆ
ತಲೆದೂಗುತೆಂದೆ ಹೊಸವಿಜಯದುತ್ಸಾಹದಿ—
‘ ನಾನೀಗ ಬದುಕಲರ್ಹನು ಈ ಮರ್ತ್ಯಲೋಕದಲಿ. ’

ಓ ನನ್ನ ಬಂಧು ಭಗಿನಿಯರೇ
ಸ್ತಂಭಿತ ಕೆರೆಬಾವಿನೀರಿನಲಿ ಈಸಾಡಬಯಸುವ ಜೀವಿಗಳೇ
ಇಗೋ ಬನ್ನಿರಿ ಈ ತೀರಕ್ಕೆ
ಎಲ್ಲೆಲ್ಲೂ ಸೆಲೆಸೆಲೆಯಾಗಿ ಹೊಳೆಹೊಳೆಯಾಗಿ ಹರಿವ
ಈ ಸಮುದ್ರಜಲದಲ್ಲಿ ಈಸಾಡಬನ್ನಿರಿ,
ಅದರ ಜಲಬಿಂದು ಸ್ಪರುಶಕ್ಕೆ ಮರೆಯಿರೀ
ಮಳಲಲಿ ಹರಹಿದ ಬೆಸ್ತನ ಜಾಲಗಳನ್ನು .

—ಅರವಿಂದ ನಾಡಕರ್ಣಿ

# ಚಂಡಿಕಾಹ್ವಾನ

೧

ಜಾಗತಿಕ ಯುದ್ಧವೆರಡನು ಕಂಡ ಜಗದಿಂಡೆ,
ನೀಗಬೇಡಾ ರಕ್ತಪಾನದಿಚ್ಛೆಯ ತಾಯಿ !
ಸಾಲದೋ ಸಾಲದೀ ಕುಡಿತ ರಾವಣನುದರ–
ಕರೆಕಾಸುಗಡಲೆಯನು ಸುರಿದಂತೆ ಸರಿ ಕಾಣೆ !
ಇಷ್ಟಕೇ ತಣಿಯೆ ಲೋಕೇಷ್ಟ ತಣಿಯದು ಸುಪ್ತ
ಚಿತ್ತದಲ್ಲಿಹ ತೃಷ್ಣೆಯೊಡತಿ ನೀನಾಗಿರಲು—
ಮತ್ತೆ ಬಾ ರಕ್ತಬೀಜನ ಕುಲದ ರಕ್ತವನು
ಹೀರಲೆತ್ತಿದ ನಾಲಿಗೆಯ ಚಾಚಿ, ನೆಲದಗಲ
ಬಿಚ್ಚಿ ಬಾಯ್; ನರ ಅಸುರನಾದನೀ ಯುಗದಲ್ಲಿ
ಮತ್ತೆ; ದೇವಾವತಾರದ ಪೂರ್ವಪೀಠಿಕೆ ಜ–
ಗತ್ತುಂಬ ದೈತ್ಯಾವತಾರವಲ್ಲವೆ ಹೇಳು ?
ಹುಟ್ಟಿಸಿದ ನೀನೆ ಹಿಂಕರೆಸಿಕೊಳಬೇಕಿದನು !

೨

ಹೂದಳಿರುಗಳನೆಸೆದು ಗೆಳೆಯರಾಡಿದ ಕಾಲ
ಬೇರೆ; ಅರಿವೆಯ ಚೆಂಡನಾಡಿದರು ಮುಂಬರಿದ
ಕಾಲಮಾನದೊಳಂದು; ಕಾಲ್ಚೆಂಡನಾಡಿದರ್
ಈ ಯುಗದ ಆಡುವಳರಿನ್ನು ಬರಲೇಬೇಕು
ಚೆಂಡಾಟ—ಚಂಡಿಚಾಮುಂಡಿಯರ್ ನರಶಿರಗ–
ಳೊಂದರ್ಬುದವ ಹರಡಿ ಧ್ರುವದಿಂದ ಧ್ರುವಬರಂ

## ಚಂಡಿಕಾಹ್ವಾನ

ಬೀಸುಗಾಲಿಂದೊದೆದು ಕ್ರೀಡಿಸುವ ಕೆಂಗಾಲ—
ಚೆಂಡಿಕೆಯು ತೆಗೆದ ಚೆಂಡಿನೊಳಿಂದು ಮಾಡಿದ ಚ-
ರಂಡಿತನವನು ತೊಳೆವ ಚಂಡಿಕೆಯ ಚೆಂಗಾಲ !
ಚಂಡ ಮಾರುತನೇರಿ ಬಂದ ಬಾಂಬರುಗಳೂ
ಸೋತೋಡಿದವು; ಗಗನ ಸಾಮರ್ಥ್ಯಗುಂದಿ ಕಣ್—
ಬಿಡುತಿದೆ ಮಹಾಶೂನ್ಯದುಸಿರಟ್ಟಿ ದೆಸೆದೆಸೆಗೆ !

೩

ದಶಕಂಠ ರಾವಣರ ಶತಕಂಠ ರಾವಣರ
ರಕ್ತಮಾಂಸ—ಸ್ವೇದಬೀಜ, ಭಸ್ಮಾಸುರರ
ಅವತಾರಗಳ ಅಪ್ಪತನ—ಅಮ್ಮತನ ವಹಿಸಿ
ಮೆರೆವ ಪಾಂಡಿತ್ಯ ಪುರವಾಗುತಿದೆ ನರಶಿರೋ—
ನಕ್ಷತ್ರಗೋಲವಲ್ಲಲ್ಲಿ ಭರದಿಂದ; ಭಾ—
ರತದ ಭೂಭಾರ ನಿಮಿನಿಮಿಷಕೂ ಹೆಚ್ಚುತಿದೆ
ಆಲೋಚನಾಭಾರದಿಂದ ಈ ನಗರಗಳ !
ಕ್ಷತ್ರರಳಿದೀ ಕಾಲದಲಿ ನಡೆವ ಯುದ್ಧವ—
ಕ್ಷತ್ರ—ನಕ್ಷತ್ರ, ಮಾಯಾಮಯ ಮಹಾಯುದ್ಧ !
ಪುರುಷಾರ್ಥ ಸಿದ್ಧಿಗಲ್ಲವೆ ಅಲ್ಲವೀಮಸಕ
ಪ್ರಕೃತಿಯರ್ಥಕ್ಕೆಂದು ಮಾಳ್ಪ ಮಾಯಾವಿತನ,
ಪುರುಷಮಾರಣಹೋಮ; ಬಲಿನರಪುರೋಹಿತನು !

೪

ರವಿಯ ನುಂಗುವುದಾಗಲಿಲ್ಲ ಮಾರುತಿಗಂದು,
ಕವಿ ಕೂಡ ಹಿಂಜರಿದ ರವಿಯ ನುಂಗಿಸಲಂಜಿ;

## ಚಂಡಿಕಾಹ್ವಾನ

ರವಿಯ ಮಿಾರಿಸಲೆದ್ದ ಪಂಡಿತಾರವಿತಂಡ
ತವಕಿಸುತ್ತಿದೆ ಕತ್ತಲುಣಲಿಂದು ಬಕಬಾಯ
ತೆರೆದು; ಜಪ್ಪಿಸಿಕೊಟ್ಟ ಕವಿ ಶಾಪವನ್ನಿಂತು;
ಚಂಡೀಮುಖಕ್ಷುತ್ಪಿಪಾಸೆಗಳ ನೀಗಿಸಲು
ಮಂಡೆ ಬೀಳಲಿ ಬಿಟ್ಟು ದುರ್ಧರ ಕಬಂಧವ, ಚ-
ರಂಡಿಯಲಿ, 'ನಗರ ನಗರವ ಕಸದ ಕುಂಡಿಯಲಿ !
ಕವಿಯನವಿಯೆಂದ ಶಾಸ್ತ್ರಾಕ್ಷ್ನಾವಿಚಂಡಿಕೆಗೆ
ಹವಿಯಾಗದುಳಿಯುವುದ ಕಂಡರಿಸಿವರನಿಲ್ಲ—
ಬವರ ಚಂಡೀಯಜ್ಞ, ಪ್ರಕೃತಿಭೋಜನ ಬರಲಿ;
ಕವಿ ರೌದ್ರ ನಿಲಲವಳ ಜಿಹ್ವಾವತಾರವಲಿ !

೫

ಪಂಡಿತನೆ ಪಂಡ ಅಥವಾ ಪುಂಡಪಶುಕಲಿಯ
ಖಂಡದಲಿ ಮೇಧಸ್ಸು; ಮೇದಸ್ಸು; ವಿಜ್ಞಾನ—
ಮುಂಡುತರ್ಕವಪಾಯಮಾನವೀಯಜ್ಞಕ್ಕೆ
ದಂಡವೇದದ ಸೂಕ್ತವನುವಾಕ; ಮುಂಡವೆ ಪು-
ರೋಡಾಶಪಿಂಡ; ಖಂಡನದ ಖಂಡಿತ ಸಾಮ
ದಾನ; ನೃತ್ಯ ಪ್ರೇನೃತ್ಯ ! ಜಯಚಂಡಿಕೇ,
ಚಂಡಿಕೆಯ ಮೊದಲೆ ಕಿತ್ತೇರಿಸಿಹೆ ನಿನ್ನಡಿಗೆ !
ಭಾರತೋದ್ಧಾರಕ್ಕೆ ಬಾರಭಂಗಿನಿ, ಗುಡಿಸು
ಕೌರವ್ಯ–ಬೌರವ್ಯ–ರೌರವ್ಯ ರಂಪಗಳ;
ಹೊಸಹುಟ್ಟ ಹೊಟ್ಟೆಯಲಿ ಹೊತ್ತ ಬಸಿರಿನ ಬಯಕೆ
ತೀರಲಿಂದೇ ಬಂದು ನಿಲ್ಲು ಜಗದಂಬೆ ಬಾ-
ಯುಂಟೆಂದೆ ಬೊಗಳುವರ ಮೂಕಿಸುವ ಮೂಕಾಂಬೆ !

೬

ಕೋಲ್ಮಿಂಚುಗಣ್ದೆರೆದು ಸೀಳ್ಸಿಡಿಲ್ಗೈ ಹಿರಿದು
ಕಾರ್ಗುಡುಗುವಾಯ್ದೆರೆದು ಭೂವ್ಯೋಮ ಪಾತಾಳ–
ವೊಂದು ಮಾಡುವ ಮೂರ್ತಿಯಾಗಿ ಮೂಡಿದ ದೇವಿ,
ಬಾಂಬಾಗು; ಶಾಂತಿಶತ್ರುಶಿರೋವಿದಾರಣ–
ಸ್ತಂಭವಾಗಿದೊ ನಿನಗೆ ಹಿಡಿದ ಲೇಖನಿಯಾಣೆ,
ಮಡಿದ ಕವಿಗಳ ಕಾವ್ಯಖನಿಯಾಣೆ, ದುಡಿದು ದಿನ
ದಿನ ಬಳಲುತಿಹ ಕೋಟಿ ಕೂಲಿಕಾರರ ಎದೆಯ
ನಡುರಕ್ತನಾಳದಾಣೆ; ದುರುಕ್ತ, ದುಷ್ಕಾರ್ಯ,
ದುರಹಂಮದಪ್ರದರ್ಶನ ನಿಲ್ಲಲಿನ್ನು ಕಲಿ–
ಮಲಿನ ಹರಿಯಲಿ, ವಿರೇಚಕವ ಕೊಡು ಲೋಕಕ್ಕೆ
ರಣವೈದ್ಯೆ, ರಕ್ತಾಕ್ಷಿ, ರುದ್ರರಸಸಂಪನ್ನೆ,
ರಮಣೀಯತೆಯ ಹಡೆವ ರೂಕ್ಷರೂಪಚ್ಛನ್ನೆ !

—ಬಿ ಎಚ್. ಶ್ರೀಧರ

# ಬೀದಿಬಸವಿಯಾದ ಇಳೆ

ಬಸವಿಯಂತೆ ಬಿದ್ದಿರುವೆನು
ನಾನು ಬೀದಿ ಬತ್ತಲೆ !
ವಿದ್ಯುತ್ತಿನ ಝಗಮಗದಲಿ
ನನ್ನೆದೆಯಿದೆ ಕತ್ತಲೆ !
ಮನೆಮನೆಗಳ ವೆತೆ ಕತೆಗಳು
ಈ ತೋಳಿನ ಸಂಕಲೆ
ಬಾನಂಗಳ ಮೇಲ್ಗಡೆಯಲಿ
ಆನಂದದ ಕಹಳೆ !

' ಕುತಸ್ತ್ವೇ ಕಶ್ಮಲಮಿದಂ '
ಡಾಂಬರದಲಿ ಮೈಮೆತ್ತಿದೆ
' ವಿಷಮೇ ಸಮುಪಸ್ಥಿತಂ '
ನನ್ನ ನಾಡಿಗಳಲಿ ಹರಿಯು-
ತಿಹುದು ಜಗದ ಕಸಕೊಳೆ !
ಬಸವಿಯಂತೆ ಬಿದ್ದಿರುವೆನು
ನಾನು ಬೀದಿ ಬತ್ತಲೆ !

ದಣಿದ ಕಾಲ ತುಳಿತ ಗೀತ,
ಗಾಲಿಗಳ ಸಂಗೀತ,
ನಡೆದಿಹುದು ಹಗಲಿರುಳು
ಕೊರೆಯುತ್ತ ಕಲ್ಲ ಕರುಳು !
ಓದು ನನ್ನ ಹೃದಯದಲ್ಲಿ
ಕೋಟಿ ಜನರು ಕಾಲಿನಲ್ಲಿ

ಬರೆದರಿಲ್ಲಿ ಭಾರತ !
ಮೂಕವಾದ ಶೋಕಸುಖ
ಅಂಗಾಂಗದಿ ರೇಖಿತ,
ಕಥಕ್ಕಲಿಗೆ ತಾಳವಿಲ್ಲ,
ಬಂದದ್ದು ಹೋದದ್ದು
ಭಾರತಕ್ಕೆ ಮೇಳವೆಲ್ಲ.
ಕಂಬನಿಗಳ ಸೋಲು ಸೊಲ್ಲ
ಕೊರೆದಿರಿಸಿದ ಶಾಸನ :
ನಾನೆ ವ್ಯಾಸನಾಸನ !

ನೋಡದೋ ನಿಂತಿಹನು
ದೇವಪುತ್ರ ಮನುಜನು
ವಿದ್ಯುತ್ತಿನ ಕಂಬದ ಬದಿ
ಸೋತು ಆತು ನಿಂತಿಹನು !
ಅವನ ಕಣ್ಣ ಕುಣಿಗಳಲ್ಲಿ
ಹಿರೋಶಿಮಾ ಧಗ ಧಗ
ಎದುರಿಗಿರುವ ಕಿಟಕಿಯಲ್ಲಿ
ಕಾಮರತಿಯ ಝುಗಝುಗ !
ಶಿಲುಬೆಗೇರಿದವನೆ ಕ್ರಿಸ್ತ
ನಿಂತಿಹನು ಆಪದ್ಗ್ರಸ್ತ;
ಅವನ ರಕ್ತ
ಜನ ಜಿಹ್ವೆಯ ರುಚಿರಸ !
ಅವನ ಮಾಂಸ
ನಿತ್ಯಕ್ಷುಧೆಯ ಷಡ್ರಸ !
ಎದುರಿಗದೋ ಓಡುತಿಹುದು
' ಪಾಯಲೇಟ 'ನ ಕಾರು.

## ಬೀದಿಬಸವಿಯಾದ ಇಳೆ

ಮೇಲುಗಡೆಗೆ ಹೊರಳಾಡುವ
ರೋಗಿ ಚಂದ್ರ ಚಾರು !
ಬಸವಿಯಂತೆ ಬಿದ್ದಿರುವೆನು
ನಾನು ಬೀದಿ ಬತ್ತಲೆ !
ವಿದ್ಯುತ್ತಿನ ಝಗಮಗದಲಿ
ನನ್ನೆದೆಯಿದೆ ಕತ್ತಲೆ.

ಗಂಟೆ ಹೊಡೆಯಿತು ಒಂದು.
ಚೀರುತಿದೆ ಹಸಿದಿರುವ ನಾಯಿಯೊಂದು.
ಕಾರುತಿದೆ ಸೆರೆಗುಡುಕ ಬಾಯಿಯೊಂದು !
ಅತ್ತಕಡೆ, ಇತ್ತಕಡೆ
ಸೋತವರ, ಸತ್ತವರ
ಚಪ್ಪಲಿಯ ಕಾಲುನಡೆ !
' ಈವ್ನಿಂಗ್ ಇನ್ ಪ್ಯಾರಿಸ್ '....
ತೋಳ ತೆಕ್ಕೆಯು ನಡುವೆ
ಕೊಂಡ ಕಾಮದ ಸರಸ;
ನನ್ನೆದೆಯ ಒಳಗಡೆಗೆ
ಜಗದ ಜೀವದ ವಿರಸ !
ಬಸವಿಯಂತೆ ಬಿದ್ದಿರುವೆನು
ನಾನು ಬೀದಿ ಬತ್ತಲೆ !
ವಿದ್ಯುತ್ತಿನ ಝಗಮಗದಲಿ
ನನ್ನೆದೆಯಿದೆ ಕತ್ತಲೆ !

—ಹೇಮಂತ

# ವಾರಕೆ ಒಂದೇ ರವಿವಾರ

೧

ಹೊತ್ತಾಯಿತೇಳುವಿರ, ಗಂಟೆ—ಎಂಟಾಯಿತು
ಮೇಲ್ಮುಸುಗಿನೊಳನುಸುಳಿ ಕಿವಿಯಾಳಕಿಳಿದಿತ್ತು
ಸೂಚನೆಯ ಮೊದಲ ಮಾತು;
ಸಕ್ಕರೆಯ ಸವಿನಿದ್ದೆ ಹೊರಹೊರಳಿ ಮಲಗಿತ್ತು
ಯಾರದೇತರ ಹಂಗು ಅದಕೆ ಇತ್ತು ?
ಹೊಸತಿಲಲಿ ರವಿವಾರ ರಂಗವಲ್ಲಿಯ ಚೆಲ್ಲಿ
ಮನೆತುಂಬ ಮಕ್ಕಳೊಲು ಕುಣಿಯುತಿತ್ತು.
ಅಡುಗೆಮನೆ ಪಡಸಾಲೆ ಮತ್ತೆ ನಡುವಿನ ಕೋಣೆ—
ತುಂಬ ಮುಂಜಾವಿನೆಳೆ ಮಧುರ ಗೀತ !
ಅದಕೆ ಹಿಮ್ಮೇಳವೆನೆ ತಾಳ ಹಿಡಿದಿಹುದೇನು
ಕೈಬಳೆಯ ಗುಲ್–ಗುಲುಕು ಗುಲುಕುನಾದ.
ಯಾವ ನಾಡಿನ ಹಕ್ಕಿ ಬಂದು ಹಾಡುವದಿಲ್ಲಿ
ಹೆಸರ ಕೇಳಲುಬಹುದೆ ಕೈಯ ಹಿಡಿದು ?
ಲಜ್ಜೆ ನಸುಗೆಂಪೇರಿ ಗಲ್ಲದಲಿ ಗುಳಿಮಾಡಿ
ಕಣ್ಣಿನಲಿ ಕಣ್ಣಾಡಿ ಕುಶಲ ಕೇಳಿ
ಹಕ್ಕಿರೆಕ್ಕೆಯನೇರಿ ಹತ್ತು ದಿಕ್ಕಿಗು ಹಾರಿ
ಮನಸು ನೆಲಕಿಳಿದಿತ್ತು ಹೊರಳಿ ಹೊರಳಿ.

೨

ಬಾ ಬಾರ ಪುಟ್ಟಾಣಿ ಓ ನನ್ನ ಕಟ್ಟಾಣಿ
ನನ್ನೆದೆಯ ಮೇಲಿರುವ ಕರಿಮಣಿ ಸರ;

ಇವಳು ಮಗುವಾಡಿಸುವ ಮಾತು ಕಲಕಲ ಝರಿ
ತುಂಬಿ ಹರಿದಿಹ ಪ್ರೀತಿ ಹೊನಲು ಪೂರ
ತಾಯಿತೊಡೆಯಿಂದಿಳಿದು ಕೂಗಿ ಸಿಳ್ಳನು ಹೊಡೆದು
ಈಚೆ ಹರಿವುದು ಅಂಬೆಗಾಲ ರೈಲು;
ಮನೆತುಂಬ ಹರಿದದ್ದೆ ಏಸೊ ಮೈಲಿನ ದಾರಿ
ನಮಗಿಂತಲೂ ಎಳೆಯ ಮಗುವೆ ಮೇಲು.
ಗಾಳಿ ಬೆಳಕೂ ಮಾತನಾಡಿ ಗೆಳೆತನ ಮಾಡಿ
ಈ ಮಗುವಿನೊಡನಾಡಿ ಮೂರು ಗಳಿಗೆ;
ಬಣ್ಣ ಬಣ್ಣದ ಪಕ್ಕ ಹೊತ್ತ ಪಾತರಗಿತ್ತಿ
ನಿನ್ನ ಥಳಕೇನು ಬಾ, ಬಾರ ಒಳಗೆ.
ತೋಟದಲಿ ಗಿಡಬಳ್ಳಿ ಹಸುರು ಮುರಿಯುತ್ತಿಹವು
ಟೊಂಗೆ ಟೊಂಗೆಗು ಹೂವು ಸಾವಿರಾರು;
ಪಕಳೆ ಪಕಳೆಗು ಚೆಲುವು ಒತ್ತಿ ನಿಂತಿಹುದೇನು
ಎನಿತು ನಯ ನಾಜೂಕು ಒಳಗು ಹೊರಗು.
ಕಂಡವರ ಮನಸು ರಸ ಕಾಶ್ಮೀರ ಸಂಚಾರಿ
ಕೂಸು—ಸಾಕ್ಷಾತ್ಕಾರಿ
ನಾನು ನೀನೂ ಇಲ್ಲಿ ವೇಷಧಾರಿ.

೩

ಮಗುವಿನೊಳಮನಸಿನೊಳಗೇನು ಮಜ ನಡೆದಿಹುದು
ಗಾಳಿ ಬೆನ್ನನ್ನೇರಿ ಹೊರಟ ನೋಡ;
ಪ್ರತಿನಿಮಿಷಕೂ ಹಾಡಿನಣಕ ಮಾಡುವ ಮೋಜು
ಮಾತೆಂಬುದೇ ಬರುವದಿಲ್ಲ ಕೂಡ.
ಹಲವಾರು ಗತ್ತುಗಾರಿಕೆ ಹೂಡಿ
ಮೇಲೇರಿ ಬರುವ ನೋಡಿ.

ಬೇಕೆನಿಸಿದರೆ ಗೊಂಬೆ ಗಿಲಗಂಚಿಯೊಡನಾಟ
ಬೇಡವಾದರೆ ಮನೆಯ ಹಂಚು ಹಾರುವ ತೆರದಿ
ಬಲು ಜೋರು ಚೀರಾಟ.
ಕಣ್ಣಿನಲ್ಲಿಯೆ ಸಂಚು ಒಳಸಂಚು ನಡೆಯುವದು
ಮರುಗಳಿಗೆ ಕಂಡಲ್ಲಿ ಕೋಲಾಹಲ !
ಏಳು ಕಡಲಿನ ಆಚೆ ಇದ್ದರೂನೂ ಬಿಡದು
ಎತ್ತಿ ನಿಂತನೊ ಹನುಮ ತನ್ನ ಬಾಲ.

೪

ಇಂಥ ಸಂಭ್ರಮ ನೋಡಲೊಂದೆ ದಿನ ಸಾಕೇನು
ನಾಲ್ಕು ದಿನ ಬೇಕೆಂದರೆಲ್ಲಿಹವು ಹೇಳು ?
ಬದುಕಿನೊಡಲಿನ ಕಥೆಗೆ ಮುನ್ನುಡಿಯು ಬೇಕೇನು
ಇರುವಂತೆಯೇ ಅಚ್ಚು ಹಾಕಲೇಳು !
ವಾರದಲಿ ಒಂದು ಒಂದೇ ಸರತಿ
ಹಬ್ಬದೊಲು ರವಿವಾರ ಬರುತಿರುವದು
ಬರುವನಿತರೊಳೆ ಮತ್ತೆ—
ಹೊರಟೇ....ಹೋಗುವದು ಎಕ್ಸ್‌ಪ್ರೆಸ್ಸು ಗಾಡಿ
ವಾರದೊಳು ಒಮ್ಮೆಯಾದರು ಕೂಡ
ಎರಡು ಸಲ ಬರಬಾರದೇನು ಖೋಡಿ !

—ಸಿದ್ದಣ್ಣ ಮಸಳಿ

## ಸತ್ತಾತ್ಮಗಳ ಸಂಚು

೧

“ ಕಿಟ್ಟೆಲ್ ಕೋಶದ ನೂರಾ ಐವ-
ತ್ಮೂರನೆ ಪುಟದಲಿ ” ಸಿಕ್ಕುವ ಆತ್ಮದ
ಪಡಿಯಚ್ಚುಗಳತ್ಯಸಂಖ್ಯ ಸುತ್ತಲು
ಕಾಣುತ್ತಿವೆಯೋ ವಿಚಿತ್ರ ರಾಜ್ಯದ
ನಗರದೊಳಬ್ಬಾ ಅವುಗಳ ಕುಣಿತವ
ಕಂಡೆ ಕಂಡೆ ಕಣ್ಬಿರಿದೊಡೆವನಕ !

ಅಂತಹ ನಂಬರ್ ಒಂದನೆಯಾತ್ಮವು
ಪಶ್ಚಿಮ ಬುದ್ಧಿಯ ತರ್ಕಪಂಡಿತನ
ವೈಜ್ಞಾನಿಕತೆಯ ಹುಬ್ಬನು ಕೊಂಕಿಸಿ
ಪ್ರೇತರಾಜ ತಾನೆಂದು ಅಹಮ್ಮಿಸಿ
ನುಡಿದಿತ್ತರ್ಥವ—‘ ಅಜೋ ನಿತ್ಯಃ
ಶಾಶ್ವತೋಽಯಂ ಪುರಾಣಃ
ನ ಹನ್ಯತೇ ಹನ್ಯಮಾನೇ ಶರೀರೇ ’—
ಎಂಬೀ ಗೀತಾವೇದಕ್ಕಿಂತು :
‘ ಅಜ ಯಾವಾಗಲು ಇರತಕ್ಕದ್ದೇ
ಅದರ ಶರೀರವ ಕೊಂದರೆ ಮನುಜರು
ಕೊಂದಂತಲ್ಲವೆ ಅಲ್ಲ ಅದೆಂದೂ
ಸಾಯದು ಪುರಾಣ ಪುಸ್ತಕದಲ್ಲಿ
ಇರುವ ಅದೆಷ್ಟಕ್ಕೂ ಶಾಶ್ವತವಲ ! ’

ಹೌದೇ ಹೌದೋ ಗುರುಗಳ ಗುರು ನೀ-
ನೆಂದೆರಗಿದೆನಾ ‘ ಅಮೃತ ’—ಅಲ್ಲ ಮೃತ-

ಮನುಷ್ಯ ಪಿಂಡದ ಅಮೃತ ಪದಂಗಳಿ-
ಗಹೋ ಅದರ ಚಟುವಟಿಕೆಯ ಬಣ್ಣಿಸ-
ಲಮೃತವಾಣಿಗಳವಲ್ಲ; ಅದಕ್ಕೇ
ಜೀವನ್ಮೃತ ಕಾವ್ಯಾಲಂಕಾರದ
ವಿರಾಡುಪಮೆ ರೂಪಕಗಳವಶ್ಯಕ :
ಅವು ಹೊಳೆಯವು ತರ್ಕೇತರ ಬುದ್ಧಿಗೆ—
ಹೊಳೆಯಲವೈಜ್ಞಾನಿಕ ಮತ್ತಂತವು !

ಜಗತ್ತಿನೆಲ್ಲಾ ಬಿದಿರಿನ ಮೆಳೆಗಳ
ಕಡಿದು ತಂದು ಭಾರತ ಭೂತಲದಲಿ
ರಾಶಿ ಹಾಕಿ ಭೂಮಂಡಲದಲ್ಲಿಹ
ಗಂಧಕ ರಂಜಕವೆಲ್ಲವನೊಟ್ಟಿ
ಆಟವಾಡಿ ನಾನಾ ವಿಧ ಬಾಂಬುಗ-
ಳಗಣಿತ ಕೋಟಿಯ ಮೇಗಡೆ ಸುರಿದು
ಬೆಂಕಿ ಕೊಟ್ಟರಾಗುವ ಚಟಪಟದಂ-
ತೊದರಿತು ಮೃತಾತ್ಮ ಶಾಸ್ತ್ರೋಕ್ತಿಗಳನು !

ಅವಕ್ಕೆ ಕಾಂಕ್ರೀಟುದಾಹರಣೆಯೆನೆ
ಮತ್ತೊಂದಾತ್ಮವು ಬಂದಿತು ನೋಡಿ
ಅದರೆಲ್ಲಾ ಅವಯವ ಹಾರ್ಡ್‌ಫ್ಯಾಕ್ಟುಗ-
ಳಿಂದಲೆ ಮಾಡಿದ್ದರರೆ ಅದೆಷ್ಟೋ
ವಜ್ರಂಗಳ ಬುವಿಯಿಂದಗೆದಗೆದು
ಗಗನಚುಂಬಿಯಂತ್ರದ ಒಲೆ ಮಾಡಿಸಿ
ಅಣುಶಕ್ತಿಯ ಮಣಗಟ್ಟಲೆ ಉರಿಸಿ
ಕರಗಿಸಿ ಆರಿಸಿ ಸಮೆದ ಹಲಗೆಗಳ
ಜೋಡಿಸಿದಂತಿದ್ದವು ಮಹರಾಯರೆ !

ಅದರ ಗಟ್ಟಿತನ ಕಣ್ಣಿಂದಾಜಿಗೆ
ಮೀರಿತ್ತಲ್ಲದೆ ಎಕ್ಸ್ರೇನಳಿಗೆಗು
ಗಮ್ಯವಾಗಲಿಲ್ಲಚ್ಚರಿಯಚ್ಚರಿ !

ನೋಡಿದೆ ನೋಡಿದೆ ಮೈಕ್ರೋಸ್ಕೋಪಿಸಿ
ಕೋಪಿಸಿ ತಾಪಿಸಿ ಶಾಪಿಸಿ ಪವರೇ
ಸಾಲದಾಯ್ತು ಅದರುದಗ್ರ ನೃತ್ಯವ
ಕಾಣಲು ಸೈನ್ಸಿನ್ನೂ ಅಡ್ವಾನ್ಸಿಸಿ
ಸೂಪರ್‌ಸ್ಕೋಪನು ನಿರ್ಮಿಸಿದಲ್ಲದೆ
ದೃಶ್ಯವಲ್ಲ ಉಹುಂ ಅದರಾ ನರ್ತನ !

೨

ತಾಳ ಲಯಗಳ ಮೀರಿ ನವ್ಯ ವಿ-
ತಾಳ ವಿಲಯಗಳಿಂದ ಹೆಜ್ಜೆಯ
ಕೋಲುಗಾಲಿಂದಿಕ್ಕುವಂತಹ
ವೇಗ ರವಿಕಿರಣಗಳ ನಾಗಾ-
ಲೋಟಕೆಷ್ಟೋ ಪಟ್ಟು ಹೆಚ್ಚಿರ–
ಲಾಗದಾಯ್ತದನಿಂದ್ರಿಯಿಸಲೆನ–
ಗಾಗ ಭಪ್ಪರೆ ಭಲರೆ ಎಂದೆನು.
ಮೂಗಿಗೇರಿಸಿ ಲೆನ್ಸುಗಳ ನಾ
ತಾಗಿಸಲು ಮೆಗಫೋನ ಕಿವಿಗದ
ಕಾಣದಾದೆನು ಕೇಳದಾದೆನು
ಹರಹರಾ–ಅಲ್ಲಲ್ಲ ಐನ್‌ಸ್ಟೀನ್
ರಸೆಲ ಹಕ್ಸ್ಲಿಗಳನ್ನು ನೆನೆದೆನು !

ಕಾಲು ಮೃತ ಕೈ ಮೃತ ಮೊಗದ ಸ–
ರ್ವಾವಯವ ಮೃತ ಅಂತರಂಗದ

ಭಾವ ಮೃತ ಮನುಜತ್ವವೇ ಮೃತ
ಏನ ಹೇಳಲಿ ನಿಮಗೆ ?– "ಸರ್ವಂ
ಖಲ್ವಿದಂ ಮೃತ " ಮೆಂಬ ಸತ್ಯದ
ಲೀಲೆಯನು; ಮತ್ತಂಥ ಮೃತಕುಲ
ಬಾಲ ಹಾರಿಸಿ ನೆಗೆದು ಅಮರರ
ಭಾಷೆ ಕಲ್ಪನೆಗಳಿಗೆ ನಿಲುಕದ
ಮಾಯೆಯನ್ನಾಧರಿಸಿ, ಬದುಕಿದ
ನಾವು ನಾಚುವ ಹಾಗೆ ನವರಸ
ಧಾರೆಯನು ಹರಿಸಿತ್ತು ಉಘೊ ಎಂ-
ದೋರಣದಿ ದಿಗ್ದೆಸೆಯ ತುಂಬಿಸಿ !

ಅಂಥ ನವರಸ ಹರಿಯಲೆಡೆಬಿಡ-
ದೆಂಥ ಷಡ್ರಸಭುಕ್ತಿ ಬಲ್ಲಿರ ?
ಅಂತಕನವೋಲ್ ಕುಳಿತ ಹತ್ತಾ-
ರಂಥ ಆತ್ಮಗಳಲ್ಲಿ ಮನುಜರ
ತಿಂತಿಣಿಯ ಹಿಡಿತಂದು ಹಿಂಡುವ
ಬೆಂತರುಜ್ಜುಗ ನಡೆಯುತಿದ್ದಿತು !
ಒಬ್ಬನನು ಕಬ್ಬಂತೆ ಹಿಳಿದತಿ
ಉಬ್ಬಸಕೆ ಗುರಿಮಾಡಿ ಮಾನವ–
ನಬ್ಬರಿಸಿ ತೆಗೆದೊಯ್ದು ಕೊಪ್ಪರಿ–
ಗೆಯಲಿ ಸುರಿದಾಯ್ತೊಂದು ನಿಮಿಷದಿ !
ಹದವರಿತು ಮತ್ತೊಬ್ಬನನು ಹಿಡಿ-
ದೊದೆದು ಹಣ್ಣಾಗಿಸಿ ಅವನ ಬಲ–
ವೆಲ್ಲವನು ಕೊಂಡೊಯ್ದು ಕೊಚ್ಚಿ ಸ-
ರಕ್ಕನಾ ಹೋಳುಗಳ ಕುದಿಯುವ
ಮಾನತೈಲದಿ ಹುರಿಯಲಾಯಿತು !

ಬಡವರೆಲ್ಲರ ಬಡಿಯಲಲ್ಲಿಯ
ತುಡುಗರಿಟ್ಟಿಹ ಶಸ್ತ್ರವೊಂದೇ ?–
ಕಲಹಕಾರಿ ಸ್ನೇಹ, ಅಂಗಡಿ-
ತನದ ಹೊರನಗೆವಗೆ ಮಹಾನಾ–
ಗರಿಕತೆಯ ಹೆಸರಿಂದ ನಡೆಸುವ
ದಾಸ್ಯದಾನದ ದಮನನೀತಿ ವಿ–
ಜೃಂಭಿಸುವ ಪೇಕಟ್, ನಿಧಿಗಳಿಗೆ
ಕಸಿದು ಕೊಡಿಸುವ ಕಾಂಟ್ರಿಬ್ಯೂಷನ್
ತ್ಯಾಗ ಸೇವೆಗಳೆಂದು ಸಾರ–
ಲ್ಪಡುವ ಸೂರಾರ್ಬೆಟಮಲ್ಲದೆ
ಕೆಂಪು ಕಾಯದೆ ನರನ ಎಂಟೊ
ಕೋಟಿ ರೋಮಗಳನ್ನು ದಿನ ದಿನ
ಕುಂಟು ನೆವಗಳನೊಡ್ಡಿ ಕಟ್ಟಲು !

೩

ಇವುಗಳಿಗೆ ಕೋಟಿಪಟ್ಟುಗ್ರವಪ್ಪಾಯುಧವೊ—
ಪತ್ರ, ಪುಸ್ತಕ, ಪತ್ರಿಕಾಶಂಸೆ, ಉಪದೇಶ !
ಕೆಲವು ದೇವರನೆತ್ತಿ ಬೆಣ್ಣೆಯಲ್ಲದ್ದಿ ಎದೆ-
ಗಿರಿದು ಮನುಜರ ಮೆಲ್ಲಗಿಲ್ಲವಾಗಿಸಲಿನ್ನು
ಕೆಲವು ಜೀವಾದಿಗಳು ಭಾಷಣಿಸಿ ಹಾರ್ಡ್ ಫ್ಯಾಕ್ಟು–
ಗಳ ತರ್ಕಕೌಮುದಿಯೊಳದ್ದಿ ಮೆದುಳನು ಕೊರೆದು
ಕೊಂದು ಚೀಲಕೆ ತುಂಬಿ ಒಳಗಿಡುತ್ತಿರ್ದರಹ !
ದ್ರೋಹಚಿಂತನ ಕೌಶಲವ ಬಳಸಿ ಒಳ್ಳಿದರ-
ನೇಳಿಸುತ ಬೆನ್ನಿರಿದು ಅವರ ಧನವನು ಕಸಿದು
ಆ ಕಟ್ಟಿಗೆಯ ಸ್ವಾರ್ಥದೊಲೆಗಿಟ್ಟು ಮೇಲಿಟ್ಟ

ದುರ್ಜನದ ಬಾಂಡಲೆಗೆ ಸುರಿದು ಹೃನ್ಮೇಧಗಳ
ಬುರ್ಜರಿಯ ಕರಿದು ಕಿಲ್ಬಿಷದೆಣ್ಣೆಯಲ್ಲಿ ಈ
ಕುಣಿವ ಸತ್ತಾತ್ಮರಿಗೆ ಹಂಚಲಾಗುತ್ತಿತ್ತು !
ದೇವ ಸಭೆಯಣಕಿಸುವ
ಅವರ ಸಭೆಯಂತಹುದು !
ಕಾಲ ಮೇಲ್ಮಾಡಿ ನೇತಾಡುತ್ತ ಕೊಂಬೆಯಲಿ
ಜೋಲು ನಾಲಗೆ ಚಾಚಿ ಜೊಲ್ಲು ಸುರಿಸುತ ಕುಳಿತ
ಆರ್ತನವ ಪ್ರೇತಗಳ ಚಾಪಲ್ಯದುಸಿರಾಟ
ಜೀವಿದ್ದವರ ಆಸೆಗಳ ಮೀರಿಸಿತ್ತು. ಈ
ಖಾಸಗಿಯ ಕೂಟ ಮತ್ತಾರಿಗೂ ಕಾಣಿಸದು
ಎಂದರಿದು ಮನ ಬಂದ ಹಾಗೆ ಹರಟುತ್ತಿತ್ತು !

ಒಮ್ಮೆ ಅವುಗಳೊಳೊಂದು ಕಂಡುದೆನ್ನನ್ನಾಗ
ಕಣ್ಮುಚ್ಚಿ ತೆರೆಯುವುದರೊಳಗೆ ಸಭೆ ಬದಲಾಯ್ತು
ದೇಶಭಕ್ಷಕವರ್ಗ " ದೇಭ "ವಾಯಿತು ಹಗೆಯ
ಕೋಶವೆನಿಸಿದ್ದಾತ್ಮವೊಳ್ಳಗೆಯ ನೇಹವನು
ಸೂಸಿತ್ತು, ತಂತ್ರಿಕುಲ ಸಭ್ಯತ್ವವನು ತಾಳಿ
ದೇಶಾವರಿಯ ಭಕ್ತಿ ಗೌರವವ ತೋರಿತ್ತು !
ಮೋಹ ಮದ ಮಾತ್ಸರ್ಯ ಲೋಭ ಕೋಪಗಳೆಂಬ
ಪಂಚಭೂತಗಳಿಂದ ಸಮೆದ ಸತ್ತಾತ್ಮಗಳ
ಆ ನರಕ ದುರ್ಗಂಧದುಸಿರು ಚಣವೊಂದರಲಿ
ಇಂದ್ರನೆದುರಿಡಲರ್ಹವಾದುಪಾಧ್ಯಾಯ ಪ-
ರ್ಫ್ಯೂಮರಿಯ ಆಗರುಬತ್ತಿಯ ಹೊಗೆಯ ಹೋಲಿತ್ತು !

ಬ್ರಹ್ಮಮಾಯಾ ಶಕ್ತಿ ಬರಿ ಸುಳ್ಳು ಬರಿ ಸುಳ್ಳು
ಈ ಬದುಕಿದಂತಿರುವ ಸುಮೃತಾತ್ಮ ಮಾಯೆಯೇ

ಸತ್ಯವೆಂದೆನಿಸಿ ತಾಳ್ದಬ್ಜ್ಞರಿಯ ಅಮಲಲ್ಲಿ
ತಲೆ ತಿರುಗಿ ಧೊಪ್ಪೆಂದು ಜಾರಿ ಮಂಚದ ಕೆಳಗೆ
ಬಿದ್ದು ಕಣ್ತೆರೆದಾಗ ಎದುರಿಗಾ ಮಸಣಿಗರ
ಮಂಡಲದ ಮೆಂಬರರು ಕನಸ ನಿಜಮಾಡಲೆಂ–
ದಂಡಲೆದು ಬಂದು ಮನೆವೊಕ್ಕರಿನ್ನೇಗೈವೆ ?
ಕಂಡವೇಲವರಿಗೆ ಚಹಾ ಕೊಡದೆ ಇರಲೆಂತು ?
ತಿಥಿ ಭೇದ ಮಾಡದತಿಥಿತ್ವ ಸಾಧಿಸಿಕೊಂಡು
ವ್ರತಿಯಾಗಿ ಉಂಡ ಮನೆಗೆರಡನ್ನು ಬಗೆಯುತ್ತ
ಮತಿಯ ವೋಹಿಸಿ ಸಭ್ಯರೈಹಿಕಾರ್ಥಗಳನ್ನು
ಸತತ ಕಸಿಯುವ ಮೃತಾತ್ಮಾವಳಿಯ ಹಾವಳಿಯ
ಬೆಸನಕ್ಕೆ ತಲೆವಾಗಿ ಬಾಳಲೊಮ್ಮೆಲೆ ಹೇಸಿ
ವಶತಪ್ಪಿ ನಿಜವಾದ ಸುಡುಗಾಡ ನಾ ಹೊಕ್ಕೆ !

❦

ಅಲ್ಲ ಹೊಲಸು ಅಲ್ಲ ಹೊಲಸು
ಮಸಣ ನಿತ್ಯ ಸುಂದರ !
ಅಲ್ಲಲೆಯುವ ಹೆಣದಿನಿಜಗ
ಶಿವೋನ್ಮಾದ ಕಂದರ !

ಮಾಂಸ ಮಜ್ಜೆ ಎಲುಬು ನೆಣಗ–
ಳೆಲ್ಲ ಕೊಳೆತು ಹೋದುದು
ಸತ್ತಾತ್ಮದ ನವದ್ವಾರ–
ವಿರಿವ ನಾತ ಹೋಲದು !

ಅಲ್ಲಿಯ ನರಿ ಗೂಗೆ ನಾಯಿ
ಹದ್ದು ಗೊದ್ದ ಯಾವುದೂ—

ಜೊಲ್ಲುಲಿಗಳ ಮರ್ಮಘಾತ
ಕೃತ್ಯಗಳನು ಮಾಡದು!
ಅದರಿಂದಲೆ ರುದ್ರನಲ್ಲಿ
ಭದ್ರವನ್ನು ಪಡೆದನು;
ಅಲ್ಲೆ ಹರಿಶ್ಚಂದ್ರನಾತ್ಮ–
ವಂತನಾಗಿ ನಡೆದನು !

ಮೃತ ಮನುಜತೆವೆತ್ತ ಜನರ
ಶೃಂಗಾರವ ನೋಡಿ,
ಮಸಣದ ಬೀಭತ್ಸ ಹೇಸಿ
ಕಾರದಿರದು ಓಡಿ !

ಹೆಣವ ಕೂಡ ಹಂಚಿ ತಿಂಬ
ಪಿಶಾಚಗಳೆ ಬೇಕು;
ಹಣದಿನಿಗಳ ಹೂಹಾಸಿಗೆ–
ಯಾತಿಥ್ಯವು ಸಾಕು !

ಪ್ರೇತಲೋಕ ಭಯಾನಕತೆ–
ಯಲ್ಲು ಕರುಣೆ ಹೊಳೆಗು
ನೀತಿ ಸತ್ತ ನರಲೋಕದಿ
ನಿತ್ಯ ದುಃಖ ಬೆಳೆಗು !

ಶಾಕಿನಿ ಡಾಕಿನಿಯರೊಮ್ಮೆ
ಅಹಿಂಸೆಯನು ಹಿಡಿದರೂ
ಲೋಕಮಾನ್ಯ ಮೃತಸತ್ವರು
ಛನ್ನ ಹಿಂಸೆ ತಡೆಯರು !

ಮಸಣ ಮದ್ದು ಮೆಚ್ಚಿದವಗೆ
ಎಂಬ ಸೊಲ್ಲು ಸಲ್ಲ–

### ಸತ್ತಾತ್ಮಗಳ ಸಂಚು

ಮಸಣಗಸಣಿ ಮರೆಸಿ ಬಾಳ್ವ
ನಾಗರಿಕತೆ ಹೊಲ್ಲ !
ಬಂದೆ ಮಸಣವಾಸಿಸರೇ
ನಿಮ್ಮ ಸೇರಲಿಂದು !
ಹಂದಲೆಯಿಂದೆತ್ತಿ ಕೊಡಿರಿ
ಹಸಿದೆ ನನ್ನಿಗೆಂದು !

**—ಬಿ. ಎಚ್. ಶ್ರೀಧರ**

# ಔತಣ

ಮುಗಿದಿಹುದು ಹಿರಿದೊಂದು ಔತಣ
ಸುತ್ತಲೂ ಬಿರುಬಿಸಿಲು ರಣ ರಣ !
ಮೂಕ ಸಾಕ್ಷೀಭೂತ ಮುದಿಯ ಹುಣಿಸೆಯ ಮರದ
ಮರುಕ ಸುಯ್ಯಿತು ಗಾಳಿಯೊಲು ಮಂದಮಂದ.
ದೂರದ ಗುಡ್ಡ ಮೂಕ ನಿಷ್ಪಂದ;
ಎಷ್ಟೊಂದು ಅತಿಥಿ ಅಭ್ಯಾಗತರ ಸಂತೆ ನೆರೆಯಿತು ಇಲ್ಲಿ,
ಏನು ಬಿಸವಂದ !
ಹಸಿರು ಚಪ್ಪರವಿಲ್ಲ, ಓಲಗದ ಸದ್ದಿಲ್ಲ,
ಆದರೂ ಊಟ ಪುಷ್ಕಳ !
ಮೊಳೆವ ಹಸುರಿನ ಹಸೆಯ ರಂಗಮಂಟಪದಲ್ಲಿ
ನೂರು ಭೋಜನಪ್ರಿಯರ ಕೋಲಾಹಲ !

* * * *

ಔತಣಕೆ ಕರೆ ಬೇಕೆ ?
ಅಡಿಗೆಯ ಕಂಪು ಮುಗಿಲೆತ್ತರಕೆ ಕುಣಿಕೆಯನೆಸೆದು
ಸೆಳೆದಿರುವಾಗ . . . . .
ಆಹ್ವಾನಪತ್ರಗಳ ಹಂಚಬೇಕೆ ?
ಇಳಿದು ಬಂದುವು ನೂರು ರೆಕ್ಕೆಕೊಕ್ಕಿನ ಬಳಗ,
ಶ್ವಾನವಾದನ ಗೀತ ಸ್ವಾಗತಿಸಲು
ಸಾಗಿತೌತಣ ಇಲ್ಲಿ ಮೂರು ಹಗಲು !
ಉಕ್ಕಿನ ಕೊಕ್ಕು ಕೆಂಗಣ್ಣು ಬೆಳಕನು ಬಿಟ್ಟು
ಬಗಿಯ ತೊಡಗಿದವಿಲ್ಲಿ ಕರುಳ ತೊಡಕ,
ನರನರವ ಕಣಕಣವನಗಿದು ಚಪ್ಪರಿಸಿದುವು
ಕಡೆಗಾಣುವನಕ !

ಹದ್ದು–ನಾಯಿಯ ವಿಜ್ಞಾನ ಬುದ್ಧಿಯ ಹಲ್ಲು
ಬಿಚ್ಚಿನೋಡಿದುವಿದು ಪ್ರಯೋಗಶಾಲೆ !
ಕಡೆಗೆ ಉಳಿದಿಹುದಿಷ್ಟೆ—ಕಂಕಾಲ ಮಾಲೆ !

ಯಾರವನು ಯಾತ್ರಿಕ ?
ಇಲ್ಲಿ ನಿಲ್ದಾಣದಲಿ ತನ್ನ ಕಂತೆಯನಿಂತು
ಒಗೆದು ನಡೆದಿಹನೆತ್ತ ? ಯಾವ ಲೋಕ ?
ನನಗೆ ತನಗೆನ್ನುತಿವೆ ಗೃಧ್ರಶುನಕ !
ಕಡೆಗೆ ಉಳಿದಿಹುದೇನು ? ದೊಡ್ಡ ಎಲುಬಿನ ಗೂಡು :
ಮನೆ ಮುರಿದು, ಗೋಡೆಗಳುದುರಿ, ಹೆಂಚೆಲ್ಲ ಹಾರಿ
ನಿಂತಿಹುದು ತೊಲೆ, ಕಂಬಗಳು ಬಿಗಿದ ಮಾಡು !

* * * *

ಕರೆಯುತಿದೆ ಹಸಿರು ಚಪ್ಪರವಿದಿಗೊ
ಲಲಿತ ನಾಗಸ್ವರದ ಮೋಡಿಯಲ್ಲಿ !
ಆ, ಅದೋ ಮದುವೆಮನೆ; ಅಡಿಗೆ ಆಗಿರಬಹುದು
ಜನರು ಕೂತಿರಬಹುದು ಪಂಕ್ತಿಯಲ್ಲಿ,
ಥೂ, ಏನಿದೇನಿದು ಇಲ್ಲಿ, ಈ ಹೊಲದ ಮಣ್ಣಿನಲಿ
ಮುದಿ ಎತ್ತು ಸತ್ತಿಹುದು ದುರ್ವಾಸನೆ.
ರಣಹದ್ದುಗಳ ಊಟ ಪೂರೈಸಿದೆ.

* * * *

ತಾನೆ ಉತ್ತುದು ಹೊಲವು.
ತಿಂಗಳೊಂದರ ಹಿಂದೆ ಈ ಇದೇ ಹೆಗಲಿನಲಿ
ಇತ್ತು ನೊಗವು.
ಹರಿದು ಚಲ್ಲಾಪಿಲ್ಲಿಯಾಗಿ ಬಿದ್ದಿಹ ದೇಹ
ಈ ಮಣ್ಣ ಕಣಕಣವ ಉತ್ತುದುಂಟು.
ಯಾರು ಬಿಟ್ಟರು ಕಡೆಗೆ ಮಣ್ಣು ಕೈ ಬಿಟ್ಟೀತೆ ?

ಅದಕು ನಮಗೂ ನಿತ್ಯ ತಾಯಿನಂಟು.
ಬಂದ ಮಳೆಯನು ಕುಡಿದು,
ಕವಚವನ್ನೊಡೆದು—
ಮುಗಿಲ ನೋಡಲು ಬಂದ ಹಸಿರ ಪಯಿರು,
ಬಿದ್ದ ಬಾಳಿನ ಸುತ್ತ ಶಾಸನವ ಬರೆದಿಹುದು
ಚೆಲುವಿನುಸಿರು !

—ಜಿ. ಎಸ್. ಶಿವರುದ್ರಪ್ಪ

# ಕಾರಕೂನ

ಮೇಜಿನಲಿ ಮಿರುಗುತಿದೆ ಬಿಳಿ ಹಾಳೆ ತಟ್ಟೆ,
ಅದರಲ್ಲಿ ಕಾಯ್ವಿಹುದು
ಎನ್ನ ಹಣೆಬರಹದ ಮೊಟ್ಟೆ.

ಹೊರಗೆ ಹೊಲಗದ್ದೆಯಲಿ
ಹೂವಿಸಿಲು—ಹೊಂಬಿಸಿಲು
ತರುಲತಾರಾಜಿಗಳ ಚುಂಬಿಸುತಿದೆ !
ಒಳಗಿಲ್ಲಿ ಕತ್ತಲಲಿ ನಾಗರಿಕ ಕೊಳದಲ್ಲಿ
ಪಾತಾಳದಾಳಕ್ಕೆನ್ನ ಎಳೆಯುತ್ತಿದೆ—
—ಯಾವುದೋ ನಕ್ರ !
ಈ ಶಪಿತ ಗಜದ ಬಂಧನ ಹರಿಯೆ,
ಕಳುಹಯ್ಯ, ಓ ಹರಿಯೆ !
—ನಿನ್ನಾ ಸುದರ್ಶನ ಚಕ್ರ !

—ಪಶುಪತಿ ರೆಡ್ಡಿ

# ನೃಗಯಾವಿಹಾರ

೧

ಹೊರಟಿತ್ತು ಹೊನ್ನಿಗ ಹೊರಗೆ
ವೃಗಯಾವಿಹಾರಕ್ಕೆ.
ಗೂಡಿನೊಳಗಡೆಯಲ್ಲಿ
ಬೀಡುಬಿಟ್ಟಿಹ ಹಳಿಯಹದ್ದು
ರೆಕ್ಕೆ ಬಡಿದೆಚ್ಚತ್ತು
ಕೊಳೆತ ಮಾಂಸಕ್ಕಾಗಿ ಹಳವಂಡವಡುತಿತ್ತು.
ಡೇಗೆ ಜೋಡಿಯ ಜೆಟ್ ವಿಮಾನವೇರಿ
ಹಳಿಹದ್ದು ಹೊರಟಿತ್ತು
ಹಿಡಿದು ಕಾಡುದಾರಿ.
ಮಕರಕೇತನವೆತ್ತಿ
ಮುಂದುವರೆದಿತು ಅಮಲುದಾರರ ಸವಾರಿ
ದಾರಿದೋರುತಲಿತ್ತು ಮುನ್ನಡೆದ ಬಳ್ಳು—ರಾಯಭಾರಿ.

೨

ಒಮ್ಮೆಗೇ ನಿಂತಿತ್ತು ಹರಾಮಿ ಬಳ್ಳು,
ಹೊಡೆದೊಂದು ಸಿಳ್ಳು.
ಕಣ್ಣೆದುರಿನ ಕಾಡಕೊಂಪೆಯೊಳು
ನಿಂತಿಹುದೊಂದು ಆಕಳು
ಶ್ರುತಿಗೊಂಡ ವೀಣೆಯನು ಮೀಂಟಿತ್ತು
ಸುಳಿಗಾಳಿಯ ಬೆರಳು.

' ಪದ್ಮಪತ್ರದ ಜಲಬಿಂದುವಿನಂತೆ
ಚಲಿತಮಾದುದು ಚಿತ್ತ '
(ನೆತ್ತಿಗೇರಿತ್ತೇನೊ ಪಿತ್ತ ! ? )

೩

ಹೊಂಚು ಹಾಕಿತು ಟ್ರಾಪಾ.
ತಪ್ಪಿಸಿಕೊಳ್ಳುವುದು ಹೇಗಪ್ಪಾ, ಆ ಕಪಿಲೆ ?
ನಿಸ್ಸಹಾಯಕ ಅಹಲ್ಯೆ !

ಪಾಪ, ಆ ಧೇನು
ಹೊನ್ನಿಗಗೆ ಆಯಿತ್ತು ಕಾಮಧೇನು !
ಅಲ್ಲಲ್ಲ, ಕಾಮು-ಧೇನು !

—ಎಂ. ಅಕಬರ ಅಲಿ

# ನಿಸರ್ಗ

## ೧

ಕಾರ್ಮುಗಿಲ ಉದರದಲಿ ಹುದುಗಿರುವ ಸಿಡಿಮಿಂಚು ನೀನು.
ರುದ್ರ ಝಂಝಾವಾತ ಪ್ರಳಯ ಮೂರುತಿಮಂತ ಕಾಳ್ಗಿಚ್ಚು ನೀನು.
ಭೂಖಂಡಗಳ ನುಂಗಿ ಸಾಗರವನೀಂಟಿರುವ ಬುವಿಯೊಡಲ ಬೆಂಕಿ ನೀನು.
ಕಾಳಸರ್ಪದ ದಂಶ, ಉಗ್ರವ್ಯಾಘ್ರನ ನಖವು, ಕುರುಡು ವಿಧಿ ನೀನು.

ಬಯಲು ಬೆತ್ತಲೆಯಾಗಿ ನಿನ್ನೆದುರು ನಿಂತಾಗ
ನಿನ್ನೊಂದು ಸ್ಪಂದನಕೆ ನಾನಂಜಿ ಚೀರುತಿದ್ದೆ.
ಇಂದ್ರನೆಂದು, ವರುಣನೆಂದು, ಅಗ್ನಿಯೆಂದು
ಹಲವು ತೆರದಿ ನಿನ್ನ ನುತಿಸಿ, ನಿನ್ನನೊಲಿಸಿ
ನನ್ನ ಬಾಳೆ ನಿನ್ನ ಪೂಜೆ ಎಂದು ನಾನು
ಬದುಕುತಿದ್ದೆ, ನಿಸರ್ಗಚೇತನವೇ, ನೀನಾರು ?

## ೨

............ನೀನಾರು ಗೊತ್ತೇ ?
ನನ್ನಂಗೈಯ ನೆಲ್ಲೀಕಾಯಿ.
" ಆಕಾಶವ ಕೊಡುವೆ ಮಗು,
ನಿನಗೆ ಆಟವಾಡಲೆಂದು
ಹೊಸ ಖಗೋಲದ ಚಂಡನ್ನು ಕೊಡುವೆ "
ಎಂದು ನ್ಯೂಟನ್ ಕಟ್ಟಿದ ಕನಸು
ನನ್ನ ತಲೆಗೇರಿತ್ತು.
................ನಾನಾರು ಗೊತ್ತೋ ?
ಜೀವಗುಡಿಗೆ ದೇವ ನಾನು.

ಮನೆಮನೆಗು ರೇಶನ್ ಹಂಚಿದ ತೆರದಿ
ಮಿಂಚನ್ನು ಹಂಚಿದವ.
ನನ್ನ ಪದೋರಜ ಪ್ರಕ್ಷಾಲನಕೆ
ಬಂಜೆಮುಗಿಲು ಮಳೆಯ ಸುರಿಸುತಿದೆ.
ಸಕಲ ಗ್ರಹಸಂಚಾರಿ, ಸಾಗರವಿಹಾರಿ
ದಶದಿಕ್ಕುಗಳನೇ ಹೋಲ್ಡಾಲಿನಲಿ
ಬಿಗಿದಿರುವ ಸಾಹಸಿ ನಾನು.

ಅಂದು ಗಾಯತ್ರಿ ಹಾಡಿದ ಸೂರ್ಯನಿಗಿಂದು
ಒಂದು ಚರಮಗೀತೆಯ ಹಾಡು.
ದಿನಮಣಿಯನೆತ್ತಿರೋ, ಮಸಣಕೊಯ್ಯಿರೋ !
ಅಳಬೇಡ, ಅಳಬೇಡ,
ಮಾಮೇಕಂ ಶರಣಂ ವ್ರಜ....
ನೀನು ಜಡ, ನಾನು ಜಡ
ಜಡದ ಜಂಜಾಟವಿದು
ಎಲೆ ನಿನ್ನ ಅರಗಿಣಿಯೆ ನಾಡಿ, ನುಡಿ
" ಬಹುಪರಾಕು ಬಹುಪರಾಕು
ಮಾನವನೇ ನೀ ಸೃಷ್ಟಿಯಧೀಶ್ವರ."

೩

ಗಿಣಿಯೆಂದು ನಿನ್ನ ಪಂಜರದಲ್ಲಿರಿಸಿ ಹೋದಾಗ
ನಾನೆ ಬುದ್ಧಿ ಪಂಜರದಿ ಬಿದ್ದು ನೀನೆ
ನನ್ನ ಮೂದಲಿಸುವಂತಾಯ್ತು ?
ಘ ಜ ನಿ ಘೋರೀ ಮಹಮ್ಮದನಂತೆ ನಿನ್ನ ಸೋಮೇಶ್ವರವ ಹೊಕ್ಕು
ಹೊನ್ನಗೋಡೆಗಳ ವಜ್ರ ವೈಢೂರ್ಯಗಳ ಸೂರೆಗೊಂಡೆ.
ನಿನ್ನ ಮೂರುತಿ ಕಂಡು, ಒಡೆಯಲೆತ್ತಿದ ಗದೆಗೆ
ನಾನೆ ಕುಸಿವಂತಾಯ್ತು.

## ನಿಸರ್ಗ

ಕತ್ತಲೋ ಕತ್ತಲು ಎಲ್ಲೆಲ್ಲೂ ಕತ್ತಲು.
ನಾನಾರು ? ನೀನಾರು ?
ನಾನು ನಾನಲ್ಲ,
ನೀನು ನೀನಲ್ಲ,
ಜಡವು ಜಡವಲ್ಲ
ಜಡವೆಂಬುದೇ ಇಲ್ಲ.
ನನಗೇನು ಗೊತ್ತಿಲ್ಲ...............
ಕುರುಡು ಶಕ್ತಿಯೆಂದು ಒಮ್ಮೆ
ಕನಸಿನ ಕನ್ನಕ್ಕಿ ಎಂದು
ನನ್ನ ಮನೆಯ ದಾಸಿ ಎಂದು
ಮೂಢನಂತೆ ನಿನ್ನ ನಾನು
ತಿಳಿಯದಾದೆನು.
ನಿನ್ನ ಮಾಯೆಯೊಗಟ
ನಾನು ಬಿಡಿಸದಾದೆನು.
ಕಾರುಣ್ಯಮಯಿ ತಾಯಿ ನೀನು
ಓ ಚಿರಂತನ ಪ್ರಜ್ಞೆ !
ಓ ನಿಸರ್ಗಮಾತೆ !
ಈ ದಿಕ್ಕೆಟ್ಟ ಹಸುಳೆಯನು
ಎತ್ತಿ ಎದೆಗಪ್ಪಿಕೋ !
ನಿನ್ನಲ್ಲೆ ನಾ ಲೀನವಾಗುವನಕ
ನನಗೆ ಬಾರದು ನಿನ್ನರಿವು.
ನನ್ನ ತೋಳುಗಳಿಗಿಲ್ಲ ನಿನ್ನ ಭೀಮಶಕ್ತಿ.
ನನ್ನ ಬಾಳಿಗಿಲ್ಲ ಪೂರ್ಣತೆ ............

—ಮಂಗೇಶ ನಾಡಕರ್ಣಿ

# ನಲುವತ್ತರ ನೆರೆಯಲ್ಲಿ

೧

ನನ್ನ ಮುಂದೆ
ಎರಡು ಸಂವತ್ಸರಗಳಾಚೆಯಿಂದೆ
ನೋಡುತಿದೆ ಕಣ್ಣ ಕೆಕ್ಕರಿಸಿ ನಲುವತ್ತು,
" ಯಾಕೆಲವೊ ಇಷ್ಟು ಹೊತ್ತು ? "
ಎಂದು ಗಜರಿದ ಕತೆಯ ಸಿಂಹದಂತು,
ತಾನು ತಿನಲಿದ್ದ ಬಡ ಮೊಲಕೆ ಅಂದು !
ಮೇಲಟ್ಟದಲಿ ರೇಡಿಯೋ
ಕಿರಿಚುತಿದೆ : " ಅಂಗಂ ಗಲಿತಂ ಮುಂಡಂ ಪಲಿತಂ "
ಎದುರಟ್ಟದಿಂದ ಏನು ಖೋಡಿಯೋ !
ಅಣಕು ನುಡಿ : " ಆಯು ವಿಫಲಿತಂ ಆಯು ವಿಫಲಿತಂ "
ನನ್ನ ಸುವಿಧೇಯ ಸಿಲುವುಗನ್ನಡಿಯಲ್ಲಿ
ಯಾರೀತ ಹೊಸಬ ಸೆರೆಯಾಳು ?
ಒಮ್ಮುಖದ ರಸ್ತೆಯಲಿ ಬ್ರೇಕಿಲ್ಲದ ಕಾರುಗಳ ಸಾಲು,
ಪೋಂ ಪೋಂ ಪೋಂ !
ಪೆಟ್ರೋಲು ತೀರಿದಲ್ಲೆ ಧಡೋಂ !
ತಪ್ಪಿದರೆ ರಸ್ತೆ ಪಕ್ಕದಲಿ ಗುರಿ ಹೊಡೆವ ಸಾಲು ಸೋಲ್ಜರು
ಕಣ್ಮುಚ್ಚಿ ಒತ್ತು ಎಕ್ಸಲರೇಟರು !

೨

ಯಾಕೆ ನಲ್ಲೇ, ದೂರ ಸರಿದು ಕುಳಿತೆ ?
ಬಡಿಯಿತೇ ನಿನಗು ಭಜಗೋವಿಂದದ ಕಾಷ್ಠವ್ಯಥೆ?

ಬೇಡ ನಿನ್ನಯ ಸ್ತ್ರಿಯರಿಂಗು  ಚಿಂತೆ;
ಎಕ್ಸಲರೇಟರ ಪಾದ ಸಡಿಲಾಗದಂತೆ;
ಈ ಹತ್ತು ವರ್ಷದಲಿ ಸಾಧಿಸಿಹೆ ನಾನೊಂದು ಯೋಗ—
ಅದುವೆ ಪ್ರೇಮಸಂಯೋಗ.

—ಪಿ. ವೆಂಕಟರಮಣ ಆಚಾರ್ಯ

# ಹೊಸಹುಟ್ಟು

ನೀ ಬಂದೆ
ಧ್ವನಿ ತೆಗೆದೆ—
ಕತ್ತಲೆಯ ಗವಿಯಿಂದ ಕೂಗು !
‘ ಅವ್ವಾ....ಅವ್ವಾ....ಅವ್ವಾ’ ....ಅಹಾ !
ಅಯ್ಯೋ, ನಾ ತಂದ, ನನ್ನಂಥ ಜೀವಾ !
ಯಾಕಪ್ಪ ಈ ಜೀವ ?

ಶೂನ್ಯತೆಯ, ಪೂರ್ಣತೆಯ, ಪರಬ್ರಹ್ಮನ
ಒಡಲಿಂದ ಯಾಕಪ್ಪ ನೀ ಬಂದೆ ?
ಕೋಟ್ಯವಧಿಯ ಜಂಗುಳಿಯಲಿ
ಹನಿಯಾಗಲು ಬಂದಿರುವೆ.
ಯುಗಯುಗಗಳ ಒದ್ದಾಟದ
ಮುಗಿಯದ ಮರುಭೂಮಿಯಲಿ
ಕಣವಾಗಲು ಬಂದಿರುವೆ.
ಒಂದಿಲ್ಲ ಒಂದು ದಿನ
ಶೂನ್ಯತೆಯ, ಪೂರ್ಣತೆಯ
ಪರಬ್ರಹ್ಮನ ಒಡಲೊಳಗೆ
ಮರೆಯಾಗಲು ಬಂದಿರುವೆ.

ಯಾಕಪ್ಪ ನೀ ಬಂದೆ ?
ಈ ಜೀವದ ದೈವಕ್ಕೆ
ಹಾ, ನಾನೇ
ಕಾರಣನೇ ?

## ಹೊಸಹುಟ್ಟು

ಕಣ್ಣಿದ್ದೂ
ಕುರುಡಾದೆನೆ ?

ಕುರುಡು !
ಕುರುಡು ಜೀವಶಕ್ತಿಯೊಂದು
ದೇಹವನ್ನು ಯಂತ್ರಮಾಡಿ
ಕೊಂಚ ಅನೃತ ಲಂಚ ನೀಡಿ
ಮಾಟ ಮಾಡಿತಯ್ಯ ಮಾಟ !

ಮಾಟ ! ಮಾಯ ! ನೋಡು ಅಹಾ
ಏನು ಇಂದ್ರಜಾಲವಹ....
ಆಶ್ಚರ್ಯದ ಅಮರಾವತಿ—
( ಜಯತು ಜಯತು ಜೀವಶಕ್ತಿ ! )
ನೋಡು ಎರಡು ಕಂಗಳರಳಿ
ಚಿಕ್ಕೆಯಂತೆ ಮಿಣುಕುತಿಹವು !
ಪುಟ್ಟ ಬಾಯಿ, ಪುಟ್ಟ ದೇಹ
ಪುಟ್ಟ ಕಾಲು ಕೈಗಳು!
('ಜೀವದುಂಬಿ ತೋಂತನವೆನು—
ತಿರಲು ಮೃದುಮೃದಂಗವು ' )
ಎನಿತು ಇದು ವಿಚಿತ್ರವು !

" ನಲ್ಲೆ, ಏಕೆ
ಏಕೆ ನಕ್ಕೆ ನಸುಕು—ನಗೆ ?
ಕೂಸು ನೋಡು ಅಳುತಲಿದೆ !
ಪಾಪ !
ಪುಟ್ಟ ಜೀವ ಹಸಿದಿಹುದೆ ?
ಉಣಿಸು ನಿನ್ನ ತಾಯ ಮೊಲೆ...."

## ಹೊಸಹುಟ್ಟು

ನನ್ನ ಅವಳ ರಕ್ತದಿಂದ
ನನ್ನ ಅವಳ ಜ್ವಾಲೆಯಿಂದ
ಜೀವಶಕ್ತಿ ಮಥಿಸಿ ತಂದ
ನನ್ನ-ಅವಳ-ಅದರ ಕಂದ !
ಬಾ, ಬಂದೆಯಾ, ಕಂದ
ನೀನು ಬಂದೆ; ನಾನು ತಂದೆ—
ಅವಳ ಕಣ್ಗೆ ಬೆಳಕು ತಂದೆ—
ವಿಶ್ವ ತುಂಬಿ ಹರಿಯುವಂಥ
ಜೀವನಕ್ಕೆ ಬಂಧ ತಂದೆ,
ಯಾಕೆ ಎಂದು ಕೇಳಲಾರೆ.
        ಫಲವ ಕೊಡುವ ಮರಗಳಂತೆ
        ಹೂವು ಬಿಡುವ ಬಳ್ಳಿಯಂತೆ
        ರವಿಯ ತರುವ ನಸುಕಿನಂತೆ
ಯಾಕೆ ಎಂದು ಕೇಳಲಾರೆ.

        ವಿಶ್ವಗಾಳಿ ಸುಳಿಯುವಲ್ಲಿ
        ನಾನು ಹುಲ್ಲು–ಸುಳಿವು ಮಾತ್ರ
        ' ಯಾಕೆ ' ಎಂದು ಕೇಳದೇ
        ಮಾಡಿ ಮಡಿವುದೇ ಸುಸೂತ್ರ !
        ಬಾ, ಭವಿಯೆ, ಬಂದೆಯಾ–
        ನಿನ್ನ ದಾರಿ ಭದ್ರವಿರಲಿ.
        ನನ್ನ–ನಿನ್ನ ಪ್ರೀತಿಯಿರಲಿ.
        ತಂದೆಯೊಲುಮೆ ಚುಂಬನಾ !
        ಇಕೋ ನಿನ್ನ ಹೂವು–ತುಟಿಗೆ
        " ನಲ್ಲೆ, ನಿನ್ನ ತಾಯಿ–ನಗೆಯು
        ನನ್ನ ಹೃದಯ ಮಿಡಿಯುತಿದೆ.

ಹೊಸಹುಟ್ಟು

(‘ ಮಾತೃದೇವೋ ಭವ ! ’ )
ನಿನ್ನ ದಿವ್ಯ ಮೊಗಕೆ ನನ್ನ
ನವ್ಯ–ಪ್ರೀತಿಚುಂಬನಾ
ಇನ್ನು ನಾನು–ನೀನು–ಅವನು
ಇನ್ನು ನವ್ಯ–ರಿಂಗಣಾ ! ”

—ಶಾಂತಿನಾಥ ದೇಸಾಯಿ

# ಅಪಸ್ವರಗಳು

ಕತ್ತಲಲ್ಲಿ, ಕಗ್ಗತ್ತಲಲ್ಲಿ
ಯಾರೋ ಕರಗಸಕ್ಕೆ ಅರ್ನವನ್ನು ಗೀಚುತ್ತಿದ್ದರಯ್ಯಾ !
ರಾಮ ರಾಮಾ !
ಯಾರೋ ಮಲಗಿದ್ದ ಕೂಸಿನ ಮೇಲೆ ಕಾಲಿಟ್ಟರಯ್ಯಾ !
ಭಗವಂತಾ !
ಕುತುಬಮಿನಾರದ ತುತ್ತತುದಿಯಿಂದ ಕೆಳಗುರುಳಿದರಯ್ಯಾ !
ಕಾಮಿಯ ಮರಿ ಕಣ್ಮುಚ್ಚಿ ಕುಳಿತ ಬೆಚ್ಚನೆಯ ಒಲೆಯಲ್ಲಿ
ಕಿಚ್ಚು ಸುರಿದರಯ್ಯಾ !

ಅಯ್ಯೋ ! ಮೂಕಪ್ರಾಣಿಯ ಚೀತ್ಕಾರ !
ನಿಶ್ಶಬ್ದ ನೀರವ ರಾತ್ರಿಯಲ್ಲಿ
ಆಸ್ಪತ್ರೆಯ ನಿಶ್ಶಬ್ದ ಮಂಚಗಳ ಸಾಲಿನಲ್ಲಿ
ಕನಸುಕಂಡ ಹುಚ್ಚನೊಬ್ಬ ದಿಗ್ಗನೆದ್ದು ಚಿಟ್ಟನೆ ಚೀರಿದನಯ್ಯಾ !
ಪ್ರಚಂಡವಾದ ಬಂಡೆಗಲ್ಲಿನ ನುಣುಪು ಅಂಚಿಗೆ ಒರಗಿ
ಆಳವಾದ ಕಣಿಯ ಕೆಳಕ್ಕೆ ನೋಡುತ್ತಿರೆ
ಅಲ್ಲೊಂದು ಗಿಜಿಗಿಜಿಗುಡುವ ಹುಳಗಳ ಕೊಳ !
ಆ ಹುಳಗಳಲ್ಲಿ ನಾನೂ ಒಂದು ಹುಳ !
ಹುಳವ ಕಂಡು ಹುಳುವಾದ ನನ್ನ ಮೈ ಗಿಜಿಗಿಜಿಯೆನ್ನತೊಡಗಿತು,
ಬೆವರಿನಿಂದ ! ನವಿರಿನಿಂದ !
ತಾಯ ಕಣ್ಣಿನ ಬೆಚ್ಚನೆಯ ಹನಿಯೊಂದು
ತಣ್ಣೀರು ಮೀಯುತಿಹ ಗೋಪೀಚಂದನ ಮೇಲೆ ಬೀಳೆ
ಅದಾವ ದಾಹ !
ಅದೆಂಥ ನೋವು !

ಯಾರೋ, ಯಾವ ಜನ್ಮದಲೊ
ಕಂಡ ಕನಸಿನ
ಉಂಡ ನೋವಿನ
ಪಡೆದ ಪರಿತಾಪದ
ನಿರುಶ್ಯಾಪ ಪಾಪದ
ಅದೃಶ್ಯ ತೆರೆಯೊಂದರ ಸುಳಿಗೆ ಸಿಲುಕಿದೆ ನಾನಯ್ಯಾ !
ನನ್ನ ಎಷ್ಟು ಜನ್ಮದ ಶಾಂತಿಯನ್ನು ತೆತ್ತು
ಆ ಅನಂತ ಶಾಪವನು ಹಿಂಗಿಸಬಲ್ಲೆನು,
ಗುರುವೆ ?

— ಶಂ. ರಾ. ಮೊಕಾಶಿ (ಪುಣೇಕರ)

# ಧೂಳು

## ೧

ಕುಳಿತವ ಸಿಡಿದೆದ್ದು ನಿಂತ.
ಗಾಂಧೀ ಟೊಪ್ಪಿಗೆ ಕಿತ್ತು ಬೀಸಾಡಿದ.
ಗೋಡೆಗೆ ಹಾಕಿದ ದೇವದೇವಿಯರ ಚಿತ್ರ ನೋಡಿದ.
ಧೂಳು ! ಧೂಳು ! ! ಧೂಳು ! ! !
ಧೂಳು ಮುಸುಕಿದೆ ದೇವರ ಚಿತ್ರಕ್ಕೆ.
ಮನೆತುಂಬ ಧೂಳು ! ಮನತುಂಬ ಧೂಳು !
ಹಾಳುನೆಲ ಉಡುಗಿದಷ್ಟೂ ಹುಡಿಯೇಳುತ್ತದೆ !
ಓ ತಾಯಿ ಸರಸ್ವತಿ
ನನ್ನ ತಲೆಗೂ ಮುಸುಕಿದೆ ಧೂಳು
ಸಾ ಮಾಂ ಪಾತು ಸರಸ್ವತೀ ಭಗವತೀ
ನಿಶ್ಶೇಷಜಾಡ್ಯಾಪಹಾ.

## ೨

" ಪೇಪರೇ....ಪೇಪರೇ.... "
ಏನದು ಕೂಗು ?
ಭೂಮಿತಾಯಿಯ ಎದೆಯ ಮೇಲೆ
ಬುದ್ಧಿಯ ತೊತ್ತಳದುಳಿತ.
ಅವಳೆದೆಯೊಣಗಿ ಧೂಳು ಹಾರುತ್ತಿದೆ ಧೂಳು !
ಓ ಎಲ್ಲೆಲ್ಲೂ ಧೂಳೇ ಧೂಳು !
ಸ್ವಾರ್ಥದ ಹುಚ್ಚು ನೆತ್ತಿಗೆ ಅಡರಿದೆ.
ಬಾಂಡುಂಗ್ ದಾರಿಯಲ್ಲಿ ಕಾಶ್ಮೀರ ಪ್ರಿನ್ಸೆಸ್ ಸುಟ್ಟಿತು........

ಚೆಯಾಂಗ ಕೈಶೇಕ್ ಸಿಂಗಮನ್ ರ್‍ಹೀ
ಪ್ರಪಂಚಕ್ಕೆ ಕೊಳ್ಳಿಯಿಟ್ಟರೋ ?
ಅವರ ನೆಲದಿಂದೆದ್ದಿದೆ ಸ್ಮಶಾನ ಬೂದಿ
ಧೂಸರು ಧೂಸರಾಗಿ ಪ್ರಪಂಚವನೇ ತುಂಬಿದೆ.
ಮೊಂಡರ ಕುಹಕ ನಾಯಿಗಳು
ಆ ಬೂದಿಯನ್ನು ಕೆದರುತ್ತಿವೆ.
ಗಟ್ಟಿ ನೆಲ ಎಲ್ಲಿ ?
ಭಾರತದ ಮೆದುಳಿನಲ್ಲೂ ಒಂದು ಸುಂಟರ ಗಾಳಿ !
ಜನಶಂಕರಿಯು ಹುಡಿಯಾಗಿ ಹಾರುತ್ತಿದ್ದಾಳೆ !
ತಡೆಯಿರೋ ? ನೀರುಗ್ಗಿ ಸುಂಟರಗಾಳಿ ನಿಲ್ಲಿಸಬಾರದೇ ?
ನೆಲ ಕುಟ್ಟಿ ಗಟ್ಟಣೆ ಮಾಡಬಾರದೇ ?
ಕಸಗುಡಿಸಿ ಸಾರಿಸಬಾರದೇ.... ?

೩

ಪಿತ್ತ ನೆತ್ತಿಗೇರಿದಂದೆ
ಕೆಂಧೂಳಿಗುಸಿರುಗಟ್ಟಿದಂತೆ
ಬವಳಿ ಬಂದುರುಳುವಂತೆ
ಆತ ಆ ಗೊಂದಲದಲ್ಲಿಯೇ ಕುಕ್ಕರಿಸಿದ.
ಕುಳಿತಲ್ಲಿಯೇ ಕಣ್ಣು ಮುಚ್ಚಿ ಕನಸೊಂದ ಕಂಡ :
ಮನೆಮನೆಯೂ ಒಂದೊಂದು ದೇಗುಲ.
ಮನಮನವೂ ಒಂದೊಂದು ದೇಗುಲ.
ಸಮಸ್ತ ಪ್ರಪಂಚವೇ ದೇವಾಲಯವಾಗಿದೆ.
ಅಲ್ಲಿ ಧೂಳಿಲ್ಲ ! ಧೂಸರಿಲ್ಲ ! !
ನೆಲಗಟ್ಟಣೆ ಮಾಡಿ ನೆಲ್ಲಕ್ಕಿಯಿಟ್ಟಿದ್ದಾರೆ.
ಸುಣ್ಣಬಣ್ಣದಿಂದ ಬೆಳಗಿ ರಂಗವಲ್ಲಿಯಿಟ್ಟಿದ್ದಾರೆ.

## ಧೂಳು

ಮಂಗಲವೆ ಮೊಳಗುತಿದೆ. ಮಂಗಲಾರತಿಯಾಗುತಿದೆ.
ಅದೋ ಕೇಳುತಿದೆ ಚೈತ್ಯವಾಣಿ !
ಬರಲಿರುವ ಬಾಳಿಗದೆ ಮಂತ್ರವಾಣಿ ! :
" ಏಳು ಮೇಲಕ್ಕೇಳು.
ಬುದ್ಧಿಯಾಚೆಗಿನ ಚೈತ್ಯಮಂದಿರಕ್ಕೇರು
ಅದು ಸಮರಸದ ನೆಲೆವೀಡು
ದ್ವಂದ್ವ ಮೀರಿದ ನಾಡು. "

—ಆರ್. ಜಿ. ಕುಲಕರ್ಣಿ

# ಜೋಗದ ಜಲಪಾತದಲ್ಲಿ

ಎಲ್ಲಿಯೋ ಬೆಟ್ಟದಲ್ಲಿ ಆನೆ ಮೊಸಳೆ ಹುಟ್ಟಿದಲ್ಲಿ
ವನಸಹಸ್ರಶೀರ್ಷನಾಗಿ
ವನಸಹಸ್ರನಯನನಾಗಿ
ಮುಗಿಲ ನೀಲ ಮೇಘದಾಸೆ ನೆಲದ ಕದವ ತಟ್ಟಿದಲ್ಲಿ
ಊಟೆಯೊಂದು ಪುಟಿದು ಬಂದು
ಗಿರಿಯ ಮೆಟ್ಟಲಿಳಿಯುವಂದು
ದಂಡೆಗುಂಟ ಸುರಿದು ನಿಂದ ಪುಷ್ಪಮಾಲೆ ಕಟ್ಟಿದಲ್ಲಿ
ಚಿರತೆಯೊಡಲ ಬೆಂಕಿಗಾಗಿ ಚಿಗರೆ ಮರಿಯನಟ್ಟಿದಲ್ಲಿ
ಇರುಳು ಕಣ್ಣ ಮಿಟುಕಿಕೊಂಡು
ನದಿಯ ಮೀನುಗಳನು ಕಂಡು
ಗಾಳಿ ಗಾಳ ಹಾಕುತಿತ್ತು ಮರಿಮುಗಳ ಬೆಟ್ಟದಲ್ಲಿ.
ಬನದ ಚೆಲುವನೆಲ್ಲ ನೋಡಿ
ಹೃದಯಗೀತಗಳನು ಹಾಡಿ
ಧುಮುಕಿದಳು—ಶರಾವತಿ.

“ಕೆಂದಾವರೆಯಂತೆ ಹೊಳೆಯುವ ವದನ
ಎಸಳುಸಂಪಿಗೆ ಮೂಗು, ಉತ್ಪಲ ನಯನ.
ರತ್ನಾಭರಣವಿಭೂಷಿತೆಯಾಗಿ
ಮೇನಕೆ ಕುಣಿದಳು ನವಿಲಂತೆ ಬಾಗಿ,
ಸಪ್ತಜ್ವಾಲೆಗಳೆದ್ದ—ಹೃದಯದ ಕುಂಡ
ಹೂಬಾಣ ಕೆದರಿತ್ತು—ನಿಗಿನಿಗಿ ಕೆಂಡ.
ಮುಚ್ಚಿದಕ್ಷಿಗಳನ್ನು ತೆರೆದನು ಯೋಗಿ
ಕೌಶಿಕ ಕಾಮಾಕ್ಷಿ ಪರವಶನಾಗಿ ”
ಧುಮುಕಿದಳು—ಶರಾವತಿ.

## ಜೋಗದ ಜಲಪಾತದಲ್ಲಿ

ಬೀದಿಯ ಬದಿಗಿರುವ ಕಂಬ ನರಳಿತವಳ ಧಾವತಿ
ಅಧಃಪತನದಲ್ಲಿ ಕೂಡ ಬೆಳಗಬಹುದು ಜೀವನ.
ನದಿಯ ಗರ್ಭದಲ್ಲಿ ಸುಡುವದಗ್ನಿ ದಿವ್ಯಪಾವನ.

—ಸು. ರಂ. ಎಕ್ಕುಂಡಿ

# ಹುಟ್ಟಿದ ಹಬ್ಬ

ನಾ ಬಂದೆ—
ಮೊದಲ ಸ್ಪಂದನದಿಂದೆ,
ಅಂದಿನಿಂದಿಂದಿಗೂ ಸಾಕ್ಷಿಯೊಲು ನಿಂದೆ !

ಲಕ್ಷನಕ್ಷತ್ರನೀಹಾರಿಕಾನಭದ
ರಾಸಲೀಲೆಯೊಳಿದ್ದೆ ;
ಒಮ್ಮೆ, ಓ ಅಂದೊಮ್ಮೆ
ಗ್ರಹದ ಘರ್ಷಣೆಯಾಯ್ತು,
ಹುಡಿಯೊಂದು ಬಿತ್ತು.

ಗಿರಗಿರನೆ ತಿರುಗಿತ್ತು ಅಗ್ನಿಗೋಳದ ಬುಗುರಿ :
ಶೂನ್ಯಸಿಂಹಾಸನದಿ ಜ್ಯೋತಿಲಿಂಗ !
ಜಡೆಯ ಜ್ವಾಲೆಗೆ ಬೆದರಿ ಮತ್ತೊಮ್ಮೆ ಸ್ಪಂದಿಸಿತು
ಈ ವಿಶ್ವರಂಗ !

ಯುಗಯುಗವನೊಂದೊಂದೆ ಬೊಗಸೆಯಲಿ ಮುಕ್ಕಳಿಸಿ
ಸಾಗಿತ್ತು ನಟರಾಜನಗ್ನಿನೃತ್ಯ !
ಉರಿಯ ಹೆಗ್ಗಡಲಲೆಯ ಕೋವರನ ಚಕ್ರದಲಿ
ರೂಪುಗೊಳ್ಳುತಲಿತ್ತು ಈ ಲೋಕಸತ್ಯ !
ಆದಿಕವಿಚಿತ್ತದಲಿ ನವಕಾವ್ಯದುದಯಕ್ಕೆ
ನಡೆಯುತಿತ್ತನಂತ ರಸಘರ್ಷಣ !
ಕಾಲಲಬ್ಧಿಗೆ ಕಾದು ಬಿಡುಗಡೆಯ ಬಯಸಿತ್ತು
ಪ್ರಾಣಭ್ರೂಣ !

ನಮ್ಮಧ್ವನಿ

# ಹುಟ್ಟಿದ ಹಬ್ಬ

ಇಲ್ಲಿ ನಿಂತನು ಕೆಳಗೆ ಋಷಿ ಭಗೀರಥದೇವ
ವ್ಯೋಮಕೇಶನ ಪಾದಮೂಲದಲ್ಲಿ :
" ಇಳಿದು ಬಾ ತಾಯಿ ಇಳಿದು ಬಾ "
ಓಂ ! ಇಳಿದು ಬಂದಳು ತಾಯಿ ಆದಿಶಕ್ತಿ
      ರಸಾಗ್ನಿಗಾಗಿತ್ತು ಭಾವಮುಕ್ತಿ !
ನಕ್ಕು ತಲೆದೂಗಿದವು ಖಗ ಮಿಗ ಹಸಿರು ಹೂ ಹಣ್ಣು
ಗುಡ್ಡ ಬೆಟ್ಟ,
ಬೆಳೆದು ನಿಂತವು ಎಲ್ಲ ಒಂದೊಂದು ಮಟ್ಟ;
ನಾ ಬಂದೆ, ಎಲ್ಲ ಪರಿವರ್ತನೆಯ ಜೊತೆಗೆ ಹರಿದು
ಒಳಗೆ ಬೆರೆದು !

ಕತ್ತಲೆಯೆ ಬೆಳಕಾಯ್ತೊ
ಬೆಳಕೆ ಕತ್ತಲೆಯಾಯ್ತೊ,
ಬೆಳಕು ಕತ್ತಲ ಕದನ ಮೊದಲಾಯಿತು.
ಜೀವ ಜೀವದ ನೂರು ಹುಟ್ಟುಸಾವಿನ ಪಗಡೆ
ಸಾಗುತಿತ್ತು.

*         *         *         *

ನಾ ಬಂದೆ,
ಮೊದಲ ಸ್ಪಂದನದಿಂದೆ ;
ಅಂದಿನಿಂದಿಂದಿಗೂ ಕಣ್ಣಾಗಿ ನಿಂದೆ !

ಇರವಿನಾಳವ ಕಡೆದು ಅರಿವ ಪಡೆದರು ಅವರು
ಆರ್ಯಕುಲಸಾಧಕರು ಮನುಮುನಿಗಳು.
" ಏಕಂ ಸತ್ ವಿಪ್ರಾ ಬಹುಧಾ ವದಂತಿ "
ಮಂತ್ರ ಹೊಮ್ಮಿತು ಮಿಡಿದು ವಿಶ್ವವೀಣೆಯ ತಂತಿ !

## ಹುಟ್ಟಿದ ಹಬ್ಬ

ಒಡನೆಯೇ—
ಒಳಗೆ ಮಲಗಿದ ಗರುಡ ಗರಿಗೆದರಿ ಬಂದ,
ಮುಗಿಲಿನಗಲದ ಗರಿಯ ಬೀಸಾಟದಿಂದ
ಕಾಡುಮೇಡಿಗೆ ದನಕೆ
ಮಿಗಕೆ ಹಕ್ಕಿಗೆ ಜನಕೆ
ಕಳಚಿತ್ತು ಬಂಧ !

ಅವತಾರ ಅವತಾರ, ಲೆಕ್ಕವಿಲ್ಲದ ನೂರು
ಅವತಾರ ಬಂತು ;
ತನ್ನ ತಾನೇ ಸೃಜಿಸಿ ತನ್ನ ತಾನೇ ಕೊಲುವ
ಲೀಲೆಗಳ ಮಣಿಯೊಳಗೆ ಉದ್ಧಾರ ತಂತು !

ನಾ ಬಂದೆ,
ಆ ಎಲ್ಲ ಕತೆಗಳನು ನಾ ಹೊತ್ತು ತಂದೆ
ಕೂರ್ಗಣೆಯ ಸುಯ್ಲುಗಳ ಕೇಳುತ್ತ ಬಂದೆ
ಇಂದು ಸಿಡಿಗುಂಡುಗಳ ಹೊಗೆಯೊಳಗೆ ನಿಂದೆ
ರಾಮ-ರಾವಣರನ್ನು ನಾ ಕರೆದು ತಂದೆ.

* * * *

ನನಗೆ ಹುಟ್ಟಿದ ಹಬ್ಬ !
ನನಗೆಷ್ಟು ವರುಷ ?
" ನಾ ತೊಟ್ಟ ದೇಹಗಳ ಲೆಕ್ಕ
ಇಡುವರಾ ಸೊಕ್ಕ
ಯಮಾ ನೋಡಿ ನಕ್ಕ "
ಆದರೂ ಸುರಿದಿತ್ತು ಹರಕೆಗಳ ವರುಷ !

* * * *

## ಹುಟ್ಟಿದ ಹಬ್ಬ

ಬಂದ ಕರು ಬೆರಗುಗಣ್ಣನು ತೆರೆಯೆ,
ಮೇಲಿತ್ತು ನೊಗದ ನೇಣು!
ಎಲ್ಲಿ ಹೋಯಿತೊ ಏನೊ, ಮೊಲೆಯನುಣಿಸುವೆನೆಂದು
ಕನಸಿನಲಿ ನಚ್ಚಿತ್ತ ಕಾಮಧೇನು!
ಎತ್ತ ನೋಡಿದರೂನು, ಉರಿಯ ಕರೆಯುವ ಬಾನು,
ದಣಿದ ನಾಲಗೆಗಿಲ್ಲ ತೊಟ್ಟು ಜೇನು.
ನೊಗದ ಭಾರಕೆ ಬಾಗಿ ಕತ್ತು ಉಳುಕಿದರೇನು
ಬಾಳ ಬಂಡಿಯ ಮುಂದೆ ಎಳೆಯೊ ನೀನು.

ಇಂದು ಹುಟ್ಟಿದ ಹಬ್ಬ—ಗೆಳೆಯರೆಲ್ಲರ ಹರಕೆ
ಮನದ ಬಾಗಿಲಿಗಾಯ್ತು ಹೊಸ ತೋರಣ!
( ಇಂದುವರೆಗೇನಿಲ್ಲ; ಆದರೂ ಮುಂದೆಲ್ಲ )
ಒಳ್ಳಿತಾಗಲಿ ಎನುವ ಆಶ್ವಾಸನ!

* * * *

ನಾ ಬಂದೆ,
ಮೊದಲ ಸ್ಪಂದನದಿಂದೆ—
ಮುಂದೇನು ಎಂದೆ!
ಬಾಳ ಬೀದಿಯ ಬದಿಗೆ ಬೆಳ್ಗೊಳದ ಬೆಟ್ಟದಲಿ
ಗೊಮ್ಮಟನ ಕಂಡೆ;
ಮುಗಿಲಗಲದೆದೆಯಲ್ಲಿ ಚಿಕ್ಕೆಗಳ ದಂಡೆ!
ಚಂದ್ರಹಾಸದ ಮುಂದೆ
ಹಣತೆಯೊಲು ನಿಂದೆ!

—ಜಿ. ಎಸ್. ಶಿವರುದ್ರಪ್ಪ

# ಯುಗಾದಿ

ಕರೆಯುದಿದ್ದರು ನಾವು ನೀನು ಬಂದೇ ಬರುವಿ
ಅಲ್ಲವೆ ? ಬಾ ಮತ್ತೆ, ಬಾ ಯುಗಾದಿ;
ಎಂಥ ಬಿಸಿಲೊಳು ಬಂದೆ!
ಬೇಕೆ ಬಾಯಾರಿಕೆಗೆ ಬೇವು ಬೆಲ್ಲ ?
ಚಹಕೆ ಸಕ್ಕರೆಯಿಲ್ಲ; ನಡೆದೀತೆ ಬರಿಯ ತಣ್ಣೀರ ಪಾನಕ ?
ಇದು ಹೋದ ವರುಷವೆ ಕೊಂಡ ಬಾಳದಬೇರ ಬೀಸಣಿಗೆ
ನೀರು ಚಿಮುಕಿಸಿದೆ, ತಣ್ಣಗೆ ಬೀಸಿಕೊ.
ಇಲ್ಲೆ ಪಾಟಿಯ ಕಲ್ಲ ಮೇಲೆ ಹಾಸಿದೆ; ಸ್ವಲ್ಪ ಅಡ್ಡಾಗಿ ಏಳು.
ಆಮೇಲೆ ಮಾತಾಡೋಣ ಕುಳಿತು ಹಾಯಾಗಿ
ಒಂದು ಯುಗವಾಗಿಹೋಯಿತಲ್ಲವೆ ನಾವು ಭೆಟ್ಟಿಯಾಗಿ !

* * * *

ಜೆಟ್ ವಿಮಾನ, ಹೆಲಿಕಾಪ್ಟರ್, ಉಗಿಹಡಗ, ಬೋಟು
ಎಮ್. ಎಸ್. ಎಮ್. ರೈಲು, ಕಾರು, ಕೊನೆಗೆ ಎಸ್. ಟಿ. ಬಸ್ಸು ?—
ಯಾವ ವಾಹನದಲ್ಲು ಬರಲಿಲ್ಲವೆ ? ನೋಡಿದರೆ ಇಳಿವಯಸ್ಸು !
ಕೊನೆಗೆ ಎತ್ತಿನ ಬಂಡಿ ಹತ್ತಿ ಬಂದೆಯ, ಹಿರಿಯ
ಎಲೆ ಅಡಿಕೆ ಜಗಿದು, ಕಥೆ ಹೇಳಿ, ಲಾವಣಿ ಹಾಡಿಕೊಂಡು ?
ಒಳಿತಾಯ್ತು ಬಿಡು, ಯಾರಿಗೆ ಸಿಕ್ಕೀತು ದಾರಿಯಲಿ ಇಂಥ ಜೋಡು.
ಬಂದೊಡನೆ ನಿನ್ನ ಗುರುತಿಸಲಿಲ್ಲವೆ ಇಲ್ಲಿ ಯಾರೂ ?
(ಬಗಲಗಸೆ ಅಂಗಿ ತಲೆಗೆ ಹೆಡಿಗೆಯ ರುಮಾಲು )
ದೊಡ್ಡವರಿಂದ ಚೀಟಿಯನು ತಂದಿದ್ದರೆ ಮಾತಾಡಿಸಬಹುದಿತ್ತು
ಇಲ್ಲಿ ಯಾರಾದರೂ
ನೀನೊ ಬರಿಗೈ ಬಂಟ, ಮರೆತುಬಿಡಬೇಕೆ ಇಷ್ಟು ಬೇಗ
ಮುಂಚಿನ ಹಾದಿ

ಅಥವ ಕಂಡೆಯ ಬೇರೆ ಅದಲು ಬದಲು ? !
ವರುಷಗಟ್ಟಲೆ ಎತ್ತಲೋ ಕಣ್ಮರೆಯಾಗಿ ಹೋಗುವ ನಿನಗೆ
ಹೇಗೆ ಗೊತ್ತು—
ಒಳಗೊಳಗೆ ನಡೆಯುತಿರುವ ಮಸಲತ್ತು,
ನಿಮಿಷ ನಿಮಿಷಕ್ಕೆ ಹೊಸ ಹೊಸ ವೇಷ ಧರಿಸಿ ಓಡುವ ಜಗತ್ತು
ಹಾಗೆ ನೋಡಿದರೆ ನಮಗಿಲ್ಲಿ ಏನಿದೆ ಹೇಳು, ವಿಶೇಷ ಸವಲತ್ತು ?
ಇಂದೊ ನಾಳೆಯೊ ವಲಸೆ ಹೋಗುವರು ನಮ್ಮ ಜನ
ಚಂದ್ರ–ತಾರಾಲೋಕ ಹುಡುಕಿಕೊಂಡು
(ಬಹುಶಃ) ಕವಿಗಳನ್ನೂ ಜೊತೆಗೆ ಕರೆದುಕೊಂಡು.

* * * *

ವರುಷ ವರುಷಕ್ಕೊವ್ಮೆ ಬಯಲಟ್ಟದಲಿ ತೊಟ್ಟು ಬರುವೆ ಭರ್ಜರಿವೇಷ
ಓ ಚೈತ್ರಪುರುಷ !
ಬಿರುಗಾಳಿ, ಕೋಲ್ಮಿಂಚು, ಆಣೆಕಲ್ಲಿನ ಮಳೆಯು, ಗುಡುಗು–ಸಂತೋಷ
ಹೇಗಿಹುದು ಪಂಚಾಂಗದಲ್ಲಿ ಹೊಸ ವರುಷ ?
ಕೋಗಿಲೆಯು ಮಾತ್ರ ಬಿಟ್ಟೂಬಿಡದೆ ತನ್ನ ಜಾಹೀರಾತು ಪ್ರಕಟಿಸಿದೆ.
ಅಚ್ಚಾಗಿಹುದು ಕೆಳಗಿನ ಕವಿತೆ
ಚೈತ್ರಪತ್ರಿಕೆಯ ವಿಶೇಷ ಸಂಚಿಕೆಯ ಮೊದಲ ಪುಟದ ಮೇಲೆ :

ತಳಿತ ಮಾವು ಮುಗುಳಾದ ಬೇವು
ಹುಲುಗಲದ ತುಂಬ ಹೂವು
ಬೇಗೆ ಹತ್ತಿ ವ್ಯೆ ಸುಟ್ಟ ಕಾಡು
ಮರೆತಿಹುದು ಎಲ್ಲ ನೋವು.

ಅರ್ಧ ಹಸಿರು ಇನ್ನರ್ಧ ಹಳದಿ
ಅಂಚಿನಲಿ ಚಿಗುರುಗೆಂಪು ;

# ಯುಗಾದಿ

ಬಿಸಿಲ ಬೇಗೆಗೀ ನೆಳಲ ತಂಪು
ತಂಗಾಳಿ ತಂದ ಜೊಂಪು.

ಬಂತು ಗಾಳಿ ಕೆಂಧೂಳಿ ಗೂಳಿ
ಮುಗಿಲುದ್ದ ಹೋಳಿಯಾಡಿ
ಬೆಣಚುಗಲ್ಲ ಬಿಳಿಮೋಡದಲ್ಲಿ
ಕುಡಿಮಿಂಚು ಜೀವ ತಾಳಿ !

ಮೊದಲ ಮಳೆಗೆ ನೀರಡಿಸಿ ನಿಂತ
ಇಳೆಗಾಯ್ತು ಮೊದಲ ಕೂಟ
ಸಾಕು ಎನಿಸಿ ಸಾಕಾಗಲಿಲ್ಲ
ಹೊಸ ಋತುವಿನನೊಡನೆ ಬೇಟ !

* * * *

ನೆನಸಿದೊಡನೆಯೆ ಕನಸಿನಲ್ಲಿ ಬಂದವ ನೀನು
ಬಾ ಯುಗಾದಿ; ' ಶತಂ ಜೀವೇಮ ಶರದಃ '
ನೂರು ವರುಷದ ಮೆದುಳ ಮಡಿಕೆಯೊಳಗೇನಿಹುದೊ—
ಹಬ್ಬ ಹುಣ್ಣಿವೆಗೊಮ್ಮೆ ಬಿಚ್ಚಿ ಬಿಸಿಲಿಗೆ ಹಾಕಿ
ಮಡಿಚಿ ಪೆಟ್ಟಿಗೆಯೊಳಗೆ ಇಟ್ಟಿದಷ್ಟೆ.
ನುಶಿ ಮುಟ್ಟಿದರೆ ಅದರ ಗತಿಯೇನು, ಮೊದಲೆ ರೇಶಿಮೆಯ ಬಟ್ಟೆ !
ಇರಲಿ; ದಾರಿಯುದ್ದಕು ನೀನು ಕಂಡುದೇನು ?
ಎಲೆಯುದುರಿ ರಸವಾರಿ ಕೊಂಬೆಗೈಗಳ ಚಾಚಿ
ಬಾನಿಳೆಯ ನಡುವೆ ಜೋತಾಡುತಿರುವೀ ಅಸ್ಥಿಪಂಜರಗಳು ?
ಸ್ವಲ್ಪ ತಾಳು,
ಯುಗಯುಗಕ್ಕೊಮ್ಮೆ ಸಂಭವಿಸಿ ಬಂದರು ಅವಗೆ
ದುಂಬಾಲು ಬೀಳುವ ಮಂದಿ ಎಷ್ಟು ಹೇಳು.

ಸ್ವತಃ ನೀನೇ ಎಷ್ಟು ಸಲ ಬಂದು ಹೋದೆಯೋ ಈ ಹಿಂದೆ
ಬರಲಿರುವೆಯೋ ಮತ್ತೆ ಇನ್ನು ಮುಂದೆ !
ಮಹಡಿ, ಗೋಪುರ, ಗುಡಿಲು, ಕೋಟೆ, ಕೊತ್ತಳ, ಬೀಳು
ಕೊಳಚೆ, ಗೊಬ್ಬರಗುಂಡಿ, ಒಗ್ಗಾಲಿಬಂಡಿ—
ನೀ ಬರುವ ಮುನ್ನವೇ ನಡೆದಿತ್ತು ನೀ ಬರುವ ದಾರಿಯ ರಿಪೇರಿ;
ಮುಂದೆ ಬರುವಾಗೆಲ್ಲ ಬಲು ಹುಷಾರಿ !
ಮರೆಯದಿರು ಕನಿಷ್ಠ ವರುಷಕೊಂದಾದರೂ ಬೇಕು ನಮಗೆ
ಹೊಸ ಮಾದರಿ !

*  *  *  *

ಯುಗಯುಗದ ಹಾದಿಯಲಿ ನೆಳಲು ಬಿಚ್ಚಿದೆ ಬೋಧಿ
ಆಗಾಗ ಬಂದು ವಿಶ್ರಾಂತಿ ಪಡೆಯುವವಿಲ್ಲಿ ಈ ಜಗದ ಕರುಣೆ, ಶಾಂತಿ;
ಎದೆಯ ಗುಹೆಯಲ್ಲಿ ಮಿಣುಕುತಿದೆ ' ಕಲ್ಯಾಣವೆಂಬ ಪ್ರಣತಿ '
ಒಳಗು ಹೊರಗೆಲ್ಲ ಒಂದೆ ರೀತಿ.
ಯುದ್ಧರಂಗದಲಿ ಸನ್ನದ್ಧವಾಗಿದೆ ರಥವು
ಎಲ್ಲಿ ಆ ಸಾರಥಿ ?

' ಓಡ್ಯಾವ ಏಳು ಕುದುರೀ ಮುಬ್ಬು ಕೆದರೀ
ಮೂಡ್ಯಾವ ಏಳು ಬಣ್ಣಾ ತುಂಬಿ ಕಣ್ಣಾ
ನೋಡ್ಯಾವ ಬಯಲು ಸುತ್ತಿ ಬೆಳಕು ಬಿತ್ತೀ '
ಓ ! ಇದು ಈಗ ನಮ್ಮ ಸರತಿ.

— **ಚೆನ್ನವೀರ ಕಣವಿ**

# ಮಣ್ಣಿನ ಮೆರವಣಿಗೆ

೧

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ;
ಆರಿದೆಯೆಂದವರಾರೊ ಇನ್ನೂ ನಿಗಿ ನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ !
ಹರಿಯುತ್ತಿವೆ ಬೆಂಕಿಯ ಹೊಳೆ
ತಣ್ಣನೆ ಕಡಲೊಳಗೆ;
ಹೊಗೆಯಾಡುತ್ತಿದೆ ಸುಮ್ಮನೆ ಸುಣ್ಣನೆ ಬಾನೊಳಗೆ.
ಬಿದ್ದಿವೆ
ಒಡಮುರಿದೆದ್ದಿವೆ ಗಿರಿ ಗಹ್ವರ–
ಯುಗಯುಗಗಳ ನೋವೆ !
ದರಿಕಂದರದೊಳಗಿನ್ನೂ ಹರಿದಾಡಿದೆ ಸಂಶಯವೆ.

ಕುದಿಯುವ ಆ ಬಸಿರಿನ ಆವುದೊ ರಸ ಹೀರಿ
ಚಿಮ್ಮಿವೆ
ದಿನದಿನವೂ ಹೊಮ್ಮಿವೆ ಹಸುರಾಗಿ
ಲಕ್ಷಾಂತರ ಆಶೆ !
ದಿಕ್ಕುದಿಕ್ಕುಗಳ ಗೋಪುರವೇರಿ ದಿಟ್ಟಿಸಿವೆ :
ಕಣ್ಣ ಕ್ಷಿತಿಜದ ಆಚೆ ನೂರು ಗೋಲಗಳಾಡಿ
ಅದನಿದನು ಇದನದನು ಹಿಡಿದು ಎಳೆದಾಡಿ
ಕೂಡಿ ಕುಣಿದಾಡಿ
ಕೊನೆಯಿರದ ವರ್ತುಲಕೆ ಒಯ್ದು ಮುಟ್ಟಿಸಿವೆ !

## ಮಣ್ಣಿನ ಮೆರವಣಿಗೆ

ಸಂಜೆ ಮುಂಜಾವಗಳ ಸೂರ್ಯಬಿಂಬದ ಸುತ್ತು
ಸದ್ದುಗದ್ದಲವಿಲ್ಲದೆದ್ದು ಬಾನಂಗಳಕೆ ಬರುವ
ಚಂದ್ರನ ಹೆಗಲ ಮೇಲೆ ಹೊತ್ತು
ಬಾನಕಣದಲಿ ಕೋಟಿ ಚಿಕ್ಕೆ ಹಂತಿಯ ಕಟ್ಟಿ
ದಿವದ ಬದುಕನು ಒಕ್ಕಿ ರಾಶಿ ಮಾಡಿ
ಬೆಳಕು ಚಕ್ರಾಕಾರ ತಿರುಗುತ್ತಿದೆ !

೨

ಮಣ್ಣ ಮನೆಯೊಳು ಮಗುವು ಕಣ್ಣು ತೆರೆದಿತ್ತು.
ಬೆಳಕಿಂಡಿಯಿಂದ ಪಡಸಾಲೆಯಲಿ, ಮೂಲೆಯಲಿ
ಕೋಲಾಡಿಸಿತ್ತೆಳವಿಸಿಲು ;
ಕಿಟಕಿಯಲಿ ಕೈಚಾಚಿ ಕರೆದ ಚಂದ್ರ.
ಚಿಕ್ಕೆ ನಕ್ಕವು ಬಾನಕನ್ನಡಿಯ ತುಣುಕಿನಲಿ
ಬಾನಬೀದಿಗೆ ನೂರು ಬೆಳ್ಳಿಯು ರಥ !
ಅಕ್ಕಪಕ್ಕದ ಮರದ ಹೂ ತುರಾಯಿಯ ಮೇಲೆ
ಹಾಡಿನುಯ್ಯಾಲೆ !
" ಅಕ್ಕ ಓ ಚಿಕ್ಕವ್ವಾ "
ಸಾಲೆಕೋಣೆಯಲಂದು ಮಗ್ಗಿ ಒಪ್ಪಿಸುವಾಗ
ಮೇಜಮೇಲೆಯೆ ಇತ್ತು ಪೃಥ್ವಿಗೋಳ
ಗೂಡಿನಲಿ ಕುಳಿತು ಗುಟುಕರಿಸಿತ್ತು ಪಾರಿವಾಳ.
ಕಿಟಕಿಯಾಚೆಗೆ ದೂರ ಬೆಟ್ಟ ಬಯಲುಗಳಲ್ಲಿ
ಮುಂಗಾರು ಮಳೆಬೆಳೆದ ಭಾವಮೇಳ !
ಮಣ್ಣೆನೆದೆಯೊಳು ಸ್ನೇಹವಂಕುರಿಸಿ ಬೆಳೆದು
ಬೆಳುದಿಂಗಳಿನ ಹೊನಲೆ ಎಲ್ಲೆಲ್ಲು ಹರಿದು
ಕಣ್ಣೆದುರು ಸಾಗಿತ್ತು ಮಣ್ಣ ಮೆರವಣಿಗೆ
ಇಲ್ಲಿಂದ ಆ ಬಾನ ಗುಡಿಯವರೆಗೆ !

೩

ಕತ್ತಲೆಯ ಕೋಣೆಯಲಿ ಹುಣ್ಣಿವೆಯು ಹರಿದಾಡಿ
ಮಣ್ಣಗೋಡೆಯ ಮೇಲೆ ಬಣ್ಣ ಬರೆದಿತ್ತು.
ಆಷಾಢ ನಿಬ್ಬಣವು ಸೂಸ್ಯಾಡಿ ಬರುವಾಗ ಎಷ್ಟೊಂದು ಚೆಂದವಿತ್ತು !
ಚಿತ್ತವೆಲ್ಲಾ ಅದರ ಮೇಲೆ ಇತ್ತು.
ಬಂದುಹೋದವು ಬಂಡು ಹೂಡಿ ಒಂದರ ಮೇಲೆ ಒಂದು ಮಳೆಗಾಲ
ಗುಡುಗಿ ಗದ್ದಲಿಸಿ ಮದ್ದಳೆ ಬಡಿದು, ಹಿಡಿದು ಹೆಂಡದ ಬುಂಡಿ
ಎತ್ತಿ ಕುಡಿದು !
ಹಾಗು ಹೀಗೂ ಗೋಡೆ ನಿಂತಿಹವು ಜೋಲಿ ಹಿಡಿದು–
ಕುಸಿಯತೊಡಗಿದೆ ಕೆಳಗೆ ನೆಲಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು
ಎಷ್ಟು ಮಣ್ಣನು ಹಾಕಿ ಮೆತ್ತಿದರು ಪ್ರತಿವರುಷ ಇವರ ಹಾಡೇ ಇಷ್ಟು !
ಮಾಳಿಗೆಯ ಮೇಲೆ ಇರುವೆಗಳ ಸಾಲುದುರ್ಗ
ಜಂತಿಯಲಿ ಇಲಿಗಳೋಡಾಡಿ ದಿನವೂ ಬುಟ್ಟಿ ಬುಟ್ಟಿ ಮಣ್ಣುದುರಿ
ಎಲ್ಲಿ ನೋಡಿದರಲ್ಲಿ ಸುರಂಗ ಮಾರ್ಗ !
ಇರುಳಿನಲಿ ಕುರುಡು ಬೆಳಕಿನ ಸುತ್ತು ನೆರಳುಗಳ ಕುಣಿತ.
ಇತ್ತೊ ಇಲ್ಲೋ ಎನಿಸಿ ಬಿಡುವ ಕತ್ತಲೆ ಒಳಗೆ
ಹತ್ತು ಸಲ ಆರಿ ಹತ್ತುವ ದೀಪ ಬೀದಿಯಲಿ
ಕೂಟುಕೂಟುಗಳಲ್ಲಿ ಬೂಟು ಸಪ್ಪಳ ಸೀಟಿ
ದಾಟಿ ಹೊಸತಿಲಿನಾಚೆ ಹೋದರೇನೊ ಎಂತೊ—
ಒಟ್ಟಿನಲಿ ಪರಿಸ್ಥಿತಿ ತುಂಬಾ ಶೋಚನೀಯ.
ಮೇಲೆ ಕಣ್ಣಿಟ್ಟ ಕಡೆಗೆಲ್ಲ ಜ್ಯೋತಿರ್ಮಾಲೆ
ನೀಲ ಬೆಳಕಿನಪೂರ್ವ ನೃತ್ಯಶಾಲೆ
ಮಣ್ಣ ಮಡಿಲೊಳು ನಿತ್ಯ ಯಾತನೆಯ ನೆಲಗುಮ್ಮ
" ಎಚ್ಚತ್ತು ತಾಯಿ ಎಂವಿ ಬಿಚ್ಚ ಏಳಮ್ಮಾ
ಮಲಗಿರುವ ತಾಯಿ ಪೃಥಿವೀ "

## ಮಣ್ಣಿನ ಮೆರವಣಿಗೆ

ಕತ್ತಲೆಯ ಹುತ್ತ ಬೆಳೆದಿದೆ ಎತ್ತ ಸರಿದರೂ
ಆದರೂ ಎಂಥ ಸೋಜಿಗವೆಂದಿ—
ಆದಿಯಿಂದಲೂ ನಡೆದು ಬಂದಿದೆ ಬೆಳಕಿನಿಂದಲೆ ಅದರ ಉಪಜೀವನ !
ಜನನದಲಿ ಮರಣದಲಿ ತುಂಬಿ ಜಯಗಾನ.
ಚಳಿಗಾಲದಲ್ಲಿ ಮೈ ಸೆಟೆದುಕೊಂಡಿದ್ದ ತರು
ಬಂದು ನಿಂತಿದೆ ಬೀದಿ ಮಧ್ಯದಲಿ ಸಿಂಗಾರಗೊಂಡ ತೇರು
ಬೇಡವೆಂದವರಾರು ? ಹಲಗೆ ಬಾರಿಸಿ ಕಹಳೆಯೂದಿ
ಸಾಗಲಿ ಮುಂದೆ ದುಂದು ಮೆರವಣಿಗೆ
ಓ ಜೀವನವೆ ! ಶುಭಮಸ್ತು ನಿನಗೆ.

—ಚೆನ್ನವೀರ ಕಣವಿ

# ವೈದ್ಯವಿದ್ಯಾಲಯ

## ೧

ವೈದ್ಯವಿದ್ಯಾಲಯದ ವಿದ್ಯಾರ್ಥಿಗಳ ವೃಂದ
ನೆರೆದಿಹುದು. ಕಸಬುಗಾರರೆ ಹೆಚ್ಚು. ದೇಶಸೇ-
ವಕರು ಅಲ್ಲಿಲ್ಲಿಹರು. ಕೊಯ್ತಗೆಯ್ತದ ಸಜ್ಜು-
ವನೆಯನೀಕ್ಷಿಸುತಿಂದು ಬೆರಗಾದೆ. ಮೃತದೇಹ
ಬಿದ್ದಿಹುದು,—ಚರ್ಮಗಾರನ ಕಿರಿಯ ಕಾವಣದೊಲು!
ಹಳಬನಿಹ ಪಾಂಥಸ್ಥ ಹಸಿಬೆಯಲಿ ತುರುಕಿರುವ
ಹಿರಿಕಿರಿಯ ಗಂಟು–ಗದಡಿಗಳಂತೆ ಚರ್ಮಧೀ
ಹೊದ್ದಿಕೆಯಲಿವೆ : ಫುಪ್ಪುಸವು,–ರಬ್ಬರಿನ ತಿದಿಯು.
ರಬ್ಬರಿನುಸಿರುಗೊಳವೆ; ಹೃದಯ–ರಬ್ಬರು ಪಿಂಡ;
ಸಕೃತ್‌ದರ್ಶನಕೆ ಯಕೃತ್ತೊಂದು ರಬ್ಬರುಮುದ್ದೆ.
ಬೆನ್ನೆಲುಬಿಗಂಟಿರುವ ರಬ್ಬರಿನ ರಜ್ಜುವಿದು
ಕಶೇರುಕಾರಜ್ಜು ( ಕುಂಡಲಿನಿ ಹೋಯ್ತೆಲ್ಲಿ ? )
ಪ್ಲೀನು ರಬ್ಬರು. ಮತ್ತೆ ಕೆಳಹೊಟ್ಟೆ, ಒಳಹೊಟ್ಟೆ–
ಯೆಲ್ಲ ರಬ್ಬರು, ಮೂತ್ರಕೋಶ, ವೀರ್ಯದ ಕೋಶ.
ಚರ್ಮಗಾರನು ಚರ್ಮವನ್ನನಾಯಾಸದಲಿ
ತುಂಡರಿಸುವೊಲು ಎಳೆಯರಂಗಾಂಗಗಳನೆಲ್ಲ
ಕಪಕಪನೆ ಕೊಯ್ಯುವರು. ಹುಡುಗಾಟವಾಡುವರು.
ಅವಯವಗಳೊಡನೆ ಸೆಂಡಾಡುವರು.
ನೋಡುತಿದನೆಲ್ಲ ಮಸಣದ ಗೀತೆಯೊಂದಾಗ
ಬಾಯಂಗಳದಿ ಜನುಮ ತಾಳಿತ್ತು : ಇದು ಗೀತೆ :

## ವೈದ್ಯವಿದ್ಯಾಲಯ

ನಾನು ರಬ್ಬರು
ನೀನು ರಬ್ಬರು
ರಬ್ಬರೇ ಇನ್ನೊಬ್ಬರು !
ಪ್ರಾಣಹೋಗಲು ರಬ್ಬರಿನ ಈ
ಗೊಂಬೆಗಳು ಬರಿ ಗೊಬ್ಬರು !

೨

ಅಂಚೆಮನೆ-ತಂತಿಮನೆಗಳ ತಂತಿವ್ಯೂಹದೊಲು
ಧಮನಿ-ಸ್ನಾಯುಗಳು ಸುತ್ತಿಹವೆಲ್ಲಿ ನೋಡಿದೊಡೆ,
ಕಾಲ್ಬೆರಳಿನಿಂದ ಮಸ್ತಕದ ಪರ್ಯಂತ. ಓ !
ಅಹುದು ! ಅಸ್ತವ್ಯಸ್ತ ಸನ್ಯಸ್ತ ದೇಹದಲಿ
ಸಿಸ್ಟೊಂದು, ಕ್ರಮವೊಂದು. ದೇಹದಾಡಳಿತದಲಿ
ಕರ್ಮಸಚಿವನ ಶಾಖೆ, ಅರ್ಥಸಚಿವನ ಶಾಖೆ,
ನೀರಾವರೀ ಯೋಜನೆಯ ಶಾಖೆ, ಆರೋಗ್ಯ-
ಸ್ವಚ್ಛತೆಯ ಶಾಖೆಗಳು. ಇದರ ಯೋಜಕನೆಲ್ಲಿ ?
ಸರಕಾರವೆಲ್ಲಿಹುದು ? ಈ ಯಂತ್ರವಾಹನದ
ನಿಯಂತ್ರಕನೆಲ್ಲಿ ? ಎಲ್ಲಿ ? ಎಲ್ಲಿ ?
ತಂತಿಗಳಿವೆ; ವೀಣೆಯಿದೆ.
ವೈಣಿಕನೇ ಇಲ್ಲ !
ತಂಬೂರಿಯು ಇದ್ದವೊಲಿದೆ.
ನಾರದನೇ ಇಲ್ಲ !
ಇಲ್ಲ ತಂತಿಗಳಲಿ ಜೀವ
ತುಂಬಿಸುತಿಹ ಬೆರಳು !
ಇಲ್ಲ ಧ್ವನಿಯು,—ಯಾವುದಕ್ಕೆ
ಕೊಳಲಾಯಿತೊ ಕೊರಲು !

## ವೈದ್ಯವಿದ್ಯಾಲಯ

೩

ರುಗ್ಣಾಂಗಗಳ ಸಂಗ್ರಹಾಲಯಕೆ ಮುನ್ನಡೆದೆ.
ಉತ್ತಮ ಬಟಾಟೆಯಲಿ ಕಾಲಿಫ್ಲಾವರು ಬೆಳೆದ-
ವೊಲು ಕಾಂಬ ಮೆದುಳಿಗಿದೊ ಛಿದ್ರರೋಗದ ರಾಹು!
ಫುಪ್ಫುಸಕೆ ರಾಜಯಕ್ಷ್ಮದ ಬಿರುಸು; ಹೃದಯಕ್ಕೆ
ರಕ್ತಾಣುವಿನ ಥ್ರಂಬೊಸಿಸ್ಸು. ಸ್ಪ್ಲೀನಿನ ಮೀನು
ಕೂರ್ಮವಾಗಿಹುದಿಲ್ಲಿ. ಯಕೃತ್ತಿದು ವಿಕೃತ-
ವಾದ ಕುಂಬಳಕಾಯಿ. ಒಳಹೊಟ್ಟೆಯಲಿ ಕುಳಿತು
ಕೊಬ್ಬಿಹಳು ಸಂಗ್ರಹಿಣಿ,—ಡಾಕಿನಿಯು! ಮೂತ್ರಕೋ-
ಶದಿ ಕೆಂಡವಿಟ್ಟಂತೆ ಕಲ್ಲು ಹರಳಿದು ಗುಂಡು.
ಜನನೇಂದ್ರಿಯಕೆ ಚಿತ್ರಹಿಂಸೆಯಾ ರಾಜಗುರು,
ಕಾಲಿದಾನೆಯ ಕಾಲು. ಹೊಟ್ಟೆ ಕ್ರಿಮಿಗಳ ಮೊಟ್ಟೆ.
ನನ್ನಂಥ ಮಾನವನ ಅಂಗಾಂಗಗಳಲಿಂಥ
ರೋಗರುಜಿನಗಳು ವ್ಯಾಪಿಸಬಲ್ಲವೆಂಬುದನು
ತಿಳಿದು ನಾ ಬೆಪ್ಪಾದೆ. ಉಸಿರಿನಾ ನಿರ್ಗಮನ-
ಕಿರುವ ಸಾವಿರ ನಾಗಮುರಿಗೆಗಳ ಘಟ್ಟಗಳ
ನೀಳ್ದಾರಿಗಳ ಕಂಡು ಕರುಳು ಕುದಿದಿತ್ತು.
ಇಲ್ಲಿ ತನ್ನೊಳವೆಮ್ಯ್ಯ ತನಗೆ ತಾನೆಯೆ ಬಿಚ್ಚಿ
ನೋಡಿಕೊಳುತಿದೆ ಕಾರು. ಭೀತ ಮಾನವ ಬುದ್ಧಿ
ತನ್ನ ಮುತ್ತುವ ವಿನಾಶದ ದಾರಿಗಳ ತಿಳಿಯ-
ಬಯಸಿಹುದು. ಇರಲೇನು? ಏನು ಏನು?

> ಸೂಸಿ ಬಂದು ಬೀಸಿ ಹೊಯ್ತು,—
> ಗಾಳಿಗಾವ ಬಟ್ಟೆ?
> ಗಾಳಿಯೊಡನೆ ಗುದ್ದಾಡಲು
> ನೀನು ಮಾತ್ರ ಕೆಟ್ಟೆ!

## ವೈದ್ಯವಿದ್ಯಾಲಯ

೪

ಅಂಗಾಂಗಗಳನು ಬಿಡಿಬಿಡಿಯಾಗುತಿರಿಸುತ್ತ
ಪರಿಕಿಸುವ ವರ್ಕ್‌ಶಾಪು : ಈ ವೈದ್ಯಶಾಲೆ.
ಯಂತ್ರೋಪಯಂತ್ರಗಳನೆಲ್ಲ ಕೀಲಿಸಿ ಚಲಿಸಿ
ಮಂತ್ರಿಸುತ ಬೆಳೆಯುವೊಲು, ನಡೆಯುವೊಲು, ಹಾರುವೊಲು
ಗೆಯ್ವ ಮಾಯಾವಿಯ ಪ್ರಯೋಗ ಮಂದಿರವೆಲ್ಲಿ ?
ಯಂತ್ರ–ಯಂತ್ರಾರೂಢರನು ನಿರ್ಮಿಸುವ ಮಹಾ
ನಿರ್ಮಾತೃವಿನ ರಹಸ್ಯಾಗಾರದಲ್ಲಿಣಿಕಿ
ನೋಡಬೇಕೆಂದಿರುವೆ. ಅದಕಾವ ಕಣ್ಣು ?
ಬೇಕೆನಗೆ ಇಂದ್ರುವರ,—ಆ ದಿವ್ಯ ನೇತ್ರ.

ನಿಃಸೀಮದ ಸೀಮೆ,
ಅನಂತದಂತಪಾರ,—
ಇದ ತಿಳಿವುದೆ ವಿದ್ಯೆ
ಉಳಿದುದು ನಿಃಸಾರ.
ಬರಿ ಮೆಕ್ಯಾನಿಕ್ ಅಲ್ಲ,—
ಉತ್ಪಾದಕನಾಗು.
ಬರಿ ಪುರಾಣಿಕನಲ್ಲ,—
ನಿಜ ಸಾಧಕನಾಗು !
ಗಾಳಿಯ ಹೆಜ್ಜೆಯ ಗುರುತಿಷು,
ಅರಗಿಳಿಯೊಡನಾಡಿ,
ಪ್ರಾಣಪಕ್ಷಿಯನ್ನು ತಿಳಿ
ಮುಗಿಲೊಳು ತೂರಾಡಿ.

—ವಿನಾಯಕ

# ಹೊರಗು ಒಳಗು

ಆ ಹೊರಗೆ ನಡುರಾತ್ರಿಯೆಳೆಗತ್ತಲು,
ಚಿಕ್ಕೆಗಳ ಕಣ್ಸನ್ನೆಯಲಿ ನರಿಯ ಬೊಳ್ಳಿನ ಸೆಳೆತ
ರಾತ್ರಿ 'ಮೇಲಿ'ನ ಪಯಣದೋಟ—
ನಡುವೆ ತೆರೆಯಿಳಿದಂತೆ ರಂಗದಲಿ ನಿಶ್ಶಬ್ದ; ನಟ್ಟಿರುಳ ಮೌನ !

ಕಿಟಕಿಯೀಚೆಗೆ–ಒಳಗೆ,
ವಿದ್ಯುದ್ಬುರುಡೆ ಪಸರಿಸಿದೆ ತಿಳಿನೀರಿನಂಥ ಬೆಳಕು
ನಾಲ್ಕು ಗೋಡೆಯ ಮೇಲು ಕಾಯ್ದಿರುವ ಬತ್ತಲೆಯ ರೂಪಗಳು
ನುಡಿಯಬೇಕು :
ಇಲ್ಲ ; ಹಾಗಲ್ಲ–ಬಾಯ್ಕಟ್ಟಿ ಬಿದ್ದಿರುವ ನೂರಾರು ಪುಸ್ತಕದಿ
ಒಂದಾದರೂ ಜಡಿದು ಅಬ್ಬರಿಸಬೇಕು.
ಗಡಿಯಾರ–ಮರುಳು ; ಕಂಡರೂ ಕಾಣದಂತಳೆದಳೆದು
ಸುರಿಯುತಿರಬೇಕು—
ಇಲ್ಲದಿರೆ–ಅದೋ ಕಿವಿಯ ಹಿಂಡಲು ಸಿದ್ಧ ಕಾಯ್ದಿರುವನು !

ಅದೇ ಕಿಟಕಿಗಾಜಿನ ಆಚೆ,
ಜಾಲರಿಯ ಹೊರಗಿಂದ ಹಿಣುಕುತಿದೆ ಕಗ್ಗತ್ತಲು
ಕಾಲೇಜು ಹುಡುಗಿಯರ ನಗೆಯಂತೆ ಹರಡುತಿದೆ ವಿದ್ಯುದ್ವಳ್ಳಿವೆಳಗು
ನಗೆ ಗುಲಾಬಿಯನೆಸೆಯುತಿಹ ನಗ್ನರೂಪಗಳೆಲ್ಲ ನಾಚಬೇಕು !

ಆದರಯ್ಯೊ ಪಾಪ ಹಲ್ಲಿಗಳೆರಡು ಹೋರುತಿವೆ ಬಾಲದಲಿ
ಗಾಜಿನೀಚೆಗೆ ಕುಳಿತು ಜೂಕರಿಸುತಿಹ ಕಿರುಚಿಟ್ಟೆ ಮರಿಯನರಿದು.
ಯಾರಿಗೇನ್ ಗೊತ್ತು ಹೊಟ್ಟೆಕಡಿತದ ಹುಚ್ಚು
ಒಂದಳಿದರೊಂದುಳಿಯಬೇಕು !

## ಹೊರಗು ಒಳಗು

ಹೊರಗೆ ನಟ್ಟಿರುಳ ಮಸಿಗತ್ತಲಲಿ ಹಿಣುಕುತಿವೆ ಕೋಟಿ ತಾರೆ
ಒಳಒಳಗೆ ಜಪಿಸುತಿವೆ ನೂರೆಂಟು ವಿಜ್ಞಾನಗಳ ಮೋರೆ.
ಯಾವುದೋ ಬೆಳಕು; ಯಾವುದೋ ಕತ್ತಲು;
ಎರಡು ಮೊಗವೆರಡು ಬಗೆಯಾದರೂ ನಾಣ್ಯದಂತೆ.

ಆದೋ ನಟ್ಟನಡುವಿರುಳಿನಲಿ ರೈಲು ದನಿಗೊಡುತಲಿದೆ
ನರಿಯ ಬೊಳ್ಳಿನಂತೆ
ಉದುರುವುದೆ ತಾರೆ ? ಅದುರುವುದೆ ನೆಲ ?
ಹಗಲಿರುಳ ಹೊರಳಾಟ ಮುಗಿದು ಸಮನಾಗುವುದೆ ಜಟ್ಟಿಗಳ
ಪಂದ್ಯದಾಟ ?
ಮುಗಿವುದೋ ಮುಗಿಯದೋ ಈ ರೈಲಿನೋಟ !

ನಿಜಕು ಕಿಟಕಿ ಕನ್ನಡಿಯಾಚೆ ಈಚೆಗಳಲ್ಲಿ
ಅಂತರವಿದೆ. ಧ್ರುವದಂತರ !
ಭೂಮಿಗೂ ತಾರೆಗೂ ನಡುವಿರುವ ವಿಸ್ತಾರ !

—ಕೆ. ವೆಂ. ರಾಜಗೋಪಾಲ

# ಕರ್ಮಕಾಂಡ

ಇರುಳು, ಇರುಳು, ಇರುಳು. ನಡುವಿರುಳು
ಮಸಿಗತ್ತಲೆಯ ಸುರಿವ ಮಳೆ ಮುಗಿಲ ನೆರಳು !
ಹಳೆಯ ಕೊಳೆ ಹೊನಲಿನಲಿ ತೇಲಾಡುತಿಹ ಮಹಲು :
' ಧರ್ಮೋರಕ್ಷತಿ ರಕ್ಷಿತಂ '
ಬಿಸಿಲ ನೆನಪೂ ಇಲ್ಲ ; ಬೆಳಕಿನುಸಿರೂ ಇಲ್ಲ ;
ವಿಷಮಸೀತದ ಸನ್ನಿ ಎದೆಯ ಪಾರಿವಾಳಕ್ಕೆ—
ಅಯ್ಯೋ ಕೊಡಹುವಂತಿಲ್ಲವಿನ್ನು ಬಣ್ಣಬಣ್ಣದ ರೆಕ್ಕೆ !
ಹಳೆಯ ಚರ್ಮವ ಸುಲಿದರೂ ಹೊಸ ಹರಯ ಬರಲಿಲ್ಲ ;
ಬರದಿದ್ದರುಳಿದಿರಲಿ ಹೊಸ ಹಗಲು—
ಹೊಸ ಬೆಳಕಿನಲಿ ಹಳೆಯ ಹುಡಿ ಹುಡಿಯ ಮೇಲೆ ಮಹಲು !

ಗಿರಿಯ ಬಿಳಿದೊಡೆಗಳಲಿ ಮಲಗಿಹುದು ' ಓರೆಕೋರೆನಗರ '
ಹೇಮಂತನುಸುರಿನಲಿ ಇದರ ಬಗೆ ನೂರು; ತರತರ !
ಗಂಟೆಯೆರಡಾದರೂ ಕಾವಳದ ಮುಸುಕಿದೆ ; ಅರೆದೆರೆದ
ರೆಪ್ಪೆಯಲಿ ತೇಲಾಡುತಿದೆ ಮಾಲುಗಣ್ಣು.
[ ಅಯ್ಯೋ ಹೃದಯದಲಿ ಜೀವ-ಹುಣ್ಣು ]
ಹೊಸ ಹಗಲು ಕನಸು; ಹೊಸ ಮನಸು ಕೂಡ
ಯುಗೆಯುಗಾಂತರದ ಕಣಸು !
ಇಲ್ಲ ; ಈ ಬವಣೆಯಲಿ ನಗರ ಕೈಕಾಲನೊದರುತಿಲ್ಲ;
ತಾಯಿಗಿರಿ ಕಣ್ಬಟ್ಟಲಲಿ ಕಂಬನಿಯು ತುಳುಕಿದರೂ
ಈ ಕಂದನ ಬಗೆ ತಿಳಿಯದಲ್ಲ ;
ಉದ್ಧಾರಕ ವೈದ್ಯ ಬಡ ಜೋಪಡಿಗೆ ಹಾರಿ ಬರುವನೇ ?
ಯಾವುದೋ ದನಿಯುರುಳುತಿರೆ ಗಗನದಲ್ಲಿ—

ತಾರೆಯಿಂದಿಳಿಗಿಳಿವುದೇ ?
ನವಜಾಗರದ ಸ್ನೇಹ ಚಿಗುರಿ ಮೋರೆಗಳ ಬಿಡುವುದೇ ?
ಅದೋ ಗಿರಿಯ ಬಟ್ಟಲುಗಣ್ಣು ದಳದಳವ ತೆರೆದಿದೆ—
ಗಂಟಲೊತ್ತಿತು ' ಹಸಿವೆ '–
ಹೆಣ್ಣುಸಿರು ಹೊರಳಾಡಿತು ;
ಬತ್ತಿಹೋಯಿತು ರಕ್ತ ; ಕರಗಿಹೋಯಿತು ಮಾಂಸ;
ನಂದಿ ಹೊಗೆಯಾಯ್ತು ಜೀವ !
ಎಲುಬುಗಾಲಿನ ಮೇಲೆ ಮಲಗಿ ನೋಡುತಿದೆ ಕಂದ ಗಗನವನ್ನೆ—
ಹೊಸಬೆಳಕು, ಹೊಸಬೆಳಕು, ಹುಸಿವ ಬಣ್ಣವನ್ನೇ ?
ತಾರೆಗಳ ತಲೆಯಿಲ್ಲ; ಹಾಳು ಚಂದ್ರಾಮನೂ ಇಲ್ಲ—
' ನಾಳೆ ಬರುವನೇನು ? '
ಮುಗಿಲೊಣಗುವ್ಯೆ ಬಿರುಕುಗಳ ಹರಹರಕು ಚಿಂದಿಯ ಡೇರೆ–ನೋಡು
ನಡುವಿರುಳಿನಲಿ ಹೊಯ್ಲಿಡಲಿ ಬಿಡು. ತಬ್ಬಲಿ ಕೂಸು :
ದೇವನಿಲ್ಲದ ಜಗದ ಕಂದನಿಗೆ ಸಾವಿನೊಲವೊಂದೆ ಲೇಸು.
ಹಸಿದು ಹಸಿದು ಹಸಿವು—ಬೆಳೆದು ಬೆಳೆದು ಹಳತು !
ಈ ಮಸಣದಲಿ ನೂರಾರು ನೆರಳುಗಳು ನಾಯಿಕೊಡೆಯೆತ್ತಿ ನರ್ತಿಸಿವೆ
ವಿಷಮುದಲೆ ವೃತ್ತದಲ್ಲಿ !
ಸತ್ತ ನೆಲದೆದೆ ನುಗ್ಗು ನೂರಾದರೇನಂತೆ
ಸುತ್ತಿ ಸುಳಿಯೆದ್ದು ನಿಲ್ಲುತಿದೆ ನೆರಳು ಮರಳುಗಳ ಲೀಲೆ !
" ಮಾನವತೆಗಿಲ್ಲೊಂದು ಸುಖ ಸಮಾಧಿ " ಎನ್ನುವಲ್ಲೆ !
ಓ ನಭವೇ ಹೊಸ ಬೆಳಕು ಬರಲಿ
ನೆರಳೇನು ಮರುಳೇನು ಕರಗಿ ಒಂದಾಗುವುದು ಹೊಸನೀರಿನಲ್ಲಿ
ಹಸಿವೆ ಕೈಮುಗಿಯುವುದು ಮರುಚಣದಲಿ
" ಕರ್ಮಣ್ಯೇವಾಧಿಕಾರಸ್ತೆ ಮಾ ಫಲೇಷು ಕದಾಚನ "

—ಕೆ. ವೆಂ. ರಾಜಗೋಪಾಲ

# ಮಾನಸ ಸರೋವರ

## ೧

ಇರುಳು ಕಣ್ಣವೆ ಬಿಚ್ಚಿ ಆಕಳಿಸಿತು ;
ಶಿವ ಬರೆದ ಕತೆಯ ಪುಟವೊಂದು ತಿರುವಿ
ನನ್ನ ಮನೆ ಮೂಡಲಲಿ ಬೆಳಕಾಯಿತು.
ಕಿಟಕಿಯಲಿ ಹಕ್ಕಿ ಚಿಲಿಪಿಲಿಗುಟ್ಟಿ
ನಸುಕಿನಲಿ ಬುಡಬುಡಕಿ ಶಕುನ ಹೇಳಿ ;
ಇದ್ದವರ ಮರಣವೋ ಸತ್ತವರ ಮೋಕ್ಷವೋ
ಅರ್ಥವಾಗದ ಭಾಷೆ ಹೇಳಿ ಕೇಳಿ ;
ಬೆಳಕಿಂಡಿಯಲಿ ಬಂದ ಒಂದೆ ಬೆಳಕಿನ ಕಿರಣ
ಮನೆತುಂಬಿ ನಿಲ್ಲುವದು ಸ್ವತ್ವಪೂರ್ಣ.
ಮನೆಯಾಚೆ ಮುಂಜಾವು ಮಂಜು ಪರದೆಯ ಸರಿಸಿ
ಬಯಲು ಬಂಗಾರಮಯ ಮುಖವರಳಿಸಿ
ಬಿದ್ದ ಮನ ಸಿಡಿದೆದ್ದು ಹಕ್ಕಿರೆಕ್ಕೆಯ ಹೊದ್ದು
ಭೂಮಿಗೋಳದ ಮೇಲೆ ಪಾರಿವಾಳ.
ಅಂತರಿಕ್ಷದಲಿ ಅಂತರಲಾಗ ಹಾಕುವದು
ಸುತ್ತುವದು ಏಳುಕಡಲ !
ನೂರು ಕಂದರ ದಾರಿ ಗಿರಿಶಿಖರಗಳನೇರಿ
ನಿಂತಿರುವ ಮನಸು ರಸರೂಪಿಣಿ
ಮೈತುಂಬ ಕಣ್ಣಾಗಿ ನೋಡು ಪ್ರಾಣಿ !
ಹತ್ತುಸಾವಿರ ಹೃದಯ ತೆಕ್ಕನೆಯೆ ತೆರೆದಂತೆ
ಕಂಡರಿಸಿ ಮನದಲ್ಲಿ ಈ ಸರೋವರ
ಮಿಂದಿರುವರೀ ಜಲದಿ ಶಿವನ ಪಾದದ ತಳದಿ

ಯಕ್ಷ ಕಿನ್ನರ ಅಮರ
ಗಂಧರ್ವ ವಿದ್ಯಾಧರ.

## ೨

ಇಳಿದು ಬಾ ಇಲ್ಲಿ ಕವಿತೀರ್ಥದಲ್ಲಿ
ಓ........ಸುಂದರತಮ
ಪಾರಿವಾಳ.
ಅರಳಿರುವದು
ಸಾವಿರ ದಳ ಕಮಲ !

*          *          *          *

ಮಕರಂದ ಮಿಂದ ಮದುವಣಗಿತ್ತಿ
ನಿಂತಿರುವ ಪ್ರಕೃತಿ ಚೆಲುವಿ
ಅಂಗಾಂಗ ತುಂಬಿ ವೈಸೆಳೆವ ರೂಪಿ
ರಂಭೆ ಊರ್ವಶಿ, ರತಿಯರೊಂದುಗೂಡಿ
ಸುತ್ತು ಬನಬನದಲ್ಲಿ ಹಕ್ಕಿ ಪಾತರಗಿತ್ತಿ
ಬೀರುವವು ಇವಳ ಕೀರ್ತಿ !
ಇವಳು ಮುಡಿಯಲ್ಲಿ ಗಂಧದ ಹೂವ ಮುಡಿದಿಹಳು
ಎದೆತುಂಬ ಅರಳಿಹವು ಪಾರಿಜಾತ.
ನೂರು ಸಾವಿರ ಕಣ್ಣ ಹೊತ್ತು ಕುಣಿಯುವ ನವಿಲು
ತೆರೆದು ಬರುವದು ಇವಳ ಎದೆಬಾಗಿಲ
ಮರಗಳಲಿ ಗಾಳಿ ಕೊಳಲೂದುವದು
ಇಲ್ಲಿ ಒಡನಾಡಿಗಳು ಗಿಳಿಕೋಗಿಲ
ಓ ........ ಇಳಿದು ಬಾ, ಬಾರ ಪಾರಿವಾಳ.

—ಸಿದ್ದಣ್ಣ ಮಸಳಿ

# ? ? ?

ಒಂದಲ್ಲ ಒಂದು ದಿನ ಪ್ರತಿಯೊಬ್ಬನೂ ಬರಲೆ ಬೇಕಾದ ಕಾಡು
ಲಕ್ಷಕೊಬ್ಬನೋ ಇಬ್ಬರೋ ಆಗೊಮ್ಮೆ ಈಗೊಮ್ಮೆ ಕಾಡೊಳಗೆ ಹೋಗದೆ
ತುಳಿಯುವರು ಗಿಡದ ಮಗ್ಗುಲ ಬಳಸು ಜಾಡು—
ಯಾವ ಪಾಪಿಗು ಬೇಡ ಇಂಥ ಪಾಡು !
ಮಂಡೆಯೊಳಗೇ ಸುರುವು ಪಂಜು ಬೆಳಕಿನ ಕೇಳಿ
ಗಾಜಿನಂಗಡಿಯೊಳಗೆ ಜೋಡಿಗೂಳಿ.
ತಮಟೆ ಮದ್ದಲೆ ತುಡಿತ ಇರುಳ ನೆರಳಿನ ಕುಣಿತ ಲಕ್ಷರಾವಣರಿರುವ
ಯಕ್ಷಗಾನ.
ಎಲೆಯ ಸುಪ್ಪತ್ತಿಗೆಯ ಜೇನು ನೋವಿನ ನರಳು ಇರುಳುದ್ದ ಬಿದಿರ ಸಿಳ್ಳು
ಮಸ್ತಿಯೇರಿದೆ ಕಣೋ ದೊಂಬರವನಿಗೆ ಪೂರ ಕುಡಿದು ಬಂದಿದ್ದಾನೆ
ಹೊಳೆಕೆಂಡ ಹಂಡೆಕಳ್ಳು
ಸಾಕು ಮಾರಾಯ ಈ ರಸ್ತೆ ಸಹವಾಸ—ಹೆಜ್ಜೆ ಹೆಜ್ಜೆಗು ಚುಚ್ಚಿ ನಗುವ
ಗೊಬ್ಬಳಿ ಮುಳ್ಳು....
ಯಾವ ಪಾಪಿಗು ಬೇಡ ಇಂಥ ಪಾಡು !

* * * *

ನೂರಕೊಬ್ಬನ ಪಾಲಿಗಿದು ಒಗಟು–ಕಾಡಲ್ಲ–ಹುಟ್ಟು ಸಾವಿನ ಗುಟ್ಟ
ಹುದುಗಿಟ್ಟ ಮಾಳಿಗೆ
ಮೊದಲ ಪಬ್ಲಿಕ್ ಪರೀಕ್ಷೆಯಿದು ಇಂಥವರ ಪಾಲಿಗೆ.
ಪಾಠವಾಗಿದೆ ಅಮರ–ಪೊದೆ ಬಳ್ಳಿ ಗಿಡಮರ ಯಸ್ಯಜ್ಞಾನದ ಮಾತು
ತೆಗೆದರೇ ಸಾಕು ಇಡಿಗಂಟ ಬಿಚ್ಚುವದು ತೆಳುನಾಲಿಗೆ
ಕಾಡ ಕಪ್ಪೆದ್ದಿವರ ಗಬಕ್ಕನೆ ಕಬಳಿಸಿದಾಗ ನನಗೆ ಅನಿಸಿದೆ ಒಳಗೆ;
ಖುದ್ದಾಗಿ ನಾಯಕನೆ ಹೊರಟಿದ್ದಾನೆ ಈ ಹೊತ್ತು ದಾಳಿಗೆ
ಶಿಲುಬೆ ಕೆಂಪಿನ ತಟ್ಟೆ ತರುತಾನೆ ಬಾಳಿಗೆ

## ? ? ?

ಕಾಡಿನಾಚೆಗೆ ದಾರಿ ಕಾಯೋಣ ಬಾರೋ
ದುಂಡುಮಲ್ಲಿಗೆ ದಂಡೆ  ನೂರು ತಾರೋ
ಸರ್ವಜ್ಞ ಬಂದಾಗ ಹಾಕೋಣ ಕೊರಳಿಗೆ ...

* * * *

And the time is short but waiting is long
ಕಾಯುವುದಿದೆ ನೋಡು ಬಲು ಗೋಳು ಕೆಲಸ
ಎದ್ದವಳೆ ನೆನ್ನೆ ಮುಖಕಷ್ಟು ತಣ್ಣೀರೆರಚಿ ಹೊರಟದ್ದು ಕಂಡೆಯಾ ಹಾಳು ಕಸಮುಸುರೆ ಕೆಲಸ
ಮುಂದೆ ವೈಚಾಚಿ ಮಲಗಿದ್ದ ನೆರಳೆದ್ದು ಕುಳಿತು ಸುಸ್ತಾಗಿ ಬೆನ್ನಿನ ಮೇಲೆ ಮಲಗುತಿದೆ ಬಾರೊ ಮನೆಗೆ
ಸರಿಯಾಗಿದಾನೆ ಆಸಾಮಿ ಈ ಮೂಢ ಜನಕೆ
ಬೀದಿ ದಾಸಯ್ಯ ನುಡಿದುದೂ ವೇದ-ಇವರ ತಲೆ ಚಿಗುರದೊನಕೆ........
ಚೆನ್ನಾಗಿ ಕೈಕೊಟ್ಟನಲ್ಲವೆ ಮೆಸಯ್ಯ
ಒಪ್ಪಿಕೋ ದಾಸಯ್ಯ............ !
ಜನ ರೇಗುತಿದ್ದಾರೆ—ಜೀವ ಸಹಿತ ಬಿಡರೋ ನನ್ನ ನೀ ಬರದಿದ್ದರೆ
ಹಾವು ಡಾಮರ ತಲೆಯ ಮಣಿಯಾಗಿ ಬಾರೋ ಬಾ ದೊರೆ !

* * * *

ಅದೊ ಬಂತು ಮೆರವಣಿಗೆ ಕೇಳು ನಂದೀಕೋಲ ಝುನಕ ಝುಲ್ಲು
ಅಲಗ ಮೊನೆಸಿಳ್ಳು ಪೋಲೀಸ್ ವಿಸಲ್ಲು
ನೋಡಲ್ಲಿ ಮೋಟಾರು ಬೈಸಿಕಲ್ಲಿನ ಮೇಲೆ ಬಂದ ಸಮವಸ್ತ್ರಧಾರಿ
ಇನ್ನೇನು ಬಂತು ಜಂಬೂ ಸವಾರಿ....
ಏನಿದೆಂತಹ ಮೋಸ !
ನಾವು ನೆರೆದಿದ್ದು ಚಕ್ರವರ್ತಿ ಬರುತಾನೆಂದು ಬಂದದ್ದು ಬೀದಿದಾಸ
ಜೋಲು ಮುಖದಲ್ಲಿ ಬರೆದಿದೆ ಸೋಲು, ವಾರವೇ ಆಯ್ತೇನೊ ಇವ ಕಂಡು ಗ್ರಾಸ

## ? ? ?

ಈ ದಿಗಂಬರ ಚಕ್ರವರ್ತಿಗಿಲ್ಲವೆ ಮೈಯ ಮೇಲೆ ಪರಿವೆ
ಉಟ್ಟು ಬಂದಿದ್ದಾನೆ ಪ್ರಶ್ನೆಗಳ ಅರಿವೆ....

*   *   *   *

ಹಲವರಿಗೆ ಇದು ಕಪ್ಪು ಕಾಡಲ್ಲ ಲಾಲಬಾಗು
ಪ್ಯಾಂಟುಜೋಬಿಗೆ ಕೈಯ ತುರುಕಿ ಬರುವರು ಇವರು
ಬಾಯಿ ಕುರುಕುವುದು ಸಿನಿಮ ಹಾಡು
ಪ್ಯಾಂಟ್ ತೊಟ್ಟ ಮೋಡಗಳು ಬಂದ ಹಾಗೇ
ಹೊರಗೆ ತೇಲುವುವು ತೆಳ್ಳಗೆ—
ಇವರದೆಂಥ ಮೋಜು !
ಇವರ ಕಾಲಿಗೆ ಸಿಕ್ಕಿ ಕೆಡವಲಿಲ್ಲವೆ ನೆಲಕೆ ದಾರಿದಾರದ ಗಂಟು ಗೋಜು ?
ಇವರದೆಂಥ ಮೋಜು !

*   *   *   *

ಕಿಟಕಿ ಗಾಜಿಗೆ ಮುಖವ ನೊತ್ತಿ ನಿಂತಿಹ ಹುಡುಗಿ
ಅಳುತಲಿರುವಳು ಅದೋ ಹದಿನಾರರೆದೆ ನೋವನೆತ್ತಿ
ಕಿಟಕಿಯಾಚೆಗೆ ಕಾಡು ಬೆಕ್ಕಾಗಿ ಕಾದಿದೆ—
ಜೋಕೆ ಬಂದೀತು ಬಳಿ ಮನೆಯ ಮುಂದಿನ ಕಂಬ ಹತ್ತಿ !

—ರಾಮಚಂದ್ರ ಶರ್ಮ

# ಕೆಂಡ-ಕಡಲು

ತಿರುಗು ಕೆಂಡದ ಹೊದಿಕೆ ಕಳಚಿ ಕಲ್ಲಾದ ದಿನ ಮೊದಲಾದ ನಾಟಕವೆ
ಇಲ್ಲಿ ನಡೆದಿದೆ ಈಗ—
ಅದೆ ನೋಡಿ, ಅದೆ ನೋಡಿ, ಅದೆ ರಂಗ, ರಾಗ !
ಹಳತು ಬಲು ಹಳತು ಕೆಂಡ ಕಡಲಿನ ಆಟ
ಎದುರು ಹಾಸಿದೆ ಚೆಲುವು ಕಣ್ಣು ಕೆಣಕುವ ಕಡಲ ಒಡಲ ಬತ್ತಲು ಮಾಟ
ನೀಲಿಯಂಚಿನ ಮಳಲ ಬೆಳ್ಳಿ ಗೆರೆಯೊಳು ನಿಂತೆ
ಮೊದಲ ಮಾನವ ನಾನು ಕೆನ್ಯೂಟನಂತೆ !

*        *        *        *

ಅದೊ ಬಂತು—
ಬಂತು ಓಕುಳಿಗಳಿಗೆ
ಸಂಜೆ ಸೂರ್ಯನ ಬಿಂಬ ನೀರು ಕನ್ನಡಿಯೊಳಗೆ
ಬೆಳೆದ ಎದೆಗುದಿ ಬಯಕೆಯೊಕ್ಷಣಿಕೆ ನೀರಿನಲಿ ಬಲೆ ಹೆಣೆತ
ನೂರುಸಾವಿರ ಕಣ್ಗಳಂಚು ಮಿನುಗಿದ ಕಾನು ಮೀನ ಥಳ ಥಳ ಕುಣಿತ
ತಡೆಯಲಾರದೆ ಬಾಧೆ
ನಾ ಹಡೆದ ಹೆಣ್ಣಾದೆ—
ಸಿಡಿದೊಡೆದು ಎರಡಾದೆ ಏಕಕೋಶದಮೀಬದಂತೆ
ನಟರಾಜ ನಾನೆ ಪ್ರೇಕ್ಷಕನಾಗಿ ನಟನೆ ನೋಡುತ ನಿಂತೆ....

*        *        *        *

ಓ ಬೇಲೀಸೋ........ಓ ಬೇಲೀಸೊ........
(ಕಡಲಿನ ಕರೆ ಒಲವಿನ ಬಲೆ ಆಲಿಂಗನ ಚುಂಬನ)
ಓ ಬೇಲೀಸೊ........ಓ ಬೇಲೀಸೊ........
( ಮೈ ಬೇಸಿಗೆಗೆದೆ ಹಾಸಿಗೆ ತಂಪು ಬಾಹು ಬಂಧನ ! )
ಓ ಬೇಲಿಸೋ........ಓ ಬೇಲೀಸೋ........

( ಕಡಲಿನ ಕರೆ ಒಲವಿನ ಬಲೆ
ಸ·ರಿ ಗ ಮ ಪ ದ ನಿ ಸ ದೊಂದಲೆ ಸರಿಯುತಿಹುದು ಪಕ್ಕಕೆ)
ಓ ಬೇಲೀಸೋ........ಓ ಬೇಲೀಸೋ
(ಕೆಣಕುತ ಕಣ ಕಣ ಮರಳನು
ಎದೆ ಮೈ ಕೈ ಕಲ್ಬೆರಳನು ಕರೆಯುತಿಹುದು ತೆಕ್ಕೆಗೆ ! )

* * * *

ಮನಸೋತ ನಾ ಸೂರ್ಯ ಕಡಲ ನೀರಿನ ಮರೆಗೆ ಬಾನಂಚಿಗಿಳಿದೆ
ಮೊದಲ ಮಾನವ ನಾನು ಹೆಣ್ಣಾಲೆಯ ನೆರಳಾಗಿ ನೀರಿಗಿಳಿದೆ.
ತೋಳ ಬೀಸಿದ ಕಡಲು ತಬ್ಬಿ ಹಿಡಿಯಿತು ನನ್ನ
ಆಳುದ್ದದಲೆಯೊಂದು ತಲೆಯ ನೇವರಿಸಿತ್ತು........
ಸತ್ತವನ ಗುಣಗಾನ ಪಡುವಣದ ನುಡಿಹೊನ್ನು—
ಕ್ಷಣಕ್ಷಣಕು ಕರಗುತಿದೆ
ನೀಲಿಯಂಚಿನ ಮಳಲ ಬೆಳ್ಳಿ ಹಾಸಿಗೆ ಮೇಲೆ ಗುರುತೊಂದು ನೆನೆನೆನೆದು
ಮರುಗುತಿದೆ....

* * * *

ನೀರಿನೊಡಲಿಗೆ ಒಡಲ ಬೆಸೆದು ಪಾತಾಳದಾಳವನಳೆವ ಬಯಕೆ !
ಕಡಲ ಬಸಿರಿನ ನುಣುಪನೊದ್ದೆ ಬೆರಳೊಲು ತಡವಿ ತಾಯ್ಮಳಲ
ಜಾರು ನೆಲದಲಿ ಥಕ ಥಕ ಕುಣಿದು ತಣಿವು ಕಾಣುವ ಬಯಕೆ !
ಮುಳುಗಲೆಳಸಿದೆ ತಳಕೆ
ಪಾತಾಳದಾಳಕ್ಕೆ ಸತ್ಯರತ್ನದ ನಿತ್ಯ ಖನಿಗೆ, ನೆಲೆಗೆ !
ಅದೊ ನೋಡು—
ಆಳು ನೀರಿನ ಕೆಳಗೆ, ಮುತ್ತು ಸುತ್ತಿನ ಒಳಗೆ ಹನಿಬೆಳಕು
ವಜ್ರ ವೈಢೂರ್ಯ ಹೊಳೆಹೊಳೆವ ಹವಳ
ಮತ್ತೆ ಮುಳುಗಿದೆ ನಾನು ನೀರ್ಗತ್ತಲಾಳಕ್ಕೆ
ಕಂಡೆ—

## ಕಂಡ-ಕಡಲು

ನನ್ನ ನಾನೇ ಕಂಡೆ ಎದುರುಗೊಂಡೆ !
ಹಗಲೊಡೆಯ ರವಿಯೊಂದು ಸಣ್ಣ ಬೆಳಕಿನ ಬಂಡೆ
ಏನನೋ ಅರಸುತ್ತ ನಡೆದಿದ್ದ ನನ್ನಂತೆ....

*   *   *   *

ನಿಡಿದುಸಿರನೆಳೆದೊಮ್ಮೆ ಕಡಲು ದಬ್ಬಿತು ತಿರುಗು ಬುಗುರಿ ನೆತ್ತಿಗೆ ಬಿದ್ದ
ನೀರ ಹನಿಯ !
ಸಿಂಗರಿಸಲೆಳಸಿದ್ದ ಸೂರ್ಯ ಮೂಡಲ ಮನೆಯ........
ನೀಲಿಯಂಚಿನ ಮಳಲ ಬೆಳ್ಳಿಗೆರೆಯೊಳು ನಿಂತೆ
ಮೊದಲ ಮಾನವ ನಾನು ಕೆನ್ಯೂಟನಂತೆ !

— **ರಾಮಚಂದ್ರಶರ್ಮ**

# ಭೂಮಿಗೀತ

## ೧

ಹುಟ್ಟು :
ಮಲೆಘಟ್ಟ ಸೋಪಾನ ಕೆಳಪಟ್ಟಿಯಲಿ,
ಉರುಳು, ಮೂರೇ ಉರುಳು ಕಡಲ ಕುದಿತದ ಎಣ್ಣೆ ಕೊಪ್ಪರಿಗೆಗೆ.
ತೆಂಗು ಗರಿಗಳ ಬೀಸಿ ಕೈಚಾಚಿ ಕರೆದಳು,
ಅಡಿಕೆಗೊನೆ ಗಿಲಕಿ ಹಿಡಿದಾಡಿಸಿದಳು.
ಕಬ್ಬಿನಾಲೆಯ ತಿರುಪಿನಲ್ಲಿ ಕುಳಿತೆರೆದಳು ಅಜಸ್ರಧಾರೆಯ
ಕರುಳ ತುಡಿತವನ್ನು.
ಭತ್ತ ಗೋಧುವೆ ರಾಗಿ ಜೋಳ ನೊರನೊರ ಮೌರಿಯಲ್ಲಿ ಮಾಂಸದ
ಹಾಡನೂಡಿಸಿದಳು.
ಗಂಟಿ ಗೋರಟೆ ಜಾಜಿ ಮಂದಾರಮಲ್ಲಿಗೆಯ ಗಂಧ ಗಿರಿಶಿಖರದಲಿ
ಮಲಗಿಸಿದಳು.
ಹಕ್ಕಿಗೊರಳಿಂದುಗುವ, ತುಂಬಿ ಮರ್ಮರವೊರೆವ ಜಾಮೂನುನಾದದಲಿ
ಜಾಳಿಸಿದಳು.
ಆಕಾಶದಲ್ಲಿ ನೋಡದ ವಿಶ್ವರೂಪಕ್ಕೆ ಕೆಳಗೆ ಜೀವಜ್ಯೋತಿ ಕೂಡಿಸಿದಳು.

ಎಳಹರೆಯ :
ಹಾಡಿಯಲಿ ಮರಮರದ ಕೆಳಗೆ ಧೂಪದ ದಟ್ಟಕಾಯಿ
ಚಿಗಿತೆಳನೊಳಕೆ, ನರಳು, ಕೇಕೆ ;
ಮಳೆಮಂತ್ರದಂಡ ಮುಟ್ಟಿದ ತಿಟ್ಟುಸಿಟ್ಟಿನಲಿ ನೆಲವೆಲ್ಲ ನೊಳೆ, ನೊಳಕೆ,
ಕೊನರು, ಸಸಿ, ಗಿಡ, ಹುಲ್ಲು ;
ತೋಟಗೋರಟಿಗೆ ಮೈಯೆಲ್ಲ ಕಾಮನಬಿಲ್ಲ ಬಲ್ಪುಮಾದಕದೀಪ
ಚೆಲ್ಲು, ಗುಲ್ಲು.

ನಂದಬಟ್ಟಲನೆತ್ತಿ ತುಟಿಗಿಟ್ಟು ನರ್ತಿಸಿತು ಅಂದುಗೆಯನಾಡಿಸುತ
ಬಂದ ಭೃಂಗ ;
ಹಿತ್ತಲ ಜಗಲಿಮೇಲೆ ಕುಳಿತು ಘುಮ್ಮಿಕ್ಕಿದೆನು ಕೆಳಗೆ ಮತ್ತೂ ಕೆಳಗೆ,
ತಳಕೆ ಕುಂಗಿ.
ಹಸುರುತೆರೆ ಅಪ್ಪಳಿಸುತಿರೆ ಮೇಲೆ ನೊರೆಕಾರಿ, ಬೀಸುತಿರೆ ಬಿರುಗಾಳಿ,
ಗುಡುಗು ಮೊಳಗೆ ;
ತಣದಾಣಿಮುತ್ತುಗಳ ಮತ್ತ ದೀಪ್ತಿಗೆ ಕಣ್ಣು ಕುಕ್ಕಿ ಕುರುಡಾಡಿದೆನು
ಸಂಜೆವರೆಗೆ.
ಬುಂಜೆಗಂಟೆದ್ದ ತುಟಿ ಕಿತ್ತರೂ ಕಲ್ಪನೆ ಹೆಂಡಹೊಂಡದ ಸೆಲೆಯ
ಹುಡುಕುತಿತ್ತು.
ಬೇಲಿ ಮೇಗಡೆ, ಗದ್ದೆಯಂಚಲ್ಲಿ, ತೋಪುಗಳ ಅಂಗುಲಂಗುಲದಲ್ಲಿ,
ತೋಟದೊಳಗೆ
ಎಲ್ಲೆಲ್ಲು ಹೆರಿಗೆಮನೆ : ಬೇನೆ, ಸಂಕಟ, ನಗೆ ; ಕೊರಡು ಚಿಗುರಿದ
ಚೆಲುವು, ಚೀರು, ಕೇಕೆ.
ನರ್ಸುಗಳು ಡಾಕ್ಟರರು ಹೆರಿಗೆಮನೆಯೊಳಹೊರಗೆ ;
ಅವರ ಬೆನ್ನಿಗೆ ಸದಾ ನಾಲ್ಕು ಮಂದಿ ;
ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬಾ ಅಗ್ಗ ;
ಜಾತಕರ್ಮಾದಿ ನಿರತ ಈ ಪುರೋಹಿತಭಟ್ಟ ಅಪರ ಪ್ರಯೋಗದಲಿ
ಪಾರಂಗತ.
ಮರಿಮರಿಯ ಹೊರೆಹೊರೆಗಳಾಡಿದುವು ಮಣ್ಣಿನಲಿ,
ಹೊಟ್ಟೆ ಹೊಸೆದುವು ಜಾರುತೊಗಟೆಯಲ್ಲಿ ;
ರೆಕ್ಕೆ ಬಡಿದುವು ಶೂನ್ಯಬೀದಿಯಲಿ, ಚಪ್ಪಾಳೆಯಿಕ್ಕಿ ಕುಣಿದುವು
ಮೋರಿ ಮೋರಿಯಲ್ಲಿ.
ಮಧ್ಯಾಹ್ನದುರಿಬಿಸಿಲು ಹೆತ್ತ ಹೆಣಬಣಬೆಗೂ ಪಾಚಿಗಟ್ಟಿದ
ಜಿಗಣೆ ಜೀವ ಹಲವು.

ಆಹ, ಪ್ರಾತಃಕಾಲದಲ್ಲಿ ಬೆಳಕಿನ ದಾಹ :
ಯಮುನಾಂಭದಲ್ಲಿ ಕಾಳಿಂದಿಹೆಡೆಮಣಿಯಾಟ.
ಕದಕದಕೆ ಕಿಟಕಿಕಿಟಕಿಗೆ ಕಣ್ಣು, ಮನೆ ಕಣ್ಣು, ಊರೆಲ್ಲ ಕಣ್ಣು,
ಕಾಡೆಲ್ಲ ಕಣ್ಣು :
ತಿರುಗಿತ್ತು ಮಗುವಾದರಿಯ ಕ್ಯಾಮರಾಕಣ್ಣು.
ರೀಲುರೀಲನು ಜಡಿದುಗಿಡಿದ ಕತ್ತಲೆ ಕೋಠಡಿ ಮೇಲೆ ಮಸ್ಲಿನ್ ಪರದೆ
ಹಾಸುತಿತ್ತು.
ಒಳಹೊರಗುಗಳ ಅಳಿವೆಯಲ್ಲಿ ಮೊರೆವ ತರಂಗಮಾಲೆಯಲಿ ಮುತ್ತು-ಬಂಗಾರ
ಹೀರಕ, ಪುಷ್ಯರಾಗ, ಗೋಮೇಧಿಕವು, ಕೆಂಪು, ಹಳದಿ.
ಎಲ್ಲಿ ಬಿದ್ದರೆ ಅಲ್ಲಿ ಅಲ್ಲಿ ನಾಗರಬಂಧ ; ತುಟಿಗಗಸ್ತ್ಯಾಧರದ
ತುರುಸು–ತೋಟಿ ;
ಕಣ್ಣುಬಿಟ್ಟರೆ ಬಣ್ಣ ಬಣ್ಣ ಗೊಗ್ಗರುಗಲಭೆ ; ಕಿವಿತುಂಬ ಹಸುರು, ಬಿಳಿ,
ಹಳದಿ, ಕೆಂಪು.
ಹಣೆಗೆ ತುಪ್ಪವ ಹಚ್ಚಿ ಬಿಟ್ಟ ಬೆಕ್ಕಿನ ತರಹೆ ಬುಗುರಿ ತಿರುಗಿದೆ
ಬಾಲ ನಿಮಿರಿಸುತ್ತ ;
ತಾಯಿಗೂ ಮಿಗಿಲಾಗಿ ಎದೆಗವಚಿಕೊಂಡಳೋ ;
ತಿರುತಿರುಗಿ ತನ್ನ ಬಸಿರಲ್ಲಿಟ್ಟು ನವೆದಳೋ ;
ಹಕ್ಕಿಕೊರಳನು ಹಿಚುಕಿ ಲಾಲಿ ಹಾಡಿದಳು;
ಸಸಿಕೊರಳ ಕೊಯ್ದು ತಿಂಡಿಯನು ತಿನಿಸಿದಳು.
ಪ್ರೇಮಧೃತರಾಷ್ಟ್ರನಪ್ಪಿಗೆ ಭಗ್ನ ಬಲಭೀಮ : ಎಲ್ಲು ಕೃಷ್ಣನ ಕಾಪು
ಕಾಣಲಿಲ್ಲ.
ಇವಳೆದೆಗೆ ಬೇರಿಳಿದ ಕಾಲು ನನ್ನದು ; ಬರಿದೆ ನಕ್ಷತ್ರಲೋಕಕ್ಕೆ
ರೈಲು ಬಿಟ್ಟೆ.
ಹೆಂಕುಳಿಯ ಹಾಗೆ ನರಸತ್ತು ಹುಡುಕಿದೆ ಮನದ ಬಚ್ಚಲಲಿ
ಕೊನೆಯಿರದ ಕೊನೆಯ ಬಟ್ಟೆ.

ಈಡಿಪಸ್ಸಿನ ಗೂಢ ಪಾಪಲೇಪಿತ ನಾನು ;
ಟ್ರ್ಯಾಕ್ಟರನ್ನೇರಿದೆನು, ಉತ್ತೆ ಸಿಗಿದೆ.
ಬಿತ್ತಿದೆನು ಬೆಳೆದೆ ಆಟಂಬಾಂಬು ಕಾಳುಗಳ ;
ಮಾರಕಕ್ರಿಮಿಪ್ಸೈರ ಗೋರಿ ನಲಿದೆ.
ಕರೆಯುವುವು ಮತ್ತು ಮತ್ತೂ ಬಾನ ಹಕ್ಕಿಗಳು ;
ಗಾಳಿದರಬಾರಿಗರುವತ್ತು ಕರೆಯೋಲೆ ;
ಕಿವಿಸುತ್ತ ಬಂದು ಕರ್ಣಪಿಶಾಚಿ ಪಿಸುಗುಟ್ಟಿ ಕಾಡಿದುವು
ಮೇಲೆ, ಮೇಲೆ.
ಮಂತ್ರವಾದಿಯ ಕುತಂತ್ರದ ರಗಳೆ ಜೋರಾಗಿ ರೇಗಿದೆನು
ನಾ ಬರಿದೆ ನನ್ನ ಮೇಲೆ.
ಢಿಕ್ಕಿಹೊಡೆದೆನು ಪಂಜರದ ಕಂಭ, ಮಾಡಕ್ಕೆ ; ,
ಚೀರಿ ಬಡಿದೆನು ರೆಕ್ಕೆ, ಕುಕ್ಕಿ ಪುಕ್ಕವ, ಕಿತ್ತು ರಾಶಿ ಹಾಕಿದೆ
ತಿಂಡಿ ತಟ್ಟೆಯೊಳಗೆ :
ಮರಿ ಕುದುರೆ ಕೆನೆದು ಕುಣಿದಿತ್ತು : ಸುತ್ತಲು ಹುಲ್ಲು, ಹುರುಳಿ ;
ಬಂಗಾರ ಕಡಿವಾಣ, ರನ್ನಲಗಾಮು ;
ತಲೆ ಮೇಲೆ ಮೂರು ಬಣ್ಣದ ಮುಕುಟಗರಿ ಬೆಡಗು ;
ಹಿಂದೆ ಕರಕರಕಟರು ಷಾ:ಪಸಂದಿನ ತೊಡವು.
ನಡ ಮುರಿವ ತನಕ ನಡೆದದ್ದೆ ಸುಗ್ಗಿಯ ಕುಣಿತ.
ಆ ಬಳಿಕ :
‘ ಮೈಯೆ ಭಾರ, ಮನವೆ ಭಾರ. ’
ತ್ರಾತ್ರಿಕಿಟೋ ತಿಮ್ಮಣ್ಣಾ,
ಅತ್ತೆಮನೆಗೆ ಸೊಸೆ ಹೋಗುವುದ್ಹ್ಯಾಂಗೊ ತಿಮ್ಮಣ್ಣಾ ?
ತಿರುಪತಿ ತಿಮ್ಮಪ್ಪನ ಪಾದವೇ ಗತಿ ಅಣ್ಣಾ.
ಕಾಸು ಕೊಟ್ಟವರಿಗೆ ಕೈಲಾಸ ತೋರ್ಪಳು ಈಚಲ ಮರದವ್ವ,
ನಮ್ಮವ್ವ,

ವೇದಶಾಸ್ತ್ರ ಪುರಾಣ ಭಜನೆ, ಹರಿಕಥೆ—ಪೂಜೆ ;
ಎಣ್ಣೆ ತೀರುತ್ತಲಿರೆ ಒಡಕು ಹಣತೆಯ ಮುಂದೆ ಬತ್ತಿ ಹೊಸೆತ.
ಆಗಲೂ ಬಿಡಳಿವಳು ತಾಯಿ ಮೆಣಸಿನಕಾಯಿ ಹೊಗೆ ಹಾಕಿ
ತುರಿಯುವಳು ಎದೆಯ ಗರಟೆ ;
ಬಿದಿರು ಮೇಣೆಯ ಮೇಲೆ ಕುಳಿತು ಸಾಗುವ ವೇಳೆ—
ಹೊರಬರಳು ಅವಳಿಗಿನ್ನೊಂದು ಹೆರಿಗೆ.

೨

ನೆಲತಾಯ ಮಾಯಕದ ಅರಗಿನರಮನೆಯಲ್ಲಿ
ಹಸ್ತಿನಾಪುರದ ಸ್ಮೃತಿ ಹೊತ್ತಲಿಲ್ಲ ;
ಮಯನಿರ್ಮಿತವೊ ಸುಯೋಧನರಚಿತವೋ ಅಂತು ಕಡ್ಡಿಗೀರುವ
ತನಕ ಶಂಕೆ ಇಲ್ಲ.
ನಾನಲ್ಲಿ ನಲಿದೆ ; ನುಣ್ಣನೆ ನೆಲದಿ ಜಾರಿದೆನು ;—ಹೊರ ಜಗಲಿಯಿಂದ
ಒಳಮನೆಯ ಕತ್ತಲವರೆಗೆ.
" ಯಾರು ನಿಂದವರಲ್ಲಿ ; ' ತಾಯೆ ? ' ಎಂದೆ. "
" ತಾಯಿ ? ಏನೀ ಭ್ರಾಂತಿ ? ಹೋಗು, ಪೆದ್ದೆ. "
" ಚಂಡಿ, ಚಾಮುಂಡಿ ಪೇಳ್, ಬೇಕಾದುದೇನು ? "
" ಗಂಡುಸಾದರೆ ನನ್ನ ಬಲಿ ಕೊಡುವೆಯೇನು ? "
ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ, ಕಳ್ಳಬಸುರಿನ
ಯಾವ ಜಾಣರಂಭೆ ?
ಗಂಗೆಯಲಿ ತೇಲಿ ಬಂದನು ಕರ್ಣ, ರಾಧೇಯ ; ಸಾಯಿಸಲಿಕಲ್ಲದೆ
ಬರಳು ಕುಂತಿ.
ಮೈಯೆಲ್ಲ ಹೆರಿಗೆಮನೆ ಮಸಣ ಇವಳಿಗೆ, ಸ್ವರತಿಸಂಪ್ರೀತೆ ;
ಹುಲಿ, ಚಿರತೆ, ಆನೆ, ಹಸು, ಆಡು, ಕೋಡಗ, ಕತ್ತೆ ;
ಮಾವು, ನೇರಿಳೆ, ಹಲಸು, ಜಾಲಿ, ಜಾಜಿ ;

ಇವು ಇವಳ ಸಹಜಸಂತಾನ,
ಈ ಪೆಡಂಭೂತ ನಾ ಬಂದ ಗಳಿಗೆಯೊಳೀಕೆಗೇಕೆ ಹುಟ್ಟಿತೊ,
ವಿಷಮ ರತಿ ಪಿಪಾಸೆ !

ಬಿಟ್ಟರೋ ಕಾಡಲ್ಲಿ ಕಣ್ಣುಕಟ್ಟಿ ;
ಸುತ್ತಲೂ ಬಿಗಿದಿಟ್ಟು ಮುಳ್ಳು–ತಂತಿ.
ಕುಡಿಯಲುಪ್ಪಿನ ನೀರು ; ತಿನಲು ಬೆಂಕಿಯ ಚೂರು ;
ಕುಣಿಯಲೆಂದೇ ಬೇಡಿ ಕಾಲ ತೊಡವು.

ಆಗಂತುಕನು ನಾನು ಅತಿಥಿ ಸತ್ಕಾರಕ್ಕೆ ಸಾಗಿ ಬಂದರು ಆರುನುಂದಿ ಸಖರು.
ಉರಿವ ಮೇಣದ ಬತ್ತಿ ಸುತ್ತ ಮೇಣದ ಗಡ್ಡೆ ಹೊಳೆ ;
ಬತ್ತಿಯೂ ಕೊನೆಗೆ ಕರಕು, ಕರಕು

ನೆಲತಾಯಿ ಮಲತಾಯಿ.
ಉತ್ತಾನಪಾದನಿಗೆ ಸುರುಚಿ ; ಧ್ರುವನಕ್ಷತ್ರಕ್ಕೆ
ಕಾಡ ಮೂಲಕಲೆ ಪಥ ಆಗಸಕ್ಕೆ,
ಆರಣ್ಯಕರ ಮೌನಮಂತ್ರ ಬಿಚ್ಚಿದ ಬಟ್ಟೆ.
ತೆಗೆದುಕೋ ನೀ ಕೊಟ್ಟ ಎಲ್ಲ ವಸ್ತ್ರವಿಲಾಸ :
ಈ ಕೋಟು, ಈ ಶರಟು, ಈ ಶರಾಯಿ
ಈ ಭಗ್ನ ಜೋಪಡಿಯು ನಿನ್ನದೇ ; ತೆಗೆದುಕೋ ;
ಬತ್ತಲಾಗದೆ ಬಯಲು ಸಿಕ್ಕದಿಲ್ಲಿ.
ಅಲ್ಲದಿರೆ ಬೀದಿಯಲಿ ನಾ ಸರೀಕರ ಕೂಡೆ ತಲೆಯೆತ್ತಿ ನಡೆಯಲಾರೆ.
ಬತ್ತಲಾಗದೆ ಕತ್ತಿ ಕಿತ್ತೆಸೆಯಬಲ್ಲುದೇ ಕವಚ ಕುಂಡಲ
ಹೃದಯದಮೃತಕಲಶ ?

೩

ವಿಶ್ವಾಮಿತ್ರ ಹೇಳಿದ : "ತ್ರಿಶಂಕು, ನಡೆ ಸ್ವರ್ಗಕ್ಕೆ."
ತೊಗಲುಬಾವಲಿ ಮರದ ಜೋಲು ತೊಗಟೆ.
ಕೆಸರಲ್ಲಿ ಹುಗಿದ ಕಾಲನ್ನು ಕೀಳುವುದೆಷ್ಟು ಕಷ್ಟ ಅಷ್ಟೇ ಕಷ್ಟ—

## ಭೂಮಿಗೀತ

ಆಕಾಶಪಂಜರದ ಹೊನ್ನ ಸರಿಗೆಯ ನಡುವೆ ನಡೆವ ಹಗರಣ ಕೂಡ.
ಕೆಸರೋ ಅಸಹ್ಯ, ಹುಟ್ಟಿದ ಕೂಡಲೇ ಕೊಳೆವ ಎಳಕಸದಪಸ್ಮಾರ
ಬಾಲಲೀಲೆಯ ಚಟ್ಟ—
ಮಣ್ಣು, ಪೂರಾ ಮಣ್ಣುಬೊಂಬೆಯಾಗಿದ್ದರದು ಒಂದು ತೆರ;
ಈ ಬೊಂಬೆಯಲ್ಲು ಉಸಿರಿನ ತಂತ್ರ ;
ತಂತ್ರದಾಚೆಗೆ ಶುದ್ಧ ಬೆಳಕು ಮಂತ್ರ—ಫಿತೂರಿ.
ಹೆಜ್ಜೆ ಮೂಡದ ಹಾದಿ ಗಾಳಿಬೀದಿ.
ಇದು ನೋಡು, ಇದು ಕಷ್ಟ : ಧೂಳು ಧೂಳಿಗೆ ಸೇರಿ,
ಗಾಳಿ ಗಾಳಿಗೆ ಕೂಡಿ,
ಬೆಂಕಿ ಬೆಂಕಿಯ ಕೂಡಿ,
ಗಾಳಿಯಲ್ಲುಲುಹು, ಆಕಾಶದಲ್ಲಾಕಾಶ ಬೆರೆತು ಹೋದರೆ ಇವಕ್ಕೇನು ಧಾಡಿ ?
ಏನೊ ಉಳಿವುದು ಮತ್ತೆ ; ಒಂದು ವಿದ್ಯುತ್ತಂತಿ :
ತಾರೆನೀಹಾರಿಕೆಗಳಾಚೆಯ ಸಮಾಚಾರ ;
ಪಾತಾಳದಾಳದಿಂದೆದ್ದು ಬರುವ ವಿಕಾರ ;
ಒಂದನೊಂದಕೆ ಕೂಡಿಸಾಡಿಸುವ ಕುಣಿಸುವ ಚಮತ್ಕಾರ.
ಕೆಲರು ಹೇಳುವರು ಸ್ವಿಚ್ಚೆಲ್ಲೋ ತಿಳಿಯದೆಂದು ;
ಮೂಲದ ಕಛೇರಿಯ ವಿಳಾಸ ಮರೆತಿದೆ ಎಂದು ;
ಇಲ್ಲೆ ಎಲ್ಲೋ ಇರುವುದೆನ್ನುವರು ಉಳಿದವರು.
ಕತ್ತಲಲ್ಲಿ ಕಣ್ಣುಕಾಣದ ಬೀದಿಯಿಕ್ಕಟ್ಟಿನಲಿ
ಗೋಡೆ ತಡಕುತ ಇನ್ನು ತೆವಳಬೇಕು.
ಹೆಳವನ ಹೆಗಲ ಮೇಲೆ ಕುರುಡ ಕೂತಿದ್ದಾನೆ ;
ದಾರಿ ಸಾಗುವುದೆಂತೊ ನೋಡಬೇಕು.

—ಗೋಪಾಲಕೃಷ್ಣ ಅಡಿಗ

# ವ್ಯಕ್ತಿತ್ವ

ಅಮೀಬ, ಗಂಡಭೇರುಂಡ !
ತಾನೇ ರುಂಡ, ತಾನೇ ದಿಂಡ.
ಅರ್ಧನಾರೀಶ್ವರಗಿದು ಪಿಂಡ.
ಜ್ವಾಲೆಯಿದಕೆ ಈ ಸೃಷ್ಟಿಯಗ್ನಿಕುಂಡ.

ಮಲ್ಲಿಗೆ, ತಾವರೆ, ಕುಂಕುಮ ಕೇಸರ :
ಪಾತರಗಿತ್ತಿಯ ಪಕ್ಕವೆ ಆಸರ.
ಹೂವೆ ನಪುಂಸಕ–ಸ್ತ್ರೀ–ಪುಲ್ಲಿಂಗ.
ಗಾಳಿಯ ಕೇಳಿಯೆ ಅದರುತ್ಸಂಗ.

ಸೋಗೆ ನವಿಲಿಗೇ ಮಯೂರ ನರ್ತನ.
ಗಂಡು ಕೋಕಿಲಕೆ ಮಂಜುಳ ಕೂಜನ.
ಸಿಂಹದ ಪಂಚಾನನತೆಯೆ ಗಂಡು.
ವ್ಯಾಘ್ರಗಳುಗ್ರತೆ ಗಂಡು.
ಹುಂಜದ ತುರಾಯಿ ಬಲು ಮೋಜು.
ಹೆಣ್ಣಿಗಿಲ್ಲವೀ ಗೋಜು.
ಪಾರಿವಾಳಕಿಹ ಜಾಂಬಳಿಗೋಣು,—
ಗೋಣಿನ ಕುಣಿತದಿ ಗಂಡನು ಕಾಣು.

ಮನುಕುಲದಲಿ ಹೆಣ್ಣಿಗೆ ಒಯ್ಯಾರ.
ಸಿಂಗಾರ.
ಗಂಡಿಗೆ ಹೆಣ್ಣಿನ ಚೆಲುವೆ ಸಂಚಕಾರ.
ಚಾರುಗಾತ್ರಿ ಕ್ಲಿಯೋಪಾತ್ರಾ,
ಉಂಟು ಮಹಿಳೆಯರಿಗಿದೂ ಒಂದು ಗೋತ್ರ,

## ವ್ಯಕ್ತಿತ್ವ

ಎಲಿಜಬೆತ್ತಳ ಗೌನು,—
ಚುಂಗೆತ್ತಲು ಬೇಕಿಡಿ ಲಂಡನ್ ಟೌನು !

ಜೀವಸರಪಣಿಯ ಕತೆಯೇ ಬೇರೆ !
ಸರಪಣಿಯೊಂದು ಗಣ್ಣು
ಹೆಣ್ಣು.
ಸರಪಣಿಗಣ್ಣಿನ ಬೇರೊಂದು ತುಂಡು
ಗಂಡು.
ಗಂಡೋ ಹೆಣ್ಣೋ ಏನೇ ಇರಲಿ,
ಮೇಲೋ ಕೆಳಗೋ
ಅಡ್ಡೋ ಉದ್ದೋ—
ಗಣ್ಣು, ಗಣ್ಣು, ಗಣ್ಣು.
ನಾಗಮುರಿಗೆ ಮಡಿಕೆಗಳ ಮೋಡಿಯಿದು
ಮುಗಿಲಲಿ ವಿದ್ಯುತ್‌ಕಂಬಿ,
ಇಳೆಯಲಿ ಸಲಾಕೆಗೊಂಬಿ,
ಪಾತಾಳ್ಗಡೆಗಳ ಸಿಂಬಿ.

ಉದ್ದ, ಉದ್ದುದ್ದ, ಉದ್ದ.
ಎದ್ದವ ಎದ್ದ.
ಬಿದ್ದವ ಬಿದ್ದ.
ಇದೇ ರೀತಿಯಲಿ ಬುದ್ಧನು ಉದ್ಬುದ್ಧ.
ಜೀವದ ಸರಪಣಿಯಿದು ಉದ್ದ,
ಉದ್ದುದ್ದ.

ಅದ್ಭುತ, ಸನ್ನುತ, ಕಲ್ಪನಾತೀತ.
ಈಶಕರುಣೆಯದು ಕಲ್ಪನಾತೀತ.

## ವ್ಯಕ್ತಿತ್ವ

ಕರುಣೆಯ ವರ್ಷಾಕಾಲ
ಇಂದ್ರಮಹೇಂದ್ರರ ಜಾಲ,
ಕಲ್ಪತರುವಿನ ಶರತ್ ಕಾಲ.
ವಾಲ್ಮೀಕಿಯ ಕೃತಿ
ದೈವಚಮತ್ಕೃತಿ.
ಕಾಲಿದಾಸನ ಸ್ಫೂರ್ತಿ
ಈಶಕರುಣೆಯ ಸಗುಣ ಮೂರ್ತಿ.
ಕರುಣೆಯಿದು ಅಪರಂಪಾರ,
ಅಜ್ಞೇಯದ ಸಾರ,
ಅದ್ಭುತ, ಸನ್ನುತ, ಕಲ್ಪನಾತೀತ.

ಸಂಕಲ್ಪ.
ಜ್ವಾಲೆಯೂರ್ಧ್ವಮುಖಿ ಕಲ್ಪಾಂತಕಲ್ಪ.
ಭೂಮುವದಕೆ ಅಲ್ಪ,
ಅತ್ಯಲ್ಪ.
ತಾರಾಮಂಡಲಗಳನೂ ಸುತ್ತಿ,
ಚಂದ್ರನೊಳಾಗುತ ಹೂಬತ್ತಿ,
ಸೂರ್ಯನೊಳಿದೊ ದುಃಸಹ ವಿದ್ಯುತ್ ಪಿಂಡ,
ಆದರು ಬೀಜದಿ ತಾನಿದೆ ನಿಗಿ ನಿಗಿ ಕೆಂಡ!
ತನ್ನನು ಸುಟ್ಟದೆ ಲೋಕವನುಳಿಸಿದೆ.
ಅನಂತದೆಡೆ ಕಿರಣಗಳನು ಕಳಿಸಿದೆ
ಸಂಕಲ್ಪ.

ಸಮನ್ವಯ!
ಸೂರ್ಯಚಂದ್ರರ ಸಹೋದಯ.
ಸೃಷ್ಟಿ ಸಂಕಲ್ಪಮಯ, ಕರುಣಾಮಯ.

## ವ್ಯಕ್ತಿತ್ವ

ಇದೆ ಸಂಕಲ್ಪಕೆ ಕರುಣೆ ಜೊತೆ.
ಆಗ ಸಂಕಲ್ಪ ಬರಿ ತೇಜ,
ಸುಡದಿಹ ಓಜ.
ಅಲ್ಲ ಕರುಣೆ ತಪತಪ ತೋಯಿಸುವ ಮಳೆ,
ಅದಕಿದೆ ಬೇರೆ ಕಳೆ !
ಕರುಣೆಯುದಾನಂದದ ಸಂತತ ಧಾರೆ,
ಅದಕಿಲ್ಲವು ಮೇರೆ.

ಸಾಸ–ಕರುಣೆ ಹಾಸು–ಹೊಕ್ಕು,
ಒಂದಕೊಂದು ಜಗದಿ ಸಿಕ್ಕು.
ವ್ಯಕ್ತಿತ್ವದ ಉಗಮವಿಲ್ಲಿ,—
ಸಾಸ–ಕರುಣೆ ಹೊಂದಿದಲ್ಲಿ,
ಸರಲ ರೇಖೆಯೊಂದನಿಂತು
ಊರ್ಧ್ವರೇಖೆ ಛೇದಿಸಿ
ಕೇಂದ್ರಬಿಂದುವಾಯಿತಯ್ಯ !
ಬೆಳೆ, ಅದನಾರಾಧಿಸಿ.

—ವಿನಾಯಕ

# “ ನಾಲ್ಪೇ ಸುಖಮಸ್ತಿ ”

ಸಾಕು,
ನಿಲ್ಲಿಸು ಜಲ್ಪ—
ಓ ಅಲ್ಪ !
ಇದು ಸತ್ಯ, ಇದು ನಿತ್ಯ, ಅಲ್ಲ ಬರಿ ಸಾತತ್ಯ....
ಮೂಡಲಿ ಕಲ್ಪ, ಕಾಣಲಿ ಕಲ್ಪ, ಅಡಗಲಿ ಕಲ್ಪ
ಅದು ಸ್ವಲ್ಪ !
ಶೇಷಿಗೋ೯೯ಽ ಶೇಷನು ತಲ್ಪ
ಅದು ಕಣಾ, ಸಹಸ್ರ ಫಣಾ
ಸಹಸ್ರ ಶೀರ್ಷಽ ಪುರೂಷಃ
ಸಹಸ್ರಾಕ್ಷಃ
ಸಹಸ್ರುಽ ಪಾತ್
ಹತ್ತುದ್ದ × ಹತ್ತಗಲ × ಹತ್ತೇರು.
ಸಾವಿರದ ತತ್ವ ಇದು
ಅಲ್ಲ ನೀರೂ—ಸಾರು
　　ರಸಭೀರು
ನಿನ್ನ ತಾಯಿಯೇ ವ್ಯಭಿಚಾರಿ
ಅಯ್ಯ ಪಾಕಾಚಾರಿ ! ಬೆಲೆ ಭಾರಿ ! ಶುದ್ಧ ವ್ಯಾಪಾರಿ !

* * * *

“ ಓ ಇರುವೆ ! ಎಲ್ಲಿರುವೆ ?
ನಾನು ಸಕ್ಕರೆ ; ಕರೆವೆ....
ಏನೆಂದೆ....
ಕರೆದ ಮೇಲೇಯೆ ಬರುವೆ, ಭಲೆ ಇರುವೆ !

" ನಾಲ್ಪೇ ಸುಖಮಸ್ತಿ "

ಎಲ್ಲಿರುವೆ ಅಲ್ಲೆ ಇರು—
ಅಲ್ಲಿ ನಾನೇ ಬರುವೆ "
" ಓ ಅರಿವೆ !
ಉಟ್ಟು ತೊಟ್ಟರು ತೆರವೆ ;
ನಿನ್ನ ನಗ್ನತೆ ಮರೆವೆ
ಮೆರೆವೆ !
ಕಂಡವರು ಕಣ್ಣು ಮುಚ್ಚಿದರು, ಸರಿ, ಸರಿ,
ಕಾಣದಿದ್ದರು ಅರಿವೆ ....
ಕಂಡಿತವೆ ಖಂಡಿತವು ! ಯಾವುದು ಅಖಂಡಿತವು ? "
" ಓ ಹರವೆ ! ಓ ಹಿಗ್ಗೆ !
ಕ್ಷರಕು ಅಕ್ಷರಕು ನಡುವಿರುವ ಒಂದೇ ಬುಗ್ಗೆ .... "
ಹನಿಗೆ ಹನಿ ಕೂಡಿದರೆ ಹಳ್ಳ—ಓ ಮಳ್ಳ !
ಇದು ನಿನ್ನ ಸಾತತ್ಯ, ಇದು ನಿನ್ನ ಸಾಹಿತ್ಯ.
ಸಾಕು ಬೇಡು ನಿನ್ನಾ ಭತ್ಯ
ಗುಡುಗುಡು ಮುತ್ಯಾ !
ಭಾವರಾಹಿತ್ಯ !
ಸಚ್ಚಿದಾನಂದದಾ ಬಿಂದು ಬಿಂದುವು ಸಿಂಧು
ಎಂದೂ ಎಂದೂ ಎಂದೂ.

— ಅಂಬಿಕಾತನಯದತ್ತ

# ಕವನ ಸಂಕಲನಗಳು

| | | |
|---|---|---|
| ಆಕಾಶಬುಟ್ಟಿ | ಚೆನ್ನವೀರ ಕಣವಿ | ೧--೪--೦ |
| ಮನೆತುಂಬಿದ ಬೆಳಕು | ಸಿದ್ದಣ್ಣ ಮಸಳಿ | ೦-೧೨--೦ |
| ಸೆರೆಯಾಳು | ಚಿದಂಬರ ದೀಕ್ಷಿತ | ೧--೦--೦ |
| ಚಿತ್ರಸೃಷ್ಟಿ | ಸಾಲಿ ರಾಮರಾಯರು | ೧--೮--೦ |

'ಅಂಬಿಕಾತನಯದತ್ತ'ರ

| | | |
|---|---|---|
| ಸೂರ್ಯಪಾನ | .... | ೨--೦--೦ |
| ಹೃದಯಸಮುದ್ರ | .... | ೧--೮--೦ |
| ಮುಕ್ತಕಂಠ | .... | ೧--೮--೦ |
| ಗಂಗಾವತರಣ | .... | ೧--೮--೦ |
| ನಾದಲೀಲೆ | .... | ೧--೮--೦ |
| ಮೂರ್ತಿ ಮತ್ತು ಕಾಮಕಸ್ತೂರಿ | .... | ೦-೧೨--೦ |
| ಕೃಷ್ಣಾಕುಮಾರಿ ಮತ್ತು ಹಾಡು-ಪಾಡು | | ೧--೦--೦ |
| ಮೇಘದೂತ | .... | ೧--೦--೦ |
| ಗರಿ | .... | ೨--೮--೦ |
| ಸಖೀಗೀತ | .... | ೨--೮--೦ |
| ಉಯ್ಯಾಲೆ | .... | ೧-೧೨--೦ |

**ದೊರೆಯುವ ಸ್ಥಳ :**

**ಸಮಾಜ ಪುಸ್ತಕಾಲಯ, ಧಾರವಾಡ**